ರುಜುವಾತು -42

ಸಂ. ಯು. ಆರ್. ಅನಂತಮೂರ್ತಿ

ಕೋಟಿ ಕೋಟಿ ಗ್ರಾಹಕರ ಸಂತಸವೇ ನಮ್ಮ ಸ್ಫೂರ್ತಿ

ಕೆನರಾ ಬ್ಯಾಂಕ್

(ಭಾರತ ಸರ್ಕಾರದ ಉದ್ದಿಮೆ)

ಪ್ರಧಾನ ಕಚೇರಿ, ಜೆ. ಸಿ. ರಸ್ತೆ ಬೆಂಗಳೂರು - ೫೬೦ ೦೦೨

ಸಂಪಾದಕ
ಯು.ಆರ್. ಅನಂತಮೂರ್ತಿ

ವ್ಯವಸ್ಥಾಪಕ ಸಂಪಾದಕ
ಪ್ರಸನ್ನ

ಛಾಯಾ ಚಿತ್ರಗ್ರಾಹಕ
ಕೆ. ಜಿ. ಸೋಮಶೇಖರ್

ಸಹ ಸಂಪಾದಕರು
ವಿಲಿಯಂ
ಬಂದಗದ್ದೆ ರಾಧಾಕೃಷ್ಣ

ವಿತರಣೆ
ಶ್ರೀಧರ್ ರಾವ್ ಎಚ್.
ಗಂಗಾಧರ ಎನ್. ಸಿ.

ಅಕ್ಷರ ಜೋಡಣೆ
ಶ್ರೀಲಕ್ಷ್ಮಿ. ಎಸ್. ಭಟ್
ಸವಿತಾ ಕಾಕಾಲ್
ಪ್ರಮಥ. ಹೆಚ್. ಎನ್.

ಚಂದಾವಿವರ

ಬಿಡಿಪ್ರತಿ	: ೧೩ /-
ವಾರ್ಷಿಕ	: ೪೦ /-
ವಾರ್ಷಿಕ (ಸಂಸ್ಥೆಗಳಿಗೆ)	: ೬೦ /-
ಠೇವಣಿ ಯೋಜನೆ*	: ೫೦೦ /-

* ನಿಮ್ಮ ಠೇವಣಿ ಬ್ಯಾಂಕಿನಲ್ಲಿ ಇಟ್ಟು ಅದು ಗಳಿಸಿದ ಬಡ್ಡಿಯಲ್ಲಿ ರುಜುವಾತು ಕಳುಹಿಸುತ್ತೇವೆ. ನಿಮಗೆ ಬೇಕೆನ್ನಿಸಿದಾಗ ಠೇವಣಿ ಹಣವನ್ನ ಇಡಿಯಾಗಿ ಹಿಂದೆ ಪಡೆಯಬಹುದು.

ಚಂದಾಹಣವನ್ನ ಮನಿ ಆರ್ಡರ್/ ಡ್ರಾಫ್ಟ್ ಮೂಲಕ ಕಳುಹಿಸಬೇಕು. ಚೆಕ್ / ಡ್ರಾಫ್ಟ್ ಮೂಲಕ ಕಳುಹಿಸುವವರು ರೂ ೭/- ಬ್ಯಾಂಕ್ ಕಮಿಷನ್ ಸೇರಿಸಿ ಕಳುಹಿಸಬೇಕು.

ಸೃಜನಶೀಲ ಹೊಸ ಪ್ರಯೋಗಗಳಿಗಾಗಿ,
ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ,
ನಮ್ಮ ಸಾಮಾಜಿಕ ಸಂದರ್ಭದ ಶೋಧಕ್ಕಾಗಿ,
ತ್ರೈಮಾಸಿಕ ಪತ್ರಿಕೆ ..... ರುಜುವಾತು

ರುಜುವಾತು - ೪೨

ಜನವರಿ - ಮಾರ್ಚ್
೧೯೯೩

ಕವಿ - ಕಾವ್ಯ
ಹೆಗ್ಗೋಡು - ೫೭೭ ೪೧೭
ಶಿವಮೊಗ್ಗ ಕರ್ನಾಟಕ
ದೂರವಾಣಿ : 08183-2813, 2713

ಈ ಸಂಚಿಕೆಯಲ್ಲಿ

೬	ಸಂಪಾದಕನ ಟಿಪ್ಪಣಿಗಳು	ಯು. ಆರ್. ಅನಂತಮೂರ್ತಿ
೧೬	ಕೆಂಟುಕಿ ಕೋಳಿಯೂ......	ಮಾಧವ ಐತಾಳ್
೩೯	ಬಾಲ್ಯ ಕಾಲ	ಡಾ. ಸಿದ್ಧಲಿಂಗಯ್ಯ
೫೧	ಮದುವೆಯೆಂಬ ನರಕ	ಪ್ರಸನ್ನ
೫೮	ಕಾದಂಬರಿಯ ಕಲೆ	ಬಿ. ಜನಾರ್ದನ ಭಟ್
೭೦	ತಿಂಗಳ ಕವಿತೆ	ಶಾ. ಬಾಲುರಾವ್ ಶೋಭಾ ಬಿ. ಚಿನ್ನಸ್ವಾಮಿ
೭೮	ಕೃಷ್ಣಚಂದ್ರ ಭಟ್ಟಾಚಾರ್ಯ	ಶಂಕರ ಮೊಕಾಶಿ ಪುಣೇಕರ
೮೧	ಪುಸ್ತಕ ಪರಿಚಯ	ವಿಲಿಯಂ
	ಚಿತ್ರಗಳು	
	ಮುಖಪುಟದ ಚಿತ್ರ	ನಂದಲಾಲ ಬಸು
	ಲಿನೋಕಟ್ ಚಿತ್ರ	ಯೂನುಸ್ ಬಿಮಾನಿ
	ಕುರಿಮರಿ ಮತ್ತು ಗಾಂಧೀಜಿ	ಅಮಿತ್ ಅಂಬಾಲಾಲ್
	ಗಾಂಧೀಜಿಯವರ ರೇಖಾಚಿತ್ರಗಳು	ಪ್ರಸನ್ನ
	ಕೆಂಟುಕಿ ಕೋಳಿ	ಇವಾನ್ ಬಿಲಿಬಿನ್

ಡಾ. ಸಿದ್ಧಲಿಂಗಯ್ಯ, ಕನ್ನಡ ಅಧ್ಯಾಪಕ, ಜ್ಞಾನ ಭಾರತಿ, ಬೆಂಗಳೂರು.

ಮಾಧವ ಐತಾಳ್, ೪೨೩೫, ೪ ನೇ ಮುಖ್ಯರಸ್ತೆ, ಅಂಬೇಕರ ಕಟ್ಟಡ, ಮೊದಲ ಮಹಡಿ, ಸುಬ್ರಹ್ಮಣ್ಯ ನಗರ, ಬೆಂಗಳೂರು - ೨೧

ಬಿ. ಜನಾರ್ದನ ಭಟ್, ಇಂಗ್ಲಿಷ್ ಉಪನ್ಯಾಸಕ, ಸರ್ಕಾರಿ ಪ. ಪೂ. ಕಾಲೇಜು, ಪಡುಬಿದ್ರಿ, ದ.ಕ. ೫೭೪ ೧೧೧

ಶಾ. ಬಾಲುರಾವ್, 'ಕಾವೇರಿ' ೧೩೧ 'ಜಿ ' ಹಂತ, ಲಕ್ಷ್ಮೀನಗರ, ದೆಹಲಿ ೧೧೦ ೦೯೨

ಶೋಭಾ, ದ್ವಿತೀಯ ಬಿ. ಎ., ಎಸ್. ಎಂ. ಎಸ್. ಕಾಲೇಜ್, ಬ್ರಹ್ಮಾವರ, ದ.ಕ.

ಬಿ. ಚಿನ್ನಸ್ವಾಮಿ, ನಂ. ಎಂ. ಎಫ್ ೧೪ /೭ ಬಿ. ಟಿ. ಎಂ. (ಎಸ್ಎಫ್ಹೆಚ್ಎಸ್) ಲೇಜೌಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು ೫೬೦ ೦೭೬

ಶಂಕರ ಮೊಕಾಶಿ ಪುಣೇಕರ, ಪುಣೇಕರ ಬಂಗಲೊ, ಮಾಲಮಡ್ಡಿ ರೋಡ್, ನಂ.೨ ಧಾರವಾಡ ೫೮೦ ೦೦೨೧

ವಿಲಿಯಂ, ೧೫ / ೧೩, ೨ನೇ ತಿರುವು, ನೆಹರು ನಗರ, ಸಾಗರ, ೫೭೭ ೪೦೧ ಶಿವಮೊಗ್ಗ.

ಪ್ರಸನ್ನ, ಹೆಗ್ಗೋಡು ೫೭೭ ೪೧೭, ಸಾಗರ, ಶಿವಮೊಗ್ಗ.

ಯು. ಆರ್. ಅನಂತಮೂರ್ತಿ, ೧೦ ಮಾಧವ ನಗರ, ಮಣಿಪಾಲ ೫೭೬ ೧೧೯

ಸಂಪಾದಕನ ಟಿಪ್ಪಣಿಗಳು

ಗಾಂಧೀಜಿಯ ನೆನಪುಗಳು, ವಿಚಾರಗಳು

ಗಾಂಧೀಜಿಯವರ ಬಗ್ಗೆ ಹೊಸದಾಗಿ ಏನನ್ನಾದರೂ ಹೇಳುವುದು, ಮಾತನಾಡುವುದು ಕಷ್ಟದ ಕೆಲಸ. ಎಲ್ಲರಿಗೂ ಗಾಂಧೀಜಿಯವರ ವಿಷಯ ಅಷ್ಟಿಷ್ಟು ತಿಳಿದಿರುತ್ತದೆ, ಹಾಗಾಗಿ ಕಷ್ಟದ ಕೆಲಸ. ಇವತ್ತು ಪ್ರಪಂಚದಲ್ಲಿ ಯಾವುದಾದರೂ ಫೋಟೋ ತೋರಿಸಿ 'ಇದು ಯಾರು' ಎಂದು ಕೇಳಿದರೆ, ಹೆಚ್ಚು ಕಡಿಮೆ ಎಲ್ಲರೂ ಗುರುತಿಸಿಬಿಡಬಲ್ಲಂತಹ ಒಂದು ವ್ಯಕ್ತಿ ಗಾಂಧೀಜಿ. ಚರ್ಚಿಲ್ಲನ ಮುಖ ಜಗತ್ತಿನ ನೆನಪಿನಿಂದ ಮರೆಯಾಗಬಹುದು, ಲೆನಿನ್ನನ ಮುಖವೂ ಮರೆಯಾಗಿಬಿಡಬಹುದೋ ಏನೋ. ಆದರೆ ಗಾಂಧೀಜಿಯವರದ್ದು ಮರೆಯಾಗದೆ ಉಳಿದು ಬಿಡುತ್ತದೆ. ಅವರ ಕಿವಿ ಅಗಲವಾದದ್ದು, ಮುಖ ಅಷ್ಟೇನೂ ಸುಂದರವಲ್ಲದ್ದು, ಆದರೂ ಪ್ರೀತಿಯನ್ನ ಹುಟ್ಟಿಸಬಲ್ಲ ಮುಖ ಗಾಂಧೀಜಿಯವರದ್ದು.

ಒಮ್ಮೆ ಯಾರೋ ವಿಯಟ್ನಾಂ ದೇಶದ ಮಹಾನ್ ನಾಯಕ ಹೊ-ಚಿ-ಮಿನ್ಹ್ ಹತ್ತಿರ ಹೋಗಿ, ಅವರನ್ನ ಹೊಗಳಲಿಕ್ಕೆಂದು, "ನೀವು ಥೇಟ್ ಗಾಂಧೀಜಿ ತರಹ ಇದ್ದೀರಿ" ಎಂದರಂತೆ. ಹೊ-ಚಿ-ಮಿನ್ಹ್ ತಮಾಷೆಯ ಮನುಷ್ಯ. "ಇರಬಹುದು. ಆದರೆ ನಾನು ಅವರಿಗಿಂತ ಹ್ಯಾಂಡ್‌ಸಮ್ ಇದ್ದೀನಿ" ಅಂದರಂತೆ. ಹೊ-ಚಿ-ಮಿನ್ಹ್ ಅವರದ್ದೂ ಕೂಡಾ ಮರೆಯಲಾಗದ, ಪ್ರೀತಿ ಉಕ್ಕಿಸುವ ಮುಖ.

o o o o o

ಇನ್ನೊಂದು ತಮಾಷೆಯ ಚಿತ್ರ ನನ್ನ ಮನಸ್ಸಿನಲ್ಲಿ ಆಗಾಗ ಹಾಯುತ್ತಿರುತ್ತದೆ. ಗಾಂಧೀಜಿಯನ್ನ ಅವರ ಸಮಕಾಲೀನರ ಜೊತೆ ನಿಲ್ಲಿಸಿ ಫೋಟೋ ತೆಗೆದಿರಿ ಅನ್ನಿ; ಚರ್ಚಿಲ್, ಸ್ಟಾಲಿನ್, ರೂಸ್‌ವೆಲ್ಟ್, ಹಿಟ್ಲರ್ ಇತ್ಯಾದಿ ಮಹನೀಯರನ್ನು ಗಾಂಧೀಜಿಯವರ ಜೊತೆ, ಗಾಂಧೀಜಿಯವರಂತೆಯೇ ಕೌಪೀನಧಲ್ಲಿ ನಿಲ್ಲಿಸಿ ಫೋಟೋ ತೆಗೆಸಿದರೆ ಇವರಲ್ಲಿ ಯಾರು ಅತ್ಯಂತ ಸುಂದರರಾಗಿ ಕಂಡಾರು?



ಖಂಡಿತವಾಗಿ ಗಾಂಧೀಜಿಯವರೇ ಅತ್ಯಂತ ಸುಂದರರು. ಮಿಕ್ಕವರ ಅಟಾಟೋಪಗಳು, ಬಿರುದು ಬಾವಲಿಗಳು, ಅವರ ಬಟ್ಟೆಯ ಜೊತೆಗೇ ಅಳಿದು, ಅವರ ಅಸಹ್ಯ ಬೊಜ್ಜುಗಳು ಮಾತ್ರ ಚಿತ್ರದಲ್ಲಿ ಎದ್ದು ನಿಲ್ಲುತ್ತವೆ. ಗಾಂಧೀಜಿಯವರದ್ದು ಅವರ ಇಳಿವಯಸ್ಸಿನಲ್ಲಿ ಕೂಡಾ, ನೋಡಬಹುದಾದ, ನೀಳವಾದ, ಸುಂದರ ದೇಹ. ಇದೊಂದು ಆಶ್ಚರ್ಯವೇ ಸರಿ! ದೇಹವನ್ನ ದಂಡಿಸಬೇಕು ಎಂದೇ ನಂಬಿದ್ದ ಗಾಂಧೀಜಿಯವರ ದೇಹ, ಸುಖದಲ್ಲಿ ಮುಳುಗಿರುವ ಇತರರ ದೇಹಕ್ಕಿಂತ ಸುಖಿಯಾಗಿ ಆರೋಗ್ಯಕರವಾಗಿ ಕಾಣುತ್ತಿತ್ತು.

ಗಾಂಧೀಜಿಯವರ ಬಗ್ಗೆ ಚಿಂತಿಸಿದಾಗ ಇಂತಹ ಹಲವು ವಿಪರ್ಯಾಸಗಳು ನಮ್ಮ ಗಮನಕ್ಕೆ ಬರುತ್ತವೆ. ಅವರು ಸಂತೋಷದ ಬುಗ್ಗೆಯಾಗಿರುತ್ತಿದ್ದರು, ಚೆನ್ನಾಗಿ ನಗುತ್ತಿದ್ದರು, ಸಹಾನುಭೂತಿ ಪರರಾಗಿದ್ದರು. ನೈತಿಕವಾಗಿ ಮಹಾ ನಿಷ್ಠುರರಾದ ಗಾಂಧೀಜಿಗೆ ನಿಷ್ಠುರವನ್ನ ಬಿಡುವುದು ಹೇಗೆಂದು ತಿಳಿದಿತ್ತು.

o o o o o

ಗಾಂಧೀಜಿಯವರ ಮಾತನ್ನ ಅಕ್ಷರಶಃ ಪಾಲಿಸುತ್ತಿದ್ದವರು ವಿನೋಬಾಭಾವೆ. ಗಾಂಧೀಜಿ ನಡೆದಾಡಬೇಕು ಅಂದರೆ ವಿನೋಬಾ ದೇಶದ ತುಂಬಾ ನಡೆದಾಡಿಕೊಂಡೇ ಇದ್ದು ಬಿಟ್ಟರು; ಉಪವಾಸ ಮಾಡಬೇಕು ಅಂದರೆ ತಿಂಗಳುಗಟ್ಟಲೆ ಉಪವಾಸ ಮಾಡಿಕೊಂಡು ಇರಲು ಶುರು ಮಾಡಿದರು; ರುಜುವಾತು

ಮೌನವ್ರತ ಮಾಡಬೇಕು ಅಂದರೆ ವರ್ಷಗಟ್ಟಲೆ ಮೌನವಾಗಿದ್ದುಬಿಟ್ಟರು. ಗಾಂಧೀಜಿ ಮಾಡಿದ್ದನ್ನೆಲ್ಲಾ ವಿನೋಬಾಭಾವೆ ಕೊಂಚ ಅತಿಯಾಗಿ ಮಾಡುತ್ತಿದ್ದರು. ಎಷ್ಟೆಂದರೂ ಗಾಂಧೀಜಿ ಗೃಹಸ್ಥರು ಅನ್ನುವುದನ್ನ ನಾವು ಮರೆಯಬಾರದು.

ಒಮ್ಮೆ ಕೃಪಲಾನಿಯವರಿಗೆ ಮದುವೆಯಾಗುವ ಆಸೆಯಾಯಿತು. ಕೃಪಲಾನಿಯವರು ಮದುವೆಯಾಗಬೇಕೆಂದಿದ್ದ ಸುಚೇತಾ ಚಿಕ್ಕವರು. ಇದು ತಪ್ಪು, ಇದೊಂದು ರೀತಿಯ ಮೋಹ, ಗಾಂಧೀವಾದಿಯಾದ ಕೃಪಲಾನಿಯವರು ಈ ರೀತಿಯ ಮೋಹಕ್ಕೆ ಒಳಗಾಗಬಾರದು ಎಂದು ವಿನೋಬಾ ಅವರ ವಾದ. ಈ ರೀತಿಯ ವಾದ ವಿವಾದ ನಡೆದಿದ್ದಾಗ ಗಾಂಧೀಜಿ ಕೃಪಲಾನಿಯವರನ್ನ ಕರೆದು ಕೇಳಿದರು; 'ನಿನಗೆ ಅಷ್ಟು ಇಷ್ಟವೇನು ಆಕೆಯನ್ನ ಮದುವೆಯಾಗುವುದು?'

'ಹೌದು'.

'ಹಾಗಾದರೆ ಮದುವೆಯಾಗು' ಅಂದರು ಗಾಂಧೀಜಿ.

○ ○ ○ ○ ○

ಗಾಂಧೀಜಿಯವರ ಆಶ್ರಮದಲ್ಲಿದ್ದ ದಕ್ಷಿಣದೇಶದ ಒಬ್ಬ ಹುಡುಗ, ಆಶ್ರಮದ ಆಸ್ಪತ್ರೆಯಲ್ಲಿ ಹೊಟ್ಟೆನೋವಿನಿಂದ ಬಳಲುತ್ತ ಮಲಗಿದ್ದ. ಗಾಂಧೀಜಿ ರೋಗಿಗಳನ್ನು ನೋಡಿ ಬರಲು ಹೋಗಿದ್ದಾಗ, ಅವನ ಹತ್ತಿರವೂ ಹೋಗಿ, 'ನಿನಗೇನು ಬೇಕು' ಎಂದು ಕೇಳಿದರು. ಅವನು ದಕ್ಷಿಣದ ಹುಡುಗ, ಬಹಳ ದಿನಗಳಿಂದ ಮನೆಬಿಟ್ಟು ದೂರ ಇದ್ದ, 'ನನಗೆ ಟೋಸ್ಟ್ ಜೊತೆ ಕಾಫಿ ಬೇಕು' ಅಂದ. ಗಾಂಧೀಜಿ ಕಾಫಿ ಕುಡಿಯುತ್ತಿರಲಿಲ್ಲ. ಅವರು ಕಾಫಿಯ ವಿರೋಧಿಗಳು. ಆದರೆ ಗಾಂಧೀಜಿ ಸೀದಾ ಕಸ್ತೂರಿಬಾ ಇದ್ದ ಗೃಹಕ್ಕೆ ಹೋದರು. ಕಸ್ತೂರಿಬಾ ನಿದ್ದೆ ಮಾಡುತ್ತಿದ್ದರೆಂದು ಕಾಣುತ್ತದೆ, ತಾನೇ ಕಾಫಿ ಮಾಡಿಕೊಂಡು ತಂದು ಆ ಹುಡುಗನಿಗೆ ಕೊಟ್ಟರು.

ನೈತಿಕ ನಿಷ್ಠುರತೆಯ ಜೊತೆಗೇ ಸಹಿಷ್ಣುತೆಯೂ ಸಾಧ್ಯವಿದ್ದುದ್ದರಿಂದಲೇ, ಗಾಂಧೀಜಿಯವರ ಜೊತೆಗೆ ಮೌಲಾನಾ ಆಜಾದರಿಗೆ ಇರಲು ಸಾಧ್ಯವಾಯಿತು, ನೆಹರೂ ಅವರಿಗೆ ಇರಲು ಸಾಧ್ಯವಾಯಿತು, ರಾಜಾಜಿಯವರಿಗೆ ಇರಲು ಸಾಧ್ಯವಾಯಿತು.

ರಾಜಾಜಿ ಗಾಂಧೀಜಿಯವರಷ್ಟೇ ನಿಷ್ಠುರರು ಹಾಗೂ ತರ್ಕಬದ್ಧವಾದ ಮನುಷ್ಯ. ಅವರಿಬ್ಬರೂ ಬೀಗರು ಕೂಡಾ. ಆದರೂ ಅವರ ನಡುವೆ ಅಂದೆಂತಹ ವ್ಯತ್ಯಾಸ! ಒಬ್ಬರು ಭಾರೀ ಭಾವುಕರಾದರೆ ಮತ್ತೊಬ್ಬರು ಅತಿ ತಾರ್ಕಿಕರು.

ಒಮ್ಮೆ ಅಂಬೇಡ್ಕರ್ ವಿಷಯಕ್ಕೆ ಅಂತ ಕಾಣುತ್ತದೆ, ಗಾಂಧೀಜಿ-ಉಪವಾಸ ಕೂತಿದ್ದರು. ರಾಜಾಜಿಯವರು ಇಂತಹ ಉಪವಾಸ ಮಾಡಬಾರದು, ತಪ್ಪುಗಳಾಗಿದ್ದರೆ ಉಪವಾಸವ್ರತ ಮಾಡಬಹುದಿತ್ತು ಎಂದು ವಾದಿಸಿದರು. ಅಂದು ಗಾಂಧೀಜಿಯವರ ಮೌನವ್ರತ. ರಾಜಾಜಿಯ ಮಾತನ್ನ ಒಪ್ಪಲಿಲ್ಲ ಗಾಂಧೀಜಿ. ಕಡೆಗೆ ರಾಜಾಜಿ; 'ನೀವು ಉಪವಾಸ ಮಾಡುವಾಗ ಏನೇನು ತೆಗೆದುಕೊಳ್ಳುತ್ತೀರಿ? ಮೆನುಕಾರ್ಡ್‌ಕೊಡಿ' ಎಂದರು. ತಾನು ಉಪವಾಸ ಮಾಡುವಾಗ, ಎಷ್ಟುಸಾರಿ ನಿಂಬೆಹಣ್ಣಿನ ರಸ ಕುಡಿಯುವುದು ಇತ್ಯಾದಿಗಳನ್ನೆಲ್ಲಾ ಮೊದಲೇ ನಿರ್ಧರಿಸಿರುತ್ತಿದ್ದರು ಗಾಂಧೀಜಿ. ಅವರು ಉಪವಾಸ ಮಾಡುತ್ತಿದ್ದದ್ದು ಸಾಯಲಿಕ್ಕೆಂದೇನಲ್ಲ, ಹೃದಯವನ್ನು ಗೆಲ್ಲಬೇಕು ಎಂದು ಉಪವಾಸ ಮಾಡುತ್ತಿದ್ದರು ಅವರು. ರಾಜಾಜಿಗೆ ಉಪವಾಸದ ಸಮಯದಲ್ಲಿ ತೆಗೆದುಕೊಳ್ಳುವ ನೀರಿನ ಪ್ರಮಾಣ, ನಿಂಬೆರಸದ ಪ್ರಮಾಣ ಇತ್ಯಾದಿ ಬರೆದಿಟ್ಟ ಚೀಟಿ ತೋರಿಸಿದರು ಗಾಂಧೀಜಿ. ಅದನ್ನ ನೋಡಿದ ರಾಜಾಜಿ, 'ನೀವು ಉಪವಾಸ ಮಾಡಲೇಬಾರದು. ಹಾಗೊಮ್ಮೆ ಉಪವಾಸ ಮಾಡುವುದೇ ಸರಿ ಎಂದಾದರೆ ನೀವು ತೆಗೆದುಕೊಳ್ಳುತ್ತಿರುವುದು ಅತಿ ಹೆಚ್ಚಾಯಿತು' ಎಂದು ಪೆನ್ಸಿಲ್ ತೆಗೆದುಕೊಂಡು 'ಇದು ಬೇಡ, ಇದು ಬೇಡ' ಎಂದು ಗುರುತು ಹಾಕಲು ಶುರುಮಾಡಿದರು. ಗಾಂಧೀಜಿ ಅದೇ ಪೆನ್ಸಿಲ್ ತೆಗೆದುಕೊಂಡು 'Get out of here!' ಎಂದು ತಮಾಷೆಯಿಂದ ರಾಜಾಜಿಯವರನ್ನು ಗದರಿದರು.

o o o o o

ನಮ್ಮ ಸುತ್ತ ಇರುವ ಜನರನ್ನು ಮೂರು ರೀತಿಯ ಜನರನ್ನಾಗಿ ವಿಂಗಡಿಸಬಹುದು. ಒಂದು ರೀತಿಯ ಜನ, ಪ್ರಭುತ್ವದಲ್ಲಿ ನಂಬುವವರು, ಸ್ಥಿತಿವಂತರು, ದರ್ಪದಲ್ಲಿ ನಂಬಿಕೆ ಇರುವವರು. ದೇಶ ಉದ್ಧಾರವಾಗಬೇಕಾದರೆ ದಂಡ ಇರಬೇಕು, ಭಯ ಇರಬೇಕು ಎಂದು ತಿಳಿದವರು. ಗಲ್ಫ್ ಯುದ್ಧದಲ್ಲಿ ಸದ್ದಾಮನ ವಿರುದ್ಧ ಅಮೆರಿಕನ್ನರು ತೋರಿಸಿದ ಮನಸ್ಥಿತಿ ಇದು. ನಮ್ಮ ನಮ್ಮ ಮನಸ್ಸುಗಳನ್ನ ಹೊಕ್ಕು ನೋಡಿದರೆ ನಮ್ಮ ಎಲ್ಲರಲ್ಲೂ ಈ ಗುಣ ಅಷ್ಟಿಷ್ಟು ಇರಬಹುದು.

ಈ ಗುಣ ಇದ್ದವರನ್ನ ನಾವು, ದೊಡ್ಡವರು, ಆಳುವ ಶಕ್ತಿ ಇರುವವರು ಎಂದು ತಿಳಿಯುತ್ತೇವೆ. ಬ್ಯಾಂಕುಗಳ ಚೇರ್‌ಮನ್ನರು ಹಾಗಿದ್ದರೆ ನಮಗೆ ಇಷ್ಟವಾಗಬಹುದು, ಕಾಲೇಜಿನ ಪ್ರಿನ್ಸಿಪಾಲರು ಹಾಗಿದ್ದರೆ ಖುಷಿಯಾಗಬಹುದು.

ಇಂಥವರಲ್ಲಿ ಒಳ್ಳೆಯ ಗುಣಗಳನ್ನ ನಾವು ಹುಡುಕಿ ತೆಗೆಯುತ್ತೇವೆ. ಬಹಳ ನಿಷ್ಠುರಿಯಾದ ಒಬ್ಬ ಮನುಷ್ಯ ಅಪರೂಪಕ್ಕೊಮ್ಮೆ ನಕ್ಕಾಗ ಅದೇ ಒಂದು ಸುದ್ದಿಯಾಗಿಬಿಡುತ್ತದೆ. 'ಮಾವೋತ್ಸೆತುಂಗ್ ಇಂದು ಮುಗುಳುನಕ್ಕ!' ಎನ್ನುವುದು ಒಂದು ಸುದ್ದಿ!. ಇಂತಹ ಅಪರೂಪಗಳನ್ನ ಆಯ್ದು ನಾವು ಆತನ ವ್ಯಕ್ತಿತ್ವವನ್ನು ಕಟ್ಟಲು ಶುರುಮಾಡುತ್ತೇವೆ. ಒಟ್ಟಾರೆಯಾಗಿ ಪ್ರಪಂಚ ನಡೆಯಲಿಕ್ಕೆ ದರ್ಪ, ಶಿಕ್ಷೆ ಅಗತ್ಯ ಎನ್ನುವುದು ಒಂದು ತತ್ವ, ಒಂದು ನಂಬಿಕೆ.

ಚರ್ಚಿಲ್ ಗಾಂಧೀಜಿಯನ್ನು ಎದುರಿಸಿದಾಗ 'Half naked Fakir'! ಎಂದು ಜರೆಯುತ್ತಾರೆ. ಚರ್ಚಿಲ್ ಪ್ರಭುತ್ವದಲ್ಲಿ ನಂಬಿಕೆಯುಳ್ಳ ಮನುಷ್ಯ. ಗಾಂಧೀಜಿ ಪ್ರಭುತ್ವ ಕಟ್ಟಲಿಕ್ಕೆ ನಾಲಾಯಕ್ಕಾದ ಮನುಷ್ಯ ಎಂದು ಚರ್ಚಿಲ್ ತೀರ್ಮಾನವಾಗಿತ್ತು. ಆದರೆ ಅದೇ ಚರ್ಚಿಲ್‌ಗೆ ಸ್ಟಾಲಿನ್ ಎದುರಾದಾಗ, ಆತ ಎದೆಗುಂದುತ್ತಾನೆ. 'ಇದು ತಪ್ಪು! ಸ್ವಲ್ಪ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಇರಬೇಕಪ್ಪ' ಎನ್ನುತ್ತಾನೆ. ತನಗಿಂತ ಅತಿರೇಕದಲ್ಲಿ ಪ್ರಭುತ್ವವನ್ನು ನಂಬುವ ವ್ಯಕ್ತಿಯನ್ನ ಕಂಡಾಗ ಚರ್ಚಿಲ್ ಹೆದರುತ್ತಾನೆ.

ಪ್ರಭುತ್ವವನ್ನು ನಂಬುವವರದ್ದು ಒಂದು ವರ್ಗವಾದರೆ, ಎರಡನೆಯ ವರ್ಗದ ಜನರನ್ನು ನಾನು ಶಾಸ್ತ್ರದವರು ಎಂದು ಕರೆಯುತ್ತೇನೆ. ಶಾಸ್ತ್ರದವರು ಅಂದರೆ ಸಿಸ್ಟಮ್ ಅನ್ನು ನಂಬುವವರು. ಯಾವುದನ್ನಾದರೂ Rational ಆಗಿ, ಅಂದರೆ ತಾರ್ಕಿಕವಾಗಿ ವಿಚಾರಮಾಡಬೇಕು ಅನ್ನುವವರು ಅವರು; ವೈಚಾರಿಕತೆಯನ್ನ ವೈಭವೀಕರಿಸುವವರು. ನಮ್ಮ ಹಲವು ಅತ್ಯುತ್ತಮ ಮನಸ್ಸುಗಳು ಈ ರೀತಿಯ ಮನಸ್ಸುಗಳು. ಈ ಜನರ ಆಸೆಯೇನೆಂದರೆ ಪ್ರಪಂಚದ ಸುವ್ಯವಸ್ಥೆಗಾಗಿ ಒಂದು Perfect ಆದ ಕಾನೂನನ್ನು ಸೃಷ್ಟಿಸುವುದು, Perfect ಆದ ಸಿಸ್ಟಮ್ ಅನ್ನು ಸೃಷ್ಟಿಸುವುದು, ಆದರೆ ಈ ರೀತಿಯ ತಾರ್ಕಿಕತೆ ಅಥವಾ ವೈಚಾರಿಕತೆಯಲ್ಲಿ ಕೂಡಾ ಅತಿರೇಕವಿದೆ.

ಇವೆರಡೂ ಅಲ್ಲದ ಮೂರನೆಯ ರೀತಿಯ ಜನರಿರುತ್ತಾರೆ. ಅವರು ಉತ್ಸಾಹಿಗಳು ಹಾಗೂ ಮುಗ್ಧರು; ಬಹಳ ಸುಲಭವಾಗಿ ಹಾಸ್ಯಾಸ್ಪದ ವ್ಯಕ್ತಿಗಳಾಗಬಲ್ಲವರು. ಆದರೆ ಈ ಪ್ರಪಂಚವನ್ನ ಬದಲು ಮಾಡಿದವರೆಲ್ಲಾ ಈ ಮೂರನೆಯ ರೀತಿಯ ಜನರೇ ಹೌದು. ಅವರನ್ನ naive ಎಂದು ಕರೆಯಿರಿ ಬೇಕಾದರೆ. ಏನಾದರೂ ಆಗುತ್ತದೆ, ಯಾವುದೋ ಒಂದು ಸತ್ಯ ಸಾಧ್ಯ ಎನ್ನುವ ಶಿಶು ಸಮಾನವಾದ ಮುಗ್ಧ ನಂಬಿಕೆ ಅವರಲ್ಲಿ ಇರುತ್ತದೆ.

೦ ೦ ೦ ೦ ೦

ಹತ್ತೊಂಬತ್ತನೆಯ ಶತಮಾನದ ಕಡೆಯಲ್ಲಿ ಇಂಗ್ಲೆಂಡಿನಲ್ಲಿ ಈ ರೀತಿಯ ಜನ ಬಹಳ ಇದ್ದರು. ಅವರನ್ನ ಇಂಗ್ಲೀಷರು Cranks ಅನ್ನುತ್ತಾರೆ. ಬರ್ನಾರ್ಡ್ ಶಾ ಈ ರೀತಿಯ Cranky ಮನುಷ್ಯ. ಸಸ್ಯಾಹಾರ ಮಾಡಬೇಕು ಅಂದ. ಆಗ ಅಲ್ಲಿ ಥಿಯಸಾಫಿಕಲ್ ಮೂವ್‌ಮೆಂಟ್ ನಡೆದಿತ್ತು. ಇಂಗ್ಲೆಂಡಿನಲ್ಲಿ ಆ ಕಾಲದಲ್ಲಿ ಸಸ್ಯಾಹಾರವನ್ನ ಪ್ರತಿಪಾದಿಸುವುದು ತಮಾಷೆಯಾಗಿ ಕೇಳಿಸುತ್ತಿತ್ತು. ಯಾಕೆಂದರೆ ಬ್ರಿಟಿಷ್ ಜನ ಆಳಲಿಕ್ಕೆ ಅರ್ಹರಾಗೋದೇ ರೋಸ್ಟ್ ಬೀಫ್ ತಿಂದಾಗ ಎಂದು ನಂಬಿದ್ದರು. ಈ ರೀತಿಯ ಜನರನ್ನ ನವಯುಗದವರು ಅಂತಾರೆ : New agers. ನಮ್ಮ ಕಾಲದಲ್ಲಿ ಉದ್ದವಾದ ಕೂದಲು ಬಿಟ್ಟುಕೊಂಡ ಹಿಪ್ಪಿಗಳಿದ್ದಾರಲ್ಲ, ಅವರಲ್ಲೂ ಈ ಗುಣ ಇರುತ್ತದೆ. ಇವರು ತಾರ್ಕಿಕವಾದ ವ್ಯವಸ್ಥೆಯನ್ನ ಮೀರಲು ಹವಣಿಸುತ್ತಿರುತ್ತಾರೆ. ಹಾಗಾಗಿಯೇ ಡ್ರಗ್‌ಗಳು ಬಂದವು. ಮೊದಲನೆಯ ಎರಡು ರೀತಿಯ ಜನ ತುಂಬ ಬಲಶಾಲಿಗಳಾದಾಗ, ಈ ಮೂರನೆಯ ರೀತಿಯ ಜನ ಹಾದಿತಪ್ಪಿ ಹೀಗೆಲ್ಲಾ ಆಗುತ್ತಾರೆ.

ಈ ಮೂರನೆಯ ರೀತಿಯ ಜನರಿಂದಲೇ, ಕಾಣ್ಕೆ ಉಳ್ಳವರು, ದಾರ್ಶನಿಕರು ಹುಟ್ಟಿ ಬರುವುದು ವಿಚಿತ್ರವಾದ ಸಂಗತಿ. ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿದ್ದ ಇಂಗ್ಲೆಂಡಿನ ಕವಿ ಬ್ಲೇಕ್ ಈ ರೀತಿಯವನು: ವಿಚಿತ್ರ ಮನುಷ್ಯ. ಅವನಿಗೆ ಬೆತ್ತಲೆ ಇರುವುದರಲ್ಲಿ ನಂಬಿಕೆ. ತನ್ನ ಹೆಂಡತಿಗೆ, 'ನಾವುಗಳು ಮನೆಯಲ್ಲಿ ಬೆತ್ತಲೆಯಾಗಿಯೇ ಇರಬೇಕು' ಎಂದಿದ್ದ. ಆ ಶತಮಾನದಲ್ಲೆ ಅತ್ಯಂತ ಮಹತ್ವದ ಸಂಗತಿಗಳನ್ನ ಕಂಡವನು, ಕಾಣಿಸಿದವನು ಎಂದರೆ ಬ್ಲೇಕ್.

ಹಾಗೆಯೇ ರಾಮಕೃಷ್ಣ ಪರಮಹಂಸರು ನವಯುಗದವರು. ನನ್ನ ಹತ್ತಿರ ರಾಮಕೃಷ್ಣರ ಒಂದು ಚಿತ್ರವಿದೆ. ಇನ್ನೇನು ಭಾವಸಮಾಧಿಯಲ್ಲಿ ಪ್ರವೇಶಿಸಲು ಸಿದ್ದರಾಗಿದ್ದಂತೆ ರಾಮಕೃಷ್ಣರ ಭಂಗಿಯಿದೆ. ಅವರೇನಾದರೂ ಬಿದ್ದು ಬಿಟ್ಟಾರು ಎಂದು ಹಿಡಿದುಕೊಳ್ಳಲು ತಯಾರಾಗಿ ಬಲಿಷ್ಠನಾದ ವ್ಯಕ್ತಿಯೊಬ್ಬ ಅವರ ಹಿಂದೆ ಇದ್ದಾನೆ. ಅವರ ನೆವ್ಯೂ ಅಂತ ಕಾಣುತ್ತದೆ. ಎದುರಿಗೆ ಕೇಶವ ಚಂದ್ರಸೇನ್ ಇತ್ಯಾದಿ

હે રામ

ಬ್ರಹ್ಮಸಮಾಜಿಗಳು ಕೂತಿದ್ದಾರೆ. ಬ್ರಹ್ಮ ಸಮಾಜಿಗಳು ಎಲ್ಲವನ್ನೂ ಅನುಮಾನದಿಂದ ನೋಡುತ್ತಿದ್ದಾರೆ. ನನ್ನ ಪ್ರಕಾರ ಎರಡು ಯುಗಗಳು ಪರಸ್ಪರರನ್ನು ವಿರೋಧಿಸುತ್ತಿರುವ ಚಿತ್ರವಿದು. ಆದರೆ ಪರಮಹಂಸರು ಮತ್ತು ಅನುಮಾನಿಗಳು ಪರಸ್ಪರರನ್ನ ಹುಡುಕಿಕೊಂಡು ಹೋಗುತ್ತಿದ್ದರು ನೋಡಿ ! ಪರಮಹಂಸರು ಅನುಮಾನಿಗಳ ಮನೆಗೇ ಹೋಗಿ ಕೀರ್ತನೆಗಳನ್ನ ಹಾಡುತ್ತ, ಮೈಮರೆತು ವಿಗ್ರಹಾರಾಧನೆ ಸರಿ ಎಂದು ವಾದ ಮಾಡುತ್ತಿದ್ದರು. ಪರಮಹಂಸರ ಈ ಎಲ್ಲ ಗುಣಗಳನ್ನೂ ಇಟ್ಟುಕೊಂಡು, ಹಾಸ್ಯಾಸ್ಪದ ವ್ಯಕ್ತಿ ಮಾತ್ರವೇ ಆಗಿರಲಿಕ್ಕೆ ಸಾಧ್ಯ. ಗಾಂಧೀಜಿಯ ಎಲ್ಲ ಗುಣಗಳನ್ನೂ ಇಟ್ಟುಕೊಂಡು, ಗಾಂಧೀಜಿಯವರ ಶಕ್ತಿ ಸಾಲದೆ ಹಾಸ್ಯಾಸ್ಪದವಾಗಿ ಕಾಣುವ ವ್ಯಕ್ತಿ ಇರಲಿಕ್ಕೆ ಸಾಧ್ಯ. ಹಾಗಾಗಿಯೇ ಈ temparament ಅನ್ನೆ ಹಾಸ್ಯಾಸ್ಪದವಾದದ್ದು ಎನ್ನುತ್ತೇನೆ ನಾನು. ಆದರೂ ಮೂರನೆಯ ವರ್ಗದ ಈ ಜನರು ಮಧ್ಯಮದಿಂದಲೇ ಬಹಳ ದೊಡ್ಡ ಆಲೋಚನೆಗಳು ಹುಟ್ಟಿಕೊಳ್ಳುತ್ತವೆ ಅನ್ನುವುದೂ ನಿಜವೇ.

o o o o o

ನೆಹರೂರವರು ಗಾಂಧೀಜಿಯವರನ್ನು ಎಷ್ಟೇ ಮೆಚ್ಚಿಕೊಂಡಿದ್ದರೂ, ಅವರ ಖಾಸಗಿ ಜೀವನದ ಕೆಲವು ತೀರ್ಮಾನಗಳು ನೆಹರೂ ಅವರಿಗೆ ಹಾಸ್ಯಾಸ್ಪದವಾಗಿಯೇ ಕಂಡಿದ್ದವು. ಭಾರತ ಸ್ವಾತಂತ್ರವಾದಾಗ ಗಾಂಧೀಜಿಯವರಿಗೆ, ನಾವು ದಾರಿತಪ್ಪುತ್ತಿದ್ದೇವೆ ಎಂದು ಆತಂಕವಾಗುತ್ತದೆ. ನೆಹರೂ ಅವರಿಗೆ ಕಾಗದ ಬರೆದು, 'ನನ್ನ ಹಿಂದ್‌ಸ್ವರಾಜ್ಯ ಓದಿದ್ದಿಯಾ ?' ಎಂದು ಕೇಳುತ್ತಾರೆ. ನೆಹರು ತುಂಬಾ ನಯವಾಗಿ, "ರಾಜ್ಯಭಾರ ಮಾಡುವುದಕ್ಕೂ ಹಿಂದ್‌ಸ್ವರಾಜ್‌ನಲ್ಲಿ ನೀವು ಹೇಳುವ ವಿಚಾರಕ್ಕೂ ತಾಳೆ ಬರುವುದಿಲ್ಲ" ಎಂದು ಉತ್ತರಿಸುತ್ತಾರೆ. ಗಾಂಧೀಜಿ ತುಂಬಾ ದುಃಖಿತರಾ...

ಗಾಂಧೀಜಿ ಗೃಹಸ್ಥರು; ಹಲವು ಮಕ್ಕಳನ್ನು ಪಡೆದವರು; ಕಾಮದ ಆಕರ್ಷಣೆಯನ್ನ ಕಂಡ... ಆದರೂ ಕೊನೆಯಲ್ಲಿ ಕಾಮವನ್ನು ತಪ್ಪೆಂದು ತಿಳಿದವರು. ನಾವು ಯಾರೂ ಹಾಗೆ ತಿಳಿದವರಲ್ಲ. ನಾನಂತೂ ಅಲ್ಲ. ಈ ವಿಷಯದಲ್ಲಿ ಗಾಂಧೀಜಿಯವರೊಟ್ಟಿಗೆ ಒಪ್ಪುವುದು ಕಷ್ಟವೇ ಸರಿ. ಪ್ರೇಮ ಜೀವನದಲ್ಲಿ ಸಾರ್ಥಕತೆಯನ್ನ ಕಾಣಬೇಕೆಂದು ಬಯಸುವ ಎಲ್ಲ ಮನಸ್ಸುಗಳೂ ಗಾಂಧೀಜಿಯವರ ಈ ಚಿಂತನೆಗಿಂತ ಭಿನ್ನವಾಗಬೇಕಾಗುತ್ತದೆ.

ವೈಯಕ್ತಿಕ ಕಾಮದ ವಿಷಯದಲ್ಲಿ ಗಾಂಧೀಜಿ ಅಗ್ನಿದಿವ್ಯವನ್ನ ಅನುಭವಿಸಿದವರು. ಅವರ experiment ಗಳ ಬಗ್ಗೆ ಕೇಳಿದರೆ ಬೆಚ್ಚಿಬೀಳಬೇಕಾಗುತ್ತದೆ. ಆದರೂ ಗಾಂಧೀಜಿ ಅಂತಹ ತೀರ್ಮಾನಗಳನ್ನ ಕೈಗೊಂಡಿದ್ದರು. ನವಾಖಲಿಯಲ್ಲಿ ಮತೀಯ ಹಿಂಸೆಯ ವಿರುದ್ಧ ಜನಜಾಗೃತಿ

ರುಜುವಾತು

ಮಾಡಲೆಂದು ಓಡಾಡುತ್ತಿದ್ದಾಗ ಗಾಂಧೀಜಿಗೆ ಕಾಮಕ್ಕೂ ಹಿಂಸೆಗೂ ಸಂಬಂಧ ಇರುವಂತೆ ಕಾಣುತ್ತದೆ. ಕಾಮವನ್ನು ನಿಗ್ರಹಿಸಲೆಂದು ಅವರು ಇಬ್ಬರು ಹುಡುಗಿಯರ ಜೊತೆ ಬೆತ್ತಲೆ ಮಲಗಲು ಶುರುಮಾಡುತ್ತಾರೆ. ಕೃಪಲಾನಿಯವರು ಗಾಂಧೀಜಿಯವರ ಈ ಪ್ರಯೋಗವನ್ನ ವಿರೋಧಿಸುತ್ತಾರೆ. 'ನೀವು ಕಾಮವನ್ನು ಗೆದ್ದಿದ್ದೀರೋ ಇಲ್ಲವೋ ಎಂದು ಪರೀಕ್ಷಿಸಿಕೊಳ್ಳುವಾಗ ಆ ಹುಡುಗಿಯ ಮನಸ್ಸಿನಲ್ಲಿ ಏನೇನು ಅಭಿಪ್ರಾಯಗಳು ಮೂಡಬಹುದು?' ಎಂದು ಕೇಳುತ್ತಾರೆ. ಶಿಷ್ಯರುಗಳ ಮಾತು ಹೌದೆಂದು ಗಾಂಧೀಜಿಗೆ ಅನ್ನಿಸಿ ತಮ್ಮ ಪ್ರಯೋಗವನ್ನ ನಿಲ್ಲಿಸುತ್ತಾರೆ ಅವರು. ಹಿಂಸೆಗೂ, ಕಾಮಕ್ಕೂ ಸಂಬಂಧ ಇದ್ದರೂ ಇರಬಹುದು. ಆದರೆ ಮನುಷ್ಯ ಅದರಿಂದ ಬಿಡುಗಡೆಹೊಂದುವ ಮಾರ್ಗ ಗಾಂಧೀಜಿಯವರು ತಿಳಿದಷ್ಟು ಸರಳವಿಲ್ಲ.

ಗಾಂಧೀಜಿಯವರ ಮುಖ್ಯ ಆಲೋಚನೆಗಳು, ಅಹಿಂಸೆ, ಸತ್ಯ, ಬ್ರಹ್ಮಚರ್ಯೆ, ಅಸಂಗ್ರಹ, ಶರೀರ ಶ್ರಮ, ಅಸ್ವಾದ ಇವುಗಳ ಸುತ್ತ ಹೆಣೆದುಕೊಂಡಿದೆ. ಅಸ್ವಾದ ಎಂದರೆ ಮನುಷ್ಯನು ತನ್ನ ರುಚಿಗಳನ್ನು ಬೆಳೆಸಿಕೊಳ್ಳಬಾರದು ಎಂದು. ಗಾಂಧೀಜಿಯವರಿಗೆ ಗೊತ್ತಿತ್ತು: ಪ್ರಕೃತಿಯ ನಾಶ, Ecological imbalance ಇವೆಲ್ಲ ಆಗಲು ಕಾರಣ ಮನುಷ್ಯನ ರುಚಿ ಬೆಳೆಯುತ್ತಾ ಹೋದುದೆ ಆಗಿದೆ ಎಂದು. ಮನುಷ್ಯನ ರುಚಿ ಬೆಳೆದಂತೆ ಆತನ ಸ್ವಾದ ಅಂದರೆ Consumer ಗುಣ ಬೆಳೆಯುತ್ತಾ ಹೋಯಿತು. ನಾಲಿಗೆಯ ರುಚಿ, ಕಣ್ಣಿನ ರುಚಿ, ಕಿವಿಯ ರುಚಿ ಬೆಳೆಯುತ್ತಾ ಹೋಯಿತು. ಆತ ಹೆಚ್ಚೆಚ್ಚು ಭೋಗಿಯಾಗುತ್ತಾ ಹೋದ. ಗಾಂಧೀಜಿಯವರ ಈ ಮಾತು ಸತ್ಯ. ಆದರೆ ಮನುಷ್ಯನ ಜೀವನದ Excitement ಎಲ್ಲಾ ಬಂದಿರೋದೆ ರುಚಿಗಳಿಂದ. ಸಂಗೀತ, ನೃತ್ಯ, ಶಿಲ್ಪಕಲೆ ಯಾವುದನ್ನೇ ತೆಗೆದುಕೊಳ್ಳಿ, ಮನುಷ್ಯನಲ್ಲಿ ಒಂದು ರೀತಿಯ ಅತೃಪ್ತಿ ಇರುವುದರಿಂದ, ಹೆಚ್ಚು ಹೆಚ್ಚು ಸೌಂದರ್ಯವನ್ನು ಪಡೆಯಬೇಕು ಎನ್ನುವ ಬಯಕೆ ಬೆಳೆಯುತ್ತಾ ಹೋಗುತ್ತದೆ.

ಗಾಂಧೀಜಿ ಸ್ವಾದಕ್ಕೆ ವಿರೋಧಿಗಳು. ಆದ್ದರಿಂದ ನಾವು ಅವರಿಗೆ ಎಷ್ಟೇ lip sympathy ತೋರಿಸಿದರೂ ನಮ್ಮ ಮನಸ್ಸಿನ ಒಳಗೆ ಅವರಿಗೆ ವಿರೋಧ ಇದ್ದೇ ಇರುತ್ತದೆ. ಸ್ವಾದಕ್ಕೆ ನೀವು ವಿರೋಧಿಗಳಾದರೆ ನಿಮ್ಮ ಈ ಬ್ಯಾಂಕುಗಳು ಮುಚ್ಚಿಕೊಂಡು ಹೋಗಬೇಕಾಗುತ್ತದೆ, ಎಂದು ಕಾಣುತ್ತದೆ, ಕೈಗಾರಿಕೆಗಳು ಬೆಳೆಯಲಾರವು, ಲಾಭದ ಕಲ್ಪನೆ ಇರುವುದಿಲ್ಲ.

೦ ೦ ೦ ೦ ೦



ಸ್ವಾದದ ಅಪಾಯ ಇಬ್ಬರಿಗೆ ಗೊತ್ತಿತ್ತು. ಒಂದು ಟಾಲ್‌ಸ್ಟಾಯ್‌ಗೆ, ಮತ್ತೊಂದು ಗಾಂಧೀಜಿಗೆ. ಟಾಲ್‌ಸ್ಟಾಯ್‌ನ ಭಯ ಹುಟ್ಟಿಸುವ ಕತೆಯೊಂದಿದೆ. ಆ ಕತೆಯಲ್ಲಿ ಒಬ್ಬ ತನ್ನ ಹೆಂಡತಿಯನ್ನ ಕೊಂದುಬಿಡುತ್ತಾನೆ. ಕೊಂದ ನಂತರ ತನ್ನ ಕತೆಯನ್ನು ತಾನೇ ಹೇಳಿಕೊಳ್ಳುತ್ತಾನೆ.

ಅವನು ಏನು ಹೇಳುತ್ತಾನೆಂದರೆ ಸಂಗೀತ, ಕಲೆ ಇವೆಲ್ಲವೂ ನಮ್ಮ ಇಂದ್ರಿಯ ಜನ್ಯ ಹಸಿವನ್ನ ಹೆಚ್ಚು ಮಾಡುತ್ತದೆ. ಇಂದ್ರಿಯ ಜನ್ಯ ಹಸಿವುಗಳು ಹೆಚ್ಚಾದಾಗ ನಮ್ಮಲ್ಲಿ ಕೋಪ, ಹಿಂಸಾತ್ಮಕವಾದ ಭಾವನೆ ಎಲ್ಲವೂ ಉಂಟಾಗುತ್ತದೆ ಎಂದು ಅವನು ಹೇಳುತ್ತಾನೆ.

ಮುಂದುವರೆದು, ಹೆಣ್ಣನ್ನ ನಾವು ಗುಲಾಮಳನ್ನಾಗಿ ಮಾಡಿದ್ದೇವೆ. ಗುಲಾಮಳಾದ ಹೆಣ್ಣು ನಮ್ಮ ವಿರುದ್ಧ ತಿರುಗಿ ಬೀಳಬಾರದು ಎಂಬ ಕಾರಣಕ್ಕಾಗಿ ಅವಳಿಗೆ ಎಲ್ಲ ಪ್ರಸಾಧನಗಳನ್ನು, ಎಲ್ಲ ಉಪಭೋಗಗಳನ್ನು, ಸುಂದರವಾದ ಮನೆ, ಕುರ್ಚಿಗಳು, ಕಾರ್ಪೆಟ್‌ಗಳು, ವಸ್ತ್ರ, ಆಭರಣ, ಸಮಸ್ತವನ್ನು ಅವಳಿಗಾಗಿ ಸೃಷ್ಟಿಸುತ್ತಾ ಸೃಷ್ಟಿಸುತ್ತಾ ಅದರಲ್ಲೇ ಅವಳು ಮೋಹಗೊಳ್ಳುವಂತೆ ಮಾಡಿದ್ದೇವೆ ಅನ್ನುತ್ತಾನೆ. ಇದು ಟಾಲ್‌ಸ್ಟಾಯ್ ಹೇಳುವ ವಿಚಾರ. ಟಾಲ್‌ಸ್ಟಾಯ್ ತನ್ನ ಇಳಿಗಾಲದಲ್ಲಿ ಬರೆದಂತಹ ಭಯಾನಕವಾದ ಕತೆ ಇದು.

ಟಾಲ್‌ಸ್ಟಾಯ್‌ನ ಮಾತನ್ನ ಗಾಂಧೀಜಿ ಪ್ರಾಯಶಃ ಒಪ್ಪುತ್ತಾರೆ. ಸ್ವಾದದ ಬೆಳವಣಿಗೆಯಲ್ಲಿ ಹಿಂಸೆ ಇದೆ; ಒಂದು ದೇಶ ಇನ್ನೊಂದು ದೇಶವನ್ನು ಮೆಟ್ಟುವುದಿದೆ, ಒಂದು ಜಾತಿ ಇನ್ನೊಂದು ಜಾತಿಯನ್ನು ಮೆಟ್ಟುವುದಿದೆ. ಎಲ್ಲರ ಸ್ವಾದವನ್ನು ತೃಪ್ತಿಪಡಿಸುವಷ್ಟು ಈ ಭೂಮಿ ಫಲವತ್ತಾಗಲಾರದು. ಹಾಗೆಂದು

ನಾವು ಬಲವಂತ ಹೇರಿದರೆ ಕೇವಲ ಹದಿನೈದು ದಿನದಲ್ಲಿ ಭೂಮಿ ತನ್ನೆಲ್ಲ ಫಲವಂತಿಕೆಯನ್ನ ಕಳೆದುಕೊಂಡು ಬಿಡಬಹುದು. There is a limit to what the earth can grow ಅಲ್ವಾ ?

ಅಮೆರಿಕಾದ ಜನರ ಸ್ವಾದ ನಮಗೆ ಬಂತೆಂದು ಇಟ್ಟುಕೊಳ್ಳಿ. ಈ ಅಮೆರಿಕನ್ನರ ಸ್ವಾದವನ್ನ ಇಡೀ ಪ್ರಪಂಚ ಬರೀ ಒಂದು ವಾರ ಅನುಭವಿಸಿದರೂ ಪ್ರಪಂಚ ಉಳಿಯುವುದಿಲ್ಲ. ಹಾಗಾಗಿ ಸ್ವಾದವನ್ನ ನಾನು ಅನುಭವಿಸುತ್ತಾ, ಇನ್ನೊಬ್ಬ ಅಸ್ವಾದ ಸ್ಥಿತಿಯಲ್ಲಿರಬೇಕು ಎಂದು ಬಯಸಿದಾಗ ಪೈಪೋಟಿ ಶುರುವಾಗುತ್ತದೆ, ದ್ವೇಷ ಶುರುವಾಗುತ್ತದೆ, ಹರತಾಳಗಳು ಶುರುವಾಗುತ್ತದೆ, ಸ್ವಾದಗಳ ನಡುವಿನ ಜಗಳವೇ Strike ಗಳು.

o o o o o

ಗಾಂಧೀಜಿಯವರ ಮಾತನ್ನು ನಾನು ಚಿಂತಿಸುತ್ತಿರುತ್ತೇನೆ. ಆದರೂ ಅಸ್ವಾದದ ಮಿತಿ ಹಾಕಿ ಪರೀಕ್ಷೆಗೆ ಒಳಪಡಿಸಿದರೆ ನಾವುಗಳೆಲ್ಲ ಒಂದು ಗಂಟೆಯೊಳಗೆ ಸೋತಿರುತ್ತೇವೆ. ನಾನು ಬರಹಗಾರ. ಗಾಂಧೀಜಿಯಲ್ಲಿ ನನಗೆ ಗೌರವವಿದೆ. ಆದರೂ ನಾನು ಪೂರ್ತಿ ಪ್ರಾಮಾಣಿಕವಾಗಿ ಅವರ ಬಗ್ಗೆ ಮಾತನಾಡಲಾರೆ. ನಾನು ಅವರಿಗೆ ಹತ್ತಿರವಾಗಲು ಪ್ರಾಯಶಃ ಹೀಗೆ ಮಾತ್ರ ಸಾಧ್ಯವೋ ಏನೋ. ಯಾಕೆಂದರೆ ಗಾಂಧೀಜಿ ನನಗೆ ದೇವರಿಗೆ ಸಮಾನವಾದ ವ್ಯಕ್ತಿ. ಅವರ ಹತ್ತಿರ ಸುಳ್ಳು ಹೇಳುವ ಹಾಗಿಲ್ಲ. ಹಾಗಾಗಿ ನಾನು ಗಾಂಧೀಜಿಗೆ, ನೀವು ಅಸ್ವಾದದ ಬಗ್ಗೆ ಮಾತನಾಡುವುದು ನನಗೆ ಇಷ್ಟವಾಗುವುದಿಲ್ಲ ಅನ್ನುತ್ತೇನೆ.

ಪ್ರಾಯಶಃ ಗಾಂಧೀಜಿಯವರ ಅಸ್ವಾದದ ಮಾತು ಉಡುಪಿಯ ಯಾವ ಶಿವಳ್ಳಿ ಬ್ರಾಹ್ಮಣನಿಗೂ ಇಷ್ಟವಾಗುವುದಿಲ್ಲ. ಶಿವಳ್ಳಿ ಬ್ರಾಹ್ಮಣರ ಅಡುಗೆ ಅಷ್ಟೊಂದು ಸ್ವಾದಿಷ್ಟವಾದದ್ದು.

o o o o o

ಮಾರ್ಕ್ಸ್‌ವಾದ ಅನ್ನುವುದೊಂದಿದೆ. ನಾನು ಜೀವನದ ಸರ್ವಸುಖವನ್ನೂ ಪಡೆಯುತ್ತಿದ್ದೂ ಮಾರ್ಕ್ಸ್‌ವಾದಿಯಾಗಿರಬಹುದು. ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯ ಆಗಿರಲಿಕ್ಕಾಗುವುದಿಲ್ಲ. ಆದರೂ ಮಾರ್ಕ್ಸ್‌ವಾದಿಯಾಗಿರಬಹುದು. ಮಾರ್ಕ್ಸ್‌ವಾದ ಒಂದು ಸಿಸ್ಟಮ್. ಆ ಪ್ರಕಾರ ಪ್ರಪಂಚ ಹೀಗೆ ಇರುತ್ತದೆ, ಇಂತಿಂತಹ ಬದಲಾವಣೆಗಳಾದಾಗ ಪ್ರಪಂಚದಲ್ಲಿ ಇಂತಿಂತಹ ಬದಲಾವಣೆಗಳಾಗುತ್ತವೆ ....., ಇತ್ಯಾದಿ. ಇದು ನಮ್ಮ ಮನಸ್ಸಿನಲ್ಲಾಗುವ ಬದಲಾವಣೆಗಳಲ್ಲ, ಸಿಸ್ಟಮ್ಮಿನಲ್ಲಿ ಆಗುವ ಬದಲಾವಣೆಗಳು, ಉತ್ಪಾದನಾ ಸಂಬಂಧಗಳಲ್ಲಿ ಆಗುವ ಬದಲಾವಣೆಗಳು.


Prasanna 93

ಮಾರ್ಕ್ಸ್‌ವಾದದ ಥಿಯರಿಯ ಪ್ರಕಾರ ಪ್ರಪಂಚ ಬದಲಾಗುತ್ತದೆಯಾದ್ದರಿಂದ ನಾನು ಎಂತಹ ಶ್ರೀಮಂತನಾಗಿದ್ದರೂ ಮಾರ್ಕ್ಸ್‌ವಾದಿಯಾಗಿರಬಹುದು. ಮಾರ್ಕ್ಸ್‌ವಾದದ ಸಮಸ್ಯೆಯೆಂದರೆ ಮೊದಲು ಸಿಸ್ಟಮ್ ಬದಲಾಗಿ ನಂತರ ಮನುಷ್ಯ ಬದಲಾಗುತ್ತಾನೆ ಎನ್ನುವ ಅದರ ವಿಚಾರ. ಮಾರ್ಕ್ಸ್‌ವಾದದ ಪ್ರಕಾರ ಉತ್ಪಾದನಾ ಸಂಬಂಧಗಳು, ಮನುಷ್ಯನ ಮನಸ್ಸನ್ನ ನಿಯಂತ್ರಿಸುತ್ತದೆ. ಹಾಗಾಗಿ ಮನುಷ್ಯನ ಮನಸ್ಸಿನಲ್ಲಿ ಬದಲಾವಣೆಯಾಗೋದು ಯಾವಾಗ ಅಂದರೆ, ಶೋಷಿತರಾದವರು ಇಡೀ ವ್ಯವಸ್ಥೆಯನ್ನ ಬದಲಾವಣೆ ಮಾಡುವ ಪ್ರಕ್ರಿಯೆಯನ್ನ ಪ್ರಾರಂಭಮಾಡಿ ಉತ್ಪಾದನಾ ಸಂಬಂಧಗಳನ್ನ ಬದಲಾವಣೆ ಮಾಡಿದಾಗ.

o o o o o

ಗಾಂಧೀಜಿ ಉತ್ಪಾದನಾ ಕ್ರಮದ ಬದಲಾವಣೆಗೆ ಒತ್ತು ಕೊಟ್ಟಿದ್ದರು. ಸಣ್ಣ ಯಂತ್ರಗಳ ಬಗ್ಗೆ ಅವರು ಹೇಳುತ್ತಿದ್ದರು. ದೊಡ್ಡ Factory ನಡೆಸುತ್ತ ಇರುವಾಗ, ಅದನ್ನ ಒಬ್ಬ ಕ್ಯಾಪಿಟಲಿಸ್ಟ್ ನಡೆಸುತ್ತಾ ಇದ್ದರೂ ಒಂದೆ State ನಡೆಸುತ್ತಾ ಇದ್ದರೂ ಒಂದೆ. ಮಾರ್ಕ್ಸ್‌ವಾದದಲ್ಲಿ ಒಂದು ಊನವಿದೆ. ಉತ್ಪಾದನಾ ಸಂಬಂಧಗಳನ್ನ ಬದಲಾವಣೆ ಮಾಡುವಾಗ ಉತ್ಪಾದನಾ ಕ್ರಮಗಳನ್ನೂ ಬದಲಾವಣೆ ಮಾಡಬೇಕು ಎನ್ನುವ Passion ಅದಕ್ಕಿಲ್ಲದೆ ಹೋಯಿತು.

ಉತ್ಪಾದನಾ ಕ್ರಮದ ಬಗ್ಗೆ ಗಾಂಧೀಜಿ ತುಂಬ ಸರಳವಾಗಿ ಹೇಳುತ್ತಿದ್ದರು. ನಾವಿಂದು ಗಾಂಧೀಜಿಗಿಂತ ಮುಂದೆ ಹೋಗಿ ಚಿಂತಿಸಬೇಕಾಗುತ್ತದೆ. ಬರೆ ಚರಕಾದಿಂದ ಆಗುವುದಿಲ್ಲ.

ಹೊಲಿಗೆ ಯಂತ್ರವನ್ನ ನೋಡಿ ಗಾಂಧೀಜಿ ಮೆಚ್ಚಿಕೊಂಡಿದ್ದರು. ಹೊಲಿಗೆ ಯುಂತ್ರ ಎಷ್ಟು ಸುಂದರವಾಗಿದೆ ಎಂದು ಗಾಂಧೀಜಿಗೆ ಅನ್ನಿಸಿಬಿಟ್ಟಿತ್ತು. ಪ್ರತಿಯೊಂದು ಮನೆಯಲ್ಲೂ ಒಂದು ಹೊಲಿಗೆ ಯಂತ್ರ ಇರಬೇಕು ಅಂದರು ಅವರು. ಯಂತ್ರ ಮನುಷ್ಯನನ್ನ ನಿಯಂತ್ರಿಸದೆ, ಮನುಷ್ಯತ್ವದ ಅಧೀನದಲ್ಲಿ ಯಂತ್ರವಿರಬೇಕು ಎಂಬುದು ಗಾಂಧೀಜಿಯವರ ವಿಚಾರವಾಗಿತ್ತು.

o o o o o

ಗಾಂಧೀಜಿ ಮನಃ ಪರಿವರ್ತನೆಗೆ ಹೆಚ್ಚು ಒತ್ತು ಕೊಟ್ಟಿದ್ದವರು. ಗಾಂಧೀಜಿಯವರ ಆಂತರಿಕ ಜೀವನದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಇರಲಿಲ್ಲ ಅಥವಾ ಯಾವ ಸರಕಾರವೂ ತಲೆ ಹಾಕುವುದು ಸಾಧ್ಯವಿರಲಿಲ್ಲ. ಅಷ್ಟೊಂದು ಸರಳವಾದ ಜೀವನ ಅವರದ್ದು. ತಿನ್ನುವುದನ್ನ ಕಡಿಮೆ ಮಾಡಿಕೊಂಡಿದ್ದರು ಅವರು, ಉಡುವುದನ್ನು ಕಡಿಮೆಮಾಡಿಕೊಂಡಿದ್ದರು ಅವರು. ತನ್ನ ಕಾಲವನ್ನು

ಗಾಂಧೀಜಿ ಹೇಗೆ ನಿಯಂತ್ರಿಸಿದ್ದರು, ಹೇಗೆ ನಡೆದಾಡುತ್ತ ಇದ್ದರು ಎಂಬುದನ್ನು ನೋಡಿದರೆ ಅವರಿಗೆ ಯಾವ ಸರಕಾರದ ಗೊಡವೆಯೂ ಇರಲಿಲ್ಲ ಎಂದು ಅನ್ನಿಸುತ್ತದೆ. ಸಿಸ್ಟಮ್ ಅನ್ನು ಬದಲಾವಣೆ ಮಾಡುವ ಜನ ಇರುತ್ತಾರಲ್ಲ, ಅವರಿಗೆ ಮನಃ ಪರಿವರ್ತನೆಯ ಇಷ್ಟೊಂದು ಜರೂರು ಇರುವುದಿಲ್ಲ.

ನಾನು ಗಾಂಧೀವಾದಿ ಎಂದು ಯಾವತ್ತೂ ಹೇಳಿಕೊಂಡಿಲ್ಲ ಯಾಕೆಂದರೆ ಗಾಂಧಿವಾದಿ ಆದರೆ ಕಾಫಿ ಕುಡಿಯುವಂತಿಲ್ಲ, ಬಿಯರ್ ಕುಡಿಯುವಂತಿಲ್ಲ, ಸ್ನೇಹಿತರ ಜೊತೆ ತಮಾಷೆ ಮಾಡುವಂತಿಲ್ಲ. ಇದೆಲ್ಲವನ್ನೂ ನಾನು ಮಾಡುತ್ತೇನೆ. ಆದ್ದರಿಂದ ನಾನು ಗಾಂಧೀವಾದಿ ಅಂತ ಕರೆದುಕೊಂಡ ಕೂಡಲೆ



ತಮಾಷೆಯಾಗಿ ಕಾಣುತ್ತದೆ. It looks hypocritical. Because you cannot do any of these things. ಅದಕ್ಕೇನೇ ನೆಹರು ತನ್ನನ್ನ ಗಾಂಧೀವಾದಿ ಎಂದು ಕರೆದುಕೊಳ್ಳಲಿಲ್ಲ. ಗಾಂಧೀಜಿ ಹೇಳುತ್ತಿದ್ದ ವೈಯಕ್ತಿಕ ಸಂಯಮದ ಯಾವ ಸಂಗತಿಗಳನ್ನೂ ಅವರಿಗೆ ಆಚರಿಸಲಿಕ್ಕೆ ಆಗುತ್ತಿರಲಿಲ್ಲ.

ಆದರೆ ಗಾಂಧೀಜಿಯವರ ಮಕ್ಕಳನ್ನ ನೋಡಿ! ಎಲ್ಲಿದ್ದಾರೆ ಅವರು? ಅದೇ ನೆಹರೂ ಮಕ್ಕಳನ್ನ ನೋಡಿ! ಎಲ್ಲಿದ್ದಾರೆ ಅವರು? ನೆಹರೂಗೆ ಗೊತ್ತಿತ್ತು. ತಮ್ಮ ಮಕ್ಕಳನ್ನ ಸರಿಯಾಗಿ ಬೆಳೆಸಬೇಕು ಅಂತ. ಗಾಂಧೀಜಿ ತಮ್ಮ ಮಕ್ಕಳನ್ನ ದಿಕ್ಕಾಪಾಲಾಗಿ ಮಾಡಿ ಹೋಗಿಬಿಟ್ಟರು.

ಗಾಂಧೀಜಿ ಸತ್ತಮೇಲೆ, ಗಾಂಧೀಜಿಗಿಂತ ನೆಹರೂ ದೊಡ್ಡವರು ಅಂತ ಹೇಳುತ್ತ, ಒಂದು ರೀತಿಯಲ್ಲಿ ನಮ್ಮನ್ನ ನಾವೇ ಮೋಸ ಮಾಡಿಕೊಳ್ಳುತ್ತಿದ್ದೇವೆ. ಅದು ತಪ್ಪು.

o o o o o

ಆದರೆ ಗಾಂಧೀಜಿಯ ಜೊತೆ ಜಗಳವಾಡದೆ ಮಾತನಾಡುವುದು ಆಗುವುದಿಲ್ಲ. ಹಾಗಾಗಿಯೇ ಈಗಿನ ಗಾಂಧೀವಾದಿಗಳ ಹತ್ತಿರ ಹೋದಾಗ ಒಂದು ರೀತಿಯ ಬೇಸರವಾಗುತ್ತದೆ. ಅವರೆಲ್ಲ ಒಂದು ತರಹ Pious ಆಗಿ ಬಿಡುತ್ತಾರೆ. ಸುಳ್ಳು ಅನ್ನಿಸಲು ಶುರುವಾಗುತ್ತದೆ.

o o o o o

ಬಹುಷಃ ಭಾರತೀಯ ಮನಸ್ಸು ಗಾಂಧೀವಾದವನ್ನ ಒಪ್ಪಿಕೊಂಡಿಲ್ಲ ಅಂತ ಕಾಣುತ್ತದೆ. ನವಾಖಲಿ ಇದೆಯಲ್ಲ ಅದೊಂದು ಪವಾಡ. ಶ್ರೀಕೃಷ್ಣನ ಜೀವನದಲ್ಲಿರುವ ಲೀಲೆಗಳ ಹಾಗೆ, ಶ್ರೀ ರಾಮಚಂದ್ರನ ಜೀವನದಲ್ಲಿರುವ ಅದ್ಭುತಗಳ ಹಾಗೆ ನವಾಖಲಿ ಕೂಡಾ ಒಂದು ಪವಾಡ ನನ್ನ ಪ್ರಕಾರ.

ನವಾಖಲಿಯಲ್ಲಿ ಗಾಂಧೀಜಿ ಪಾಯಖಾನೆಯನ್ನ, ಮುಳ್ಳುಗಳನ್ನ ತುಳಿದುಕೊಂಡು ಬರಿಗಾಲಿನಲ್ಲಿ ನಡೆಯುತ್ತ, ಅಲ್ಲಿನ ಮೌಲ್ವಿಗಳಿಗೆ, ಮುಸಲ್ಮಾನರಿಗೆ ಹಿಂಸೆಯನ್ನ ಬಿಡಿ ಎಂದು ಪ್ರಾರ್ಥಿಸಿದರು. ಆರಂಭದ ದಿನಗಳಲ್ಲಿ ಗಾಂಧೀಜಿಯವರ ಮಾತನ್ನ ತಿರಸ್ಕರಿಸಿ ಉಗಿದು ಹೋಗುತ್ತಿದ್ದರು ಅಲ್ಲಿನ ಮುಸಲ್ಮಾನರು. ಗಾಂಧೀಜಿಯವರ ಕಾಲಿನ ಬುಡಕ್ಕೆ ಪಾಯಖಾನೆಯನ್ನ ಮುಳ್ಳುಗಳನ್ನ ಹಾಕುತ್ತಿದ್ದರು, ಗಾಜಿನ ಚೂರುಗಳನ್ನ ಎಸೆಯುತ್ತಿದ್ದರು ಅವರು. ಅದನ್ನ ಗುಡಿಸಿಕೊಂಡು ಗಾಂಧೀಜಿ ಒಬ್ಬರೇ ನಡೆದರು. ಕಡೆಗೂ ಗಾಂಧೀಜಿ ಗೆದ್ದರು. ಆದರೆ ನೋಡಿ ಕೊನೆಯಲ್ಲಿ ಒಬ್ಬ ಹಿಂದೂ ಅವರನ್ನ ಕೊಂದುಬಿಟ್ಟ! ನವಾಖಲಿಯ ಯಾವ ಮುಸಲ್ಮಾನನೂ ಅವರನ್ನ ಕೊಲ್ಲಲಿಲ್ಲ.



ನವಾಖಲಿಯ ಮೌಲ್ವಿಗಳು ಹಾಗೂ ಮುಸಲ್ಮಾನರ ತಿರಸ್ಕಾರಕ್ಕೆ ಒಂದು ಕಾರಣವಿತ್ತು. ನವಾಖಲಿಯ ಸುತ್ತಮುತ್ತ ಇದ್ದ ಜಮೀನ್ದಾರರೆಲ್ಲಾ ಹಿಂದೂಗಳು, ಮುಸಲ್ಮಾನರು ಸಾಮಾನ್ಯ ಬಡವರು. ಅವರ ಸಿಟ್ಟು ಹಿಂದೂಗಳ ಮೇಲಿನ ಸಿಟ್ಟೋ, ಜಮೀನ್ದಾರರ ಮೇಲಿನ ಸಿಟ್ಟೋ ಎಂದು ಹೇಳಲಿಕ್ಕಾಗುವುದಿಲ್ಲ. ಆದರೂ ಗಾಂಧೀಜಿ ಗೆದ್ದರು. ಇದೊಂದು ಪವಾಡ ಎಂತಲೇ ಅನ್ನುತ್ತೇನೆ ನಾನು.

ಸಾಯಿಬಾಬ ಉಂಗುರ ಗಿಂಗುರ ತೆಗೆದು ಕೊಡುವುದು ಪವಾಡವಲ್ಲ, ಗಾಂಧೀಜಿ ಮಾಡಿದ್ದು ಪವಾಡ. ಆದರೆ ನಮಗಾರಿಗಾದರೂ ಇಂದು ನವಾಖಲಿ ಪವಿತ್ರಸ್ಥಳ ಆಗಿದೆಯೇ?

o o o o o

ಯಾಕೆ ಸರಕಾರ ಮುಟ್ಟಿದ್ದೆಲ್ಲಾ ಹೀಗಾಗುತ್ತದೆ? ಸರಕಾರ ಗಾಂಧೀಜಿಯವರನ್ನ ಮುಟ್ಟಿಬಿಟ್ಟಿದ್ದರಿಂದ ಗಾಂಧೀಜಿ ಪವಿತ್ರ ಆಗಲಿಲ್ಲವೋ ಏನೋ. ಇಲ್ಲದಿದ್ದರೆ ನವಾಖಲಿ ಯಾತ್ರಾಸ್ಥಳ ಆಗುತ್ತಿತ್ತು. ಈಗ ಯಾರೋ, ಅವರ ಕುಟುಂಬದವರೊಬ್ಬರು, ಅವರ ಮೊಮ್ಮಗಳೋ ಏನೋ, ಅಲ್ಲೊಂದು ಆಶ್ರಮ ಕಟ್ಟಿದ್ದಾರೆ.

ನನಗೆ ಆಶ್ಚರ್ಯವಾಗುತ್ತದೆ! ಗಾಂಧೀಜಿಯವರ ಇಡೀ ಜೀವನವನ್ನ ತಕ್ಕಡಿಯ ಒಂದು ತುದಿಗಿಟ್ಟು ನವಾಖಲಿಯ ಕೆಲವೇ ದಿನಗಳನ್ನ ತಕ್ಕಡಿಯ ಇನ್ನೊಂದು ತುದಿಗಿಟ್ಟರೆ ನವಾಖಲಿಯೇ ಹೆಚ್ಚು ತೂಗುತ್ತದೆ.

ನಾವು ಪ್ರಾಯಶಃ ಗಾಂಧೀಜಿಯವರನ್ನ ತ್ಯಜಿಸಿದ್ದೇವೆ. ಗಾಂಧೀಜಿಯವರ ನಂತರದ ನಮ್ಮ ಹುಡುಕಾಟ ಕ್ಷಾತ್ರದ ಹುಡುಕಾಟವಾಗಿದೆ. ನಾವು ಕ್ಷಾತ್ರವನ್ನ ಗಳಿಸದೆ ಇರಬಹುದು. ಆದರೆ ಕ್ಷಾತ್ರ ನಮ್ಮ ಹುಡುಕಾಟವಾಗಿದೆ. ನಾವು, ಭಾರತೀಯರು ಕ್ಷತ್ರಿಯರಾಗಿ, ವೈಶ್ಯರಾಗಿ ಬೆಳೆಯಲು ನೋಡುತ್ತಿದ್ದೇವೆ, ಗಾಂಧೀಜಿ ಕನಸು ಕಂಡಿದ ದರಿದ್ರನಾರಾಯಣನಾಗಿ ಅಲ್ಲ.



ಗಾಂಧೀಜಿ, ಅಂಬೇಡ್ಕರ್ ಹಾಗೂ ಸಾಮಾಜಿಕ ನ್ಯಾಯದ ಪ್ರಶ್ನೆ. ಈ ದೇಶದಲ್ಲಿ ಎಲ್ಲವೂ ಹೀನಾಯವಲ್ಲ. ಕೆಲವೊಂದು ಮಹತ್ವದ ಬದಲಾವಣೆಗಳು ಆಗಿವೆ. ಗಾಂಧೀಜಿ ಬದಲು ಗೋಲ್ವಾಲ್ಕರ್ ಸ್ವಾತಂತ್ರ ಸಂಗ್ರಾಮದ ಮುಂಚೂಣಿಯಲ್ಲಿದ್ದರೆ ಏನಾಗುತ್ತಿತ್ತು ಯೋಚಿಸಿ! ಹಿಂದೂ ರಾಷ್ಟ್ರದ ಕಲ್ಪನೆ ಬರೇ ಗೋಲ್ವಾಲ್ಕರ್ ಅಷ್ಟೇ ಅಲ್ಲ, ಹಲವರು ನಾಯಕರನ್ನ ಪುಳಕಿತಗೊಳಿಸಿದೆ. ಲೋಕಮಾನ್ಯ ತಿಲಕರು ಬಹಳ ದೊಡ್ಡವರು. ಆದರೆ ಅವರಲ್ಲೂ ಹಿಂದೂ ದೇಶ ಎಂಬ ಕಲ್ಪನೆ ಇತ್ತು. ಸಾಮಾಜಿಕ ನ್ಯಾಯದ ಪ್ರಶ್ನೆ ಬಂದಾಗ ತಿಲಕರು, ಮುಂದೆ ಹಾಕಿ ಅನ್ನುತ್ತಿದ್ದರು. ಮೊದಲು ದೇಶ ರುಜುವಾತು

ಸ್ವತಂತ್ರವಾಗಲಿ ಆನಂತರ ಸಾಮಾಜಿಕ ನ್ಯಾಯದ ಪ್ರಶ್ನೆ ಎತ್ತಿಕೊಳ್ಳಬಹುದು ಎನ್ನುವುದು ತಿಲಕರ ವಿಚಾರವಾಗಿತ್ತು. ಇದಕ್ಕೆ ತದ್ವಿರುದ್ಧವಾಗಿ ಅಂಬೇಡ್ಕರ್, ಮೊದಲು ಸಾಮಾಜಿಕ ನ್ಯಾಯ ಸ್ಥಾಪನೆಯಾಗಲಿ ಆನಂತರ ಸ್ವಾತಂತ್ರ್ಯದ ಪ್ರಶ್ನೆ ಎತ್ತಿಕೊಳ್ಳೋಣ ಎನ್ನುತ್ತಿದ್ದರು.

ಬ್ರಿಟೀಷರು ಬಿಟ್ಟು ಹೋದ ಜಾಗದಲ್ಲಿ ಈ ದ್ವಿಜರು ಕೂತು ನಮ್ಮನ್ನ ಆಳುತ್ತಾರೆ ಎಂಬ ದಿಗಿಲು ಅಂಬೇಡ್ಕರ್ ಅವರಿಗಿತ್ತು. ಗಾಂಧೀಜಿ ಏನು ಮಾಡಿದರೆಂದರೆ ಏಕಕಾಲದಲ್ಲಿ ಬ್ರಿಟೀಷರ ವಿರುದ್ಧವೂ ಹೋರಾಟ ಶುರುಮಾಡಿದ್ದರು, ದ್ವಿಜರ ವಿರುದ್ಧವೂ ಹೋರಾಟ ಶುರುಮಾಡಿದ್ದರು.

ಒಂದೊಂದು ಸಾರಿ ನೆಹರೂಗೆ ಕೂಡಾ ಆಶ್ಚರ್ಯವಾಗುತ್ತಿತ್ತು. "ಏನಪ್ಪಾ-ನಾವೆಲ್ಲಾ ಒಟ್ಟಾಗಿ ಬ್ರಿಟೀಷರ ವಿರುದ್ಧ ಬಂಡೇಳಬೇಕಾದ ಸಂದರ್ಭದಲ್ಲಿ ಈ ಗಾಂಧೀಜಿ ದೇವಸ್ಥಾನ ಪ್ರವೇಶದ ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ಏನು ಇದರ ಅರ್ಥ" ಎಂದು ದಿಗಿಲು ಬೀಳುತ್ತಿದ್ದರು. ಆದರೆ ಗಾಂಧೀಜಿಗೆ ಗೊತ್ತಿತ್ತು, ನಾವು ರಾಷ್ಟ್ರವಾಗುವುದರೊಟ್ಟಿಗೇ ಸಾಮಾಜಿಕ ನ್ಯಾಯದ ಹೋರಾಟ ನಡೆಸದಿದ್ದರೆ ರಾಷ್ಟ್ರೀಯತೆಯ ಕಲ್ಪನೆ ಫ್ಯಾಸಿಸ್ಟ್ ಆಗುತ್ತದೆ ಎಂದು. ರಾಷ್ಟ್ರೀಯತೆಯ ಪರಿಕಲ್ಪನೆಗೆ ಫ್ಯಾಸಿಸ್ಟ್ ಆಗಬಲ್ಲ ಗುಣ ಇರುತ್ತದೆ. ಹಿಟ್ಲರನ ಜರ್ಮನಿಯಲ್ಲಿ ಆದ ಹಾಗೆ.

For Gandhiji India was both a nation and a Society. For Tilak it was only a Nation. for Ambedkar it was only a Society. ಗಾಂಧೀಜಿಯವರ ಮುಂದಾಲೋಚನೆಯ ಫಲವನ್ನ ನಾವು ಇಂದು ಕಾಣುತ್ತಿದ್ದೇವೆ. ಇವತ್ತಿಗೂ ಈ ದೇಶ ಛಿದ್ರವಾಗದೆ ಉಳಿದಿದ್ದರೆ ಅದಕ್ಕೆ ಈ ದೂರಾಲೋಚನೆ ಕಾರಣ.

ಇಪ್ಪತ್ತೊಂದನೆಯ ಶತಮಾನದಲ್ಲಿ ಗಾಂಧೀಜಿ ನಮಗೆ ಬಹುಶಃ ನಮ್ಮ ಆವರಣದ ವಿಷಯದಲ್ಲಿ ಪ್ರಸ್ತುತವಾಗುವುದು ಅಂತ ಕಾಣುತ್ತದೆ.

ಎಲ್ಲರಿಗೂ Political party ಕಟ್ಟಲಿಕ್ಕೆ ಸಾಧ್ಯವಿಲ್ಲ. ಹರಿಜನರು ಪಕ್ಷ ಕಟ್ಟಿಕೊಳ್ಳಬಹುದು, ಕಾರ್ಮಿಕರು ಕಟ್ಟಿಕೊಳ್ಳಬಹುದು, ಶ್ರೀಮಂತರು ಕಟ್ಟಿಕೊಳ್ಳಬಹುದು, ಆದರೆ ಈ ಭೂಮಿತಾಯಿ ಪಕ್ಷ ಕಟ್ಟಿಕೊಳ್ಳಲಾರಳು. ಮರಗಳಿಗೆ ಪಕ್ಷ ಕಟ್ಟಿಕೊಂಡು ಹೋರಾಡಲು ಸಾಧ್ಯವೇ? ಪಕ್ಷಿಗಳಿಗೆ, ಆನೆಗಳಿಗೆ, ಇಲಿಗಳಿಗೆ, ಹುಲಿಗಳಿಗೆ, ಜಂತುಗಳಿಗೆ ಪಾರ್ಟಿ ಕಟ್ಟಿಕೊಂಡು ಬದುಕಿ ಉಳಿಯಲು ಸಾಧ್ಯವೇ? ಅವರ ಪರವಾಗಿ ಯಾರು ಮಾತನಾಡಬೇಕು?

ಗಿಡ ಮರ ಪಶು ಪಕ್ಷಿಗಳ ಪರವಾಗಿ ನಾವೇ ಮಾತನಾಡಬೇಕು. ಯಾಕೆಂದರೆ ನಮ್ಮ ಭವಿಷ್ಯ ಕೂಡಾ ಅದರೊಟ್ಟಿಗೆ ಸೇರಿಕೊಂಡಿದೆ.

○ ○ ○ ○ ○

ನಾವೆಲ್ಲಾ ಹೀಗೇನೆ! ನನಗೆ ಸಿಗರೇಟ್ ಬಿಡುವುದು ಎಷ್ಟು ಕಷ್ಟವಾಯಿತು ಅಂದರೆ, ಈಗಲೂ ಬಿಟ್ಟಿಲ್ಲ ಅದರ ಮೋಹ. ಕೆಮ್ಮು ಬಂದು ಒಂದು ಬೆಳಗ್ಗೆ ಇನ್ನೇನು ನಾನು ಸಾಯ್ತೀನಿ ಅನ್ನುವಾಗ ಬಿಟ್ಟು ಹೋಯಿತು. ಬಿಡಬೇಕೆಂದು ಗೊತ್ತಿರುತ್ತದೆ ನಮಗೆ. ತಪ್ಪು ಅದನ್ನ ಸೇದಬಾರದು ಅಂತ ತಿಳಿದಿರುತ್ತದೆ. ಆದರೆ ನಿಜವಾಗಿ ಅದನ್ನ ಮಾಡಲು ಆಗುವುದಿಲ್ಲ, ಆಚರಣೆಗೆ ತರಲಿಕ್ಕೆ ಆಗುವುದಿಲ್ಲ. ಹಾಗೇನೇ ಈ ಭೂಮಿಗೆ ಬಹಳ ದೊಡ್ಡ ವಿಪತ್ತು ಬರಬಹುದು ಅಂತ ಗೊತ್ತಿದ್ದರೂನೂ ಅದನ್ನ ನಾವು ಜಾರಿಗೆ ತರುವುದಿಲ್ಲ. ಇದು ಮನುಷ್ಯ ಸ್ವಭಾವದಲ್ಲೇ ಇರುವಂತಹದ್ದು.

ಜಿಡ್ಡು ಕೃಷ್ಣಮೂರ್ತಿ ಒಂದು ಕಡೆ ಹೇಳುತ್ತಾರೆ, "ಬಹಳ ವೇಗವಾಗಿ ಕಾರನ್ನ ಓಡಿಸಿಕೊಂಡು ಹೋಗುತ್ತಿದ್ದಾಗ ಒಂದು ಪ್ರಪಾತ ಎದುರಾದರೆ ಏನು ಮಾಡುತ್ತೀರಿ? ಯೋಚನೆ ಮಾಡುತ್ತೀರಾ? ಇಲ್ಲ! ಬ್ರೇಕ್ ಹಾಕುತ್ತೀರಿ" ನಾವು ಈಗ ಬ್ರೇಕ್ ಹಾಕಬೇಕಾಗಿ ಬಂದಿದೆ. ಗಾಂಧೀಜಿ ಬ್ರೇಕ್ ಹಾಕು ಅಂತ ಹೇಳುತ್ತಿದ್ದಾರೆ.

ಈ ಭೂಮಿತಾಯಿ, ಈ ಶಾಶ್ವತಿ, ಇವಳು ಉಳಿಯಬೇಕಾದರೆ ಏನು ಮಾಡಬೇಕು?......ಮೊನ್ನೆ ನಾನು ಪ್ರಯಾಣ ಮಾಡುತ್ತಿದ್ದೆ. ದಾರಿಯಲ್ಲಿ ಹರಿಹರ ಬಂತು. ಹರಿಹರ ದಾಟುವವರೆಗೆ ಮೂಗು ಮುಚ್ಚಿಕೊಳ್ಳಬೇಕಾಯಿತು. Development, Development, Develoment ಅನ್ನುತ್ತೇವೆ. ಈ ರೀತಿಯ ಡೆವೆಲಪ್‌ಮೆಂಟಿನಿಂದ ಕಣ್ಣು ಹೊರಟು ಹೋಗುತ್ತದೆ, ಕಿವಿ ಹೊರಟುಹೋಗುತ್ತದೆ, ಮೂಗನ್ನಂತೂ ಉಪಯೋಗಿಸಲು ಸಾಧ್ಯವೇ ಇಲ್ಲ. ಅಷ್ಟು ದುರ್ವಾಸನೆ ಈ ಡೆವೆಲಪ್‌ಮೆಂಟಿನಲ್ಲಿ.

ನಾವು ಯಾಕೆ ಡೆವೆಲಪ್‌ಮೆಂಟ್ ಮಾಡುತ್ತಿದ್ದೇವೆ? ಸುಖಕ್ಕೆ ಅಂತ ಮಾಡುತ್ತಿದ್ದೇವೆ. ಎಲ್ಲಿ ಸುಖ ಪಡುತ್ತೀವಿ? ಜಪಾನಿನಲ್ಲಿ ಹೊಟೆಲ್ ಒಳಗೆ ಪ್ರವೇಶಿಸಿದರೆ, ಸ್ವಲ್ಪ ಹೊತ್ತು ಆಕ್ಸಿಜನ್ ಸಿಲಿಂಡರ್ ಎದುರು ಮೂತಿ ಕೊಟ್ಟು ಉಸಿರಾಡುತ್ತಾರೆ. ಅಂತಹ ಸ್ಥಿತಿ ಬಂದು ಬಿಡುತ್ತದೆ. ಮನೆಯಲ್ಲಿ ಆಕ್ಸಿಜನ್ ಸಿಲಿಂಡರ್ ಇಟ್ಟುಕೊಳ್ಳಬೇಕಾಗುತ್ತದೆ ಉಸಿರಾಡಲಿಕ್ಕೆ.

ಇಂತಹ ಪ್ರಶ್ನೆಗಳು ನಮಗೆದುರಾದಾಗ ಪ್ರಾಯಶಃ ಗಾಂಧೀಜಿ ಪ್ರಸ್ತುತರಾದಾರು, ಸನಾತನಿಗಳೂ ಪ್ರಸ್ತುತರಾದಾರು. ಇಪ್ಪತ್ತೊಂದನೆಯ ಶತಮಾನದಲ್ಲಿ ಇವೆಲ್ಲ ಆಗಬಹುದು.

○

(ಸಿಂಡಿಕೇಟ್ ಬ್ಯಾಂಕಿನ ಗೋಲ್ಡನ್ ಜ್ಯುಬಿಲಿ ಅಂಗವಾಗಿ ಮಣಿಪಾಲದಲ್ಲಿ ಮಾಡಿದ ಭಾಷಣದಿಂದ ಸಂಗ್ರಹಿಸಿದ ಭಾಗಗಳು ಮೇಲಿನ ಲೇಖನ).

ಪರಿಸರ



ಮಾಧವ ಐತಾಳ್

ಈ ಭೂಗ್ರಹದ ಮೇಲಿನ ಜೀವರಾಶಿಗಳಲ್ಲಿ ಮನುಷ್ಯ, ಮರಗಿಡಗಳಂತೆ, ಪ್ರಾಣಿ, ಪಕ್ಷಿಗಳು ಬಹುಮುಖ್ಯ ಅವಿಭಾಜ್ಯ ಅಂಗಗಳು. ಪ್ರಾಣಿ, ಪಕ್ಷಿಗಳಲ್ಲಿ ಕೆಲವು ಮನುಷ್ಯನ ಆಹಾರವಾಗಿ, ಮನುಷ್ಯ ಅವುಗಳನ್ನು ತನ್ನ ಮನೆಯಲ್ಲಿ ಸಾಕಲಾರಂಭಿಸಿದ. ಅಂತಹ ಪಕ್ಷಿಗಳಲ್ಲಿ ಕೋಳಿಯೂ ಒಂದು. ಇದು ತನ್ನ ಕೋಳಿ ಕೂಗದೆ ಬೆಳಗಾಗದು ಎಂದು ಕಾಡಿಗೆ ಹೋಗಿ, ನಂತರ ಕೋಳಿ ಕೂಗದಿದ್ದರೂ ಬೆಳಗಾಗುತ್ತದೆ, ಈ ಜಗತ್ತಿನಲ್ಲಿ ಯಾವುದೂ ಒಬ್ಬನಿಗಾಗಿ ನಿಲ್ಲದು ಎಂದುಕೊಂಡ ಸೋಮನಹಳ್ಳಿಯ ಅಜ್ಜಿಯ ಕಥೆಯಲ್ಲ, ಬದಲಿಗೆ ಹುರಿಯಲ್ಪಟ್ಟು ವಿದೇಶೀ ಹೆಸರಿನಲ್ಲಿ ಮಾರಲ್ಪಡುವ, ಗಲಾಟೆಯ ಕೇಂದ್ರವಾದ ಇಲ್ಲಿಯದೇ ಕೋಳಿಯ ಸತ್ಯಕಥೆ.

ವಿದೇಶೀ ಬಂಡವಾಳಕ್ಕೆ ಕದ ತೆರೆದ ಭಾರತದಲ್ಲಿ, ಸರ್ಕಾರ ಪೆಪ್ಸಿಪುಡ್ಸ್ ಸಂಸ್ಥೆಗೆ ೬೦ ಉಪಹಾರಗೃಹಗಳನ್ನು ತೆರೆಯಲು ಅನುಮತಿ ನೀಡಿದೆ. ಅದರಲ್ಲಿ ಕೆಂಟುಕಿ ಹುರಿದ ಕೋಳಿಗಳ (KFC) ಮತ್ತು ಪಿಜ್ಜಾ ಹಟ್ (PH) ಗಳು ತಲಾ ಮೂವತ್ತು. ಇದರ ಹಿಂದೆ ಭಾರತಕ್ಕೆ ನುಗ್ಗಲು ಮ್ಯಾಕ್‌ಡೊನಾಲ್ಡ್ ಸೇರಿದಂತೆ ಮಾಂಸಾಧಾರಿತ ಕಸಮಾರುವ ಹೋಟೆಲುಗಳ ಸರಪಳಿಗಳು ಕಾಯ್ದುನಿಂತಿವೆ. ಈ ಮ್ಯಾಕ್‌ಡೊನಾಲ್ಡ್ ಸಂಸ್ಥೆ ಪರಿಸರ ಮತ್ತು ಕಾರ್ಮಿಕ ವಿರೋಧಿ ನೀತಿಯಿಂದಾಗಿ

ಅನೇಕ ಬಾರಿ ನ್ಯಾಯಾಲಯದ ಕಟಕಟೆ ಹತ್ತಿದೆ. ಸ್ವದೇಶದಲ್ಲಿ ತನ್ನ ಕುಪ್ರಸಿದ್ಧಿಯಿಂದ ತಲೆಮರಸಿಕೊಳ್ಳುವ ಸ್ಥಿತಿಗೆ ತಲುಪಿರುವ ಇದು ತನ್ನ ಮಾರುಕಟ್ಟೆಯ ವಿಸ್ತರಣೆಗಾಗಿ ಭಾರತಕ್ಕೆ ಪ್ರವೇಶಿಸುತ್ತಿದೆ. ಪುಣೆಯ ವೆಂಕೀಸ್ ಸಂಸ್ಥೆ, ಪೆಪ್ಸಿಗೆ ಕೋಳಿಗಳನ್ನು ಪೂರೈಸಲು ಒಪ್ಪಿದೆ.

ಬೆಂಗಳೂರಿನ ಮಹಾತ್ಮಾಗಾಂಧಿ ರಸ್ತೆಯಲ್ಲಿ ಜೂನ್‌ನಲ್ಲಿ ಪ್ರಾರಂಭವಾದ ಉಪಹಾರಗೃಹದಲ್ಲಿ ಉಣಬಡಿಸುವ ಆಹಾರ ಮಾಂಸಾಧಾರಿತ ಮತ್ತು ಎಣ್ಣೆಯಲ್ಲಿ ಹುರಿದದ್ದಾಗಿದ್ದು, ಆ ಆಹಾರ ತರುವ ದುಷ್ಪರಿಣಾಮಗಳಲ್ಲಿ ಬೊಜ್ಜು ರಕ್ತದಲ್ಲಿ ಕೊಲೆಸ್ಟೆರಾಲ್ ಹೆಚ್ಚಳ ಮತ್ತು ಕರುಳಿನ ಕ್ಯಾನ್ಸರ್ ಸೇರಿದಂತೆ ಅನೇಕ ರೀತಿಯ ಕ್ಯಾನ್ಸರ್ ಸೇರಿವೆ. ಪಿಜ್ಜಾಹಟ್‌ನ ತಿಂಡಿಯಲ್ಲಿರುವುದು ಮೈದಾ, ಮಾಂಸ ಮತ್ತು ಗಿಣ್ಣು.

ಬಿ.ಬಿ.ಸಿ. ೧೯೯೫ ಮೇ ೨೦ ಮತ್ತು ೨೧ನೇ ತಾರೀಖು ದೂರದರ್ಶನದಲ್ಲಿ ಪ್ರದರ್ಶಿಸಿದ ಅಮೆರಿಕಾದಲ್ಲಿ ನೆಡೆಸಿದ ಸರ್ವೇಕ್ಷಣೆಯೊಂದರ ಪ್ರಕಾರ - ಅಮೆರಿಕಾದಲ್ಲಿ ಈ ಕಸಾಹಾರದಿಂದ ಬರುವ ಬೊಜ್ಜು ಮತ್ತು ಹೃದಯರೋಗವಲ್ಲದೆ, ಬೇರೆ ರೋಗಗಳಿಂದ ೮೦ ದಶಲಕ್ಷ ಜನ ನರಳುತ್ತಿದ್ದಾರೆ. ಆ ರೋಗಗಳು ಅವರ ಆದಾಯದ ಪ್ರತಿಶತ ೨೦ ಭಾಗವನ್ನು ನುಂಗುತ್ತಿವೆ. ಆ ಸಾಕ್ಷ್ಯಚಿತ್ರದ ಪ್ರಕಾರ ಕಂಡುಬಂದ ಬಹಳಷ್ಟು ಕಾಯಿಲೆಗಳು ಮೊದಲು ಇರಲಿಲ್ಲ. ಅವೆಲ್ಲ ಕಾಣಿಸಿಕೊಂಡಿದ್ದು ಕಸಾಹಾರದ ಬಳಕೆಯ ನಂತರ.

ಪೆಪ್ಸಿ ಸಂಸ್ಥೆಯ ಪ್ರಕಾರ ಅವರು ಬಳಸುವ ಕೋಳಿಗಳನ್ನು ಅತ್ಯಾಧುನಿಕ ರೀತಿಯಿಂದ ಬೆಳಸಲಾಗಿದ್ದು, ಕೊಲ್ಲುವುದು ಕೂಡಾ ಅತ್ಯಾಧುನಿಕವಾಗಿ. ಅಂದರೆ ಈ ಕೋಳಿಗಳನ್ನು ಬೆಳಸಲು ಜೀವಿರೋಧಕಗಳು, ಆರ್ಸೆನಿಕ್ ಇರುವ ಸಂಯುಕ್ತಗಳು, ಸಲ್ಫಾ ಔಷಧಿಗಳು, ಕೃತಕ ಹಾರ್ಮೋನುಗಳನ್ನು ಬಳಸಿದ್ದು, ಕೃತಕವಾಗಿ ತೂಕ ಹೆಚ್ಚಿಸಲಾಗಿದೆ. ಆ ಕೋಳಿಗಳು ರೋಗಗಳಿಂದ ತುಂಬಿದ್ದು, ಅವುಗಳಲ್ಲಿ ಗಾಬರಿಹುಟ್ಟಿಸುವಷ್ಟು ಸಂಖ್ಯೆಯವು ಕ್ಯಾನ್ಸರ್ (Leukosis) ನಿಂದ ನರಳುತ್ತಿರುತ್ತವೆ. ಕ್ರಿ.ಶ. ೨೦೦೦ದ ಹೊತ್ತಿಗೆ 'ಎಲ್ಲರಿಗೂ ಆರೋಗ್ಯ' ಒದಗಿಸಲು ಬದ್ಧವೆಂದು ಹೇಳಿಕೊಂಡಿರುವ ಭಾರತ ಸರ್ಕಾರ ಪ್ಲೇಗ್ ಹರಡಿದಾಗ ಪರದಾಡಿದ ರೀತಿ, ಇಡೀ ದೇಶಕ್ಕೇ ಅದು ಹರಡಿದ್ದರೆ ಆಗಬಹುದಾಗಿದ್ದ ಅನಾಹುತ ನೆನೆದರೆ ಭಯ ಹುಟ್ಟುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಲೋಕಸಭಾಸಮಿತಿ ಸಾರ್ವಜನಿಕ ಆಸ್ಪತ್ರೆಗಳ ತನ್ನ ವರದಿಯಲ್ಲಿ ಹೇಳುತ್ತದೆ- 'ಗ್ರಾಮೀಣ ಆಸ್ಪತ್ರೆಯಲ್ಲಿ ಶುಚಿ ಮತ್ತು ನೈರ್ಮಲ್ಯದ ಸ್ಥಿತಿ ತೀರಾ ಕೆಳಮಟ್ಟದ್ದು. ಕಟ್ಟಿಕೊಂಡಿರುವ ಚರಂಡಿ, ಸೋರುತ್ತಿರುವ ನಲ್ಲಿ, ನಾರುವ ಶೌಚಾಗಾರ, ಗುಡ್ಡೆಗಟ್ಟಿದ ಕಸ -ಇವು ಎಲ್ಲ ಆಸ್ಪತ್ರೆಗಳಲ್ಲಿನ ಸಾಮಾನ್ಯ ದೃಶ್ಯ. ಜನ ಸಂದಣಿಯಿಂದ ಕಿಕ್ಕಿರಿದ ಆ ಆಸ್ಪತ್ರೆಗಳಲ್ಲಿ ಮೂಲಭೂತ ಸೌಕರ್ಯಗಳೇ

ನಾಪತ್ತೆ'. ಜನಸಾಮಾನ್ಯರಿಗೆ ಆರೋಗ್ಯವೆನ್ನುವುದು ದಕ್ಕದ ಮರೀಚಿಕೆಯಾಗಿರುವಾಗ, ರಣವೈದ್ಯರೇ ತುಂಬಿರುವಲ್ಲಿ, ಪೆಪ್ಸಿಯ ಕಸಾಹಾರವೂ ಸೇರಿದರೆ, ಅದನ್ನು ನಮ್ಮ ಈಗಾಗಲೇ ಕುಸಿದಿರುವ ಆರೋಗ್ಯ ವ್ಯವಸ್ಥೆ ತಡೆದೀತಾದರೂ ಹೇಗೆ?

ಕೋಳಿಯನ್ನು ಎಣ್ಣೆಯಲ್ಲಿ ಹುರಿದಾಗ ಎಣ್ಣೆಯಲ್ಲಿನ ಕೊಬ್ಬಿನಿಂದ ರೋಗಾಣುಗಳ ಸಂಖ್ಯೆ ಇನ್ನಷ್ಟು ಹೆಚ್ಚಿ, ಅವು ಮನುಷ್ಯನಿಗೆ ವರ್ಗಾಯಿಸಲ್ಪಡುತ್ತವೆ. ಅಮೆರಿಕಾದಲ್ಲಿ ಎಲ್ಲರೂ ಅದನ್ನು ತಿನ್ನುತ್ತಾರೆ ಅನ್ನುವುದಾದರೆ, ಅಮೆರಿಕಾದ ಸೆನೆಟ್‌ನ ವಿಚಾರಣಾ ಸಮಿತಿ ೧೯೯೨ರಲ್ಲಿ ಕ್ಯಾನ್ಸರ್ ಸಂಶೋಧನೆ ಕುರಿತು ನೆಡೆಸಿದ ಸರ್ವೇಕ್ಷಣೆ ಪ್ರಕಾರ - ಅಮೆರಿಕಾದ ಪ್ರಜೆಗಳಲ್ಲಿ ೭ ಸೆಕೆಂಡ್‌ಗೆ ಒಬ್ಬ ಕ್ಯಾನ್ಸರ್‌ಗೆ ತುತ್ತಾಗುತ್ತಾನೆ. ಇದಕ್ಕೆ ಕಾರಣ - ಕಸಾಹಾರ ಉದ್ದಿಮೆ ಸಿದ್ಧಪಡಿಸಿದ ಮಾಂಸ ಮತ್ತು ಕೋಳಿ. ಮಕ್ಕಳನ್ನು ಮತ್ತು ವೃದ್ಧರನ್ನು ಕೊಲ್ಲುವ ಇನ್ನೊಂದು ಕಾಯಿಲೆ - ಸಾಲ್ಮೋನೆಲ್ಲೋಸಿಸ್ (salmonellosis). ಮಾಂಸದ ಮೂಲ ಆಧುನಿಕ ಕಸಾಯಿಖಾನೆ ಅಥವಾ ರಸ್ತೆ ಬದಿಯ ಅಂಗಡಿ ಯಾವುದೇ ಆಗಿರಲಿ, ಶೇ. ೫೦ ರಷ್ಟು ಕೋಳಿಗಳು ಈ ಕ್ರೂರಿ ಬ್ಯಾಕ್ಟೀರಿಯಾವನ್ನು ಹೊಂದಿರುತ್ತವೆ. ಸಾಮಾನ್ಯ ಬೇಯಿಸುವಿಕೆಯಿಂದ ಈ ಬ್ಯಾಕ್ಟೀರಿಯಾ ನಾಶವಾಗದು.

ಪಿಜ್ಜಾಹಟ್ (PH) ಕೂಡಾ ವೆಂಕೀಸ್ ಅವರ ಕೋಳಿಯನ್ನು ಮತ್ತು ಸ್ಥಳೀಯ ಮಾರುಕಟ್ಟೆಯ ಮಾಂಸವನ್ನು ಅವಲಂಬಿಸಿದೆ. ಪೆಪ್ಸಿ ಸಂಸ್ಥೆ ಸರ್ಕಾರಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ಉನ್ನತ ತಂತ್ರಜ್ಞಾನ ಬಳಸಿ ಮಾಂಸ ಪರಿಷ್ಕರಣೆ ಮತ್ತು ಬ್ರೆಡ್ ಉತ್ಪಾದನೆ ಮಾಡುವುದಾಗಿ ಹೇಳಿತ್ತು. ಮಾಂಸಕ್ಕಾಗಿ ಅದು ಸ್ಥಳೀಯ ಮಾರುಕಟ್ಟೆಯನ್ನು ಅವಲಂಬಿಸಿರುವಾಗ, ಉನ್ನತ ತಂತ್ರಜ್ಞಾನದ ಆಮದಿನ ಪ್ರಶ್ನೆ ಬಂದೀತಾದರೂ ಎಲ್ಲಿಂದ? ಅದು ಮಾಡುತ್ತಿರುವುದು ಹೊಸ ಉಪಹಾರಗೃಹಗಳ ಸ್ಥಾಪನೆ, ಅಷ್ಟೆ. ಆ ಉದ್ಯಮದಲ್ಲಿ ಭಾರತೀಯರಿಗೆ ಹೇಳಿಕೊಡುವ ದಾಕ್ಷ್ಯ ಯಾರಿಗಿದೆ? ಮಾಂಸಾಧಾರಿತ ಆಹಾರ ಉದ್ಯಮದ ಹೆಚ್ಚಳದಿಂದ, ಅನಾರೋಗ್ಯಕರ ಪರಿಸರದಲ್ಲಿ ಪ್ರಾಣಿಗಳನ್ನು ಕೊಲ್ಲುವುದು ಹೆಚ್ಚುತ್ತದೆ. ಅಮೆರಿಕಾದಲ್ಲಿ ಅಂತಹ ಉದ್ಯಮಗಳಿಗೆ ಅನುಮತಿ ನೀಡುವ ಮೊದಲು ಆ ಸಂಸ್ಥೆ ಆಧುನಿಕ ಕಸಾಯಿಖಾನೆಯನ್ನು ಹೊಂದಿದೆಯೇ ಎಂದು ಪರಿಶೀಲಿಸಿ, ಅನಂತರವಷ್ಟೆ ಲೈಸನ್ಸ್ ನೀಡಲಾಗುತ್ತದೆ. ಆದರೆ ಇಲ್ಲಿ ಕೆಲವು ಡಾಲರ್‌ಗಳ ಆಸೆಗೆ ಎಲ್ಲ ನಿಯಮಗಳೂ ಗಾಳಿಗೆ ತೂರಿ ಹೋಗುತ್ತವೆ.

ಭಾರತದ ಮಾರುಕಟ್ಟೆಯನ್ನು ವಿಶ್ವಕ್ಕೆ ತೆರೆದ ತಕ್ಷಣ ನುಗ್ಗಿದ ವಿದೇಶೀ ಸಂಸ್ಥೆಗಳು ನೀಡಿದ ಎರಡು ಆಶ್ವಾಸನೆಗಳು - ಉದ್ಯೋಗಾವಕಾಶದ ಹೆಚ್ಚಳ ಮತ್ತು ಆಧುನಿಕ ತಂತ್ರಜ್ಞಾನದ ವರ್ಗಾವಣೆ. ಇದನ್ನೇ ಪೆಪ್ಸಿ ಸಂಸ್ಥೆಯೂ ನೀಡಿದೆ. ಐದು ವರ್ಷದ ಹಿಂದೆ ಆಂಧ್ರ ಪ್ರದೇಶದಲ್ಲಿ ಅನಿವಾಸಿ ಭಾರತೀಯರಿಂದ ಸ್ಥಾಪಿಸಲ್ಪಟ್ಟ ಆಲ್ - ಕಬೀರ್ ಯಾಂತ್ರಿಕ ಕಸಾಯಿಖಾನೆ ಉದ್ಯೋಗ ನೀಡಿದ್ದು ೩೦೦ ಜನರಿಗೆ.

ಅವರಿಗೆ ನೀಡಲಾಗುತ್ತಿರುವ ಸಂಬಳ ರೂ. ೫೦೦ ರಿಂದ ರೂ ೨೦೦೦. ಆದರೆ ಪರಿಸರ ಇಲಾಖೆಯ ಅಂಕೆ ಸಂಖ್ಯೆ ಪ್ರಕಾರ ಆ ಕಸಾಯಿಖಾನೆ ಮೂರುಲಕ್ಷಕ್ಕೂ ಹೆಚ್ಚಿನ ಜನರನ್ನು ನಿರುದ್ಯೋಗಿಗಳನ್ನಾಗಿಸಿದೆ. ಆ ಪ್ರದೇಶದಲ್ಲಿ ಜಾನುವಾರುಗಳ ಸಂಖ್ಯೆ ಗಮನಾರ್ಹವಾಗಿ ಇಳಿದಿದೆ. ಪೆಪ್ಸಿಯ ಜೊತೆ ಒಪ್ಪಂದ ಮಾಡಿಕೊಂಡ ನಂತರ ವೆಂಕೀಸ್ ಒಬ್ಬನೇ ಒಬ್ಬನನ್ನೂ ಹೊಸದಾಗಿ ಸೇರಿಸಿಕೊಂಡಿಲ್ಲ. ಬದಲಿಗೆ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಯಾಂತ್ರೀಕರಿಸಬೇಕೆಂದು ಪೆಪ್ಸಿ ವೆಂಕೀಸ್ ಮೇಲೆ ಒತ್ತಾಯ ಹೇರುತ್ತಿದೆ. ಇರುವ ಕಾರ್ಮಿಕರನ್ನು ಕೆಲಸದಿಂದ ತೆಗೆಯುವ ಪ್ರಯತ್ನಗಳು ನೆಡೆದಿವೆ. ಪೆಪ್ಸಿ ತನ್ನ ಉಪಹಾರಗೃಹಗಳ ಮೂಲಕ ನೀಡಬಹುದಾದ ಉದ್ಯೋಗ ಸೇವಕ ಮತ್ತು ಮೇಲ್ವಿಚಾರಕರದ್ದು. ಸಂಸ್ಥೆ ಸರ್ಕಾರಕ್ಕೆ ಸಲ್ಲಿಸಿದ ಅರ್ಜಿಯ ಪ್ರಕಾರ - ಮೊದಲನೇ ವರ್ಷದಲ್ಲಿ ೫೦ ಜನ ಪದವೀಧರರಿಗೆ ಕೆಲಸ ನೀಡಬಹುದು! ನಾವು ನಿರೀಕ್ಷಿಸುವ ಉದ್ಯೋಗಾವಕಾಶದ ಹೆಚ್ಚಳ ಇದಲ್ಲ ತಾನೇ? ಉದ್ಯೋಗಾವಕಾಶ ಸ್ವಲ್ಪ ಮಟ್ಟಿಗೆ ಹೆಚ್ಚುತ್ತದೆ ಎಂದುಕೊಂಡರೂ ಪಾಶ್ಚಿಮಾತ್ಯ ದೇಶಗಳಲ್ಲಿ ನ್ಯಾಯಾಲಯದಲ್ಲಿ ಈ ಉಪಹಾರಗೃಹಗಳ ಮೇಲಿರುವ ದಾವೆಗಳಲ್ಲಿ ಹೆಚ್ಚಿನವು ಕಾರ್ಮಿಕ ನಿಯಮಗಳನ್ನು ಉಲ್ಲಂಘಿಸಿದ್ದರಿಂದ ಹುಟ್ಟಿಕೊಂಡಂತವು. ಇದೇನು ಅಂತಹ ಒಳ್ಳೆಯ ಸಂಪ್ರದಾಯವಲ್ಲ!

ಕೆಂಟುಕಿ, ಮ್ಯಾಕ್‌ಡೋನಾಲ್ಡ್ ಇವೆಲ್ಲ ಸ್ವದೇಶದಲ್ಲೇ ತೀವ್ರ ಜನವಿರೋಧ ಎದುರಿಸುತ್ತಿವೆ. ಪ್ರಖ್ಯಾತ ಪರಿಸರ ಸಂಸ್ಥೆ ವರ್ಲ್ಡ್‌ವಾಚ್ (world watch) ಪ್ರಕಾರ - 'ಪ್ರತಿದಿನ ಅರ್ಧಪೌಂಡ್ ಮಾಂಸ ಅಥವಾ ಕೋಳಿ ಸೇವಿಸುವ ಮನುಷ್ಯ ಬೀರುವ ಪರಿಣಾಮಗಳು ದುರ್ಭರ ಮತ್ತು ಕಲುಷಿತ ಅಂತರ್ಜಲದಿಂದ ಹಿಡಿದು ಹಸಿರು ಮನೆ ಪರಿಣಾಮ ಉಂಟುಮಾಡುವ ಅನಿಲಗಳಿಂದ ತುಂಬಿದ ಆಕಾಶದವರೆಗೂ ಹಬ್ಬಿದೆ. ಹಂದಿ, ದನ ಮತ್ತು ಕೋಳಿಗಳನ್ನು ಮನುಷ್ಯನ ಆಹಾರವಾಗಿ ಬಲವಂತವಾಗಿ ಬೆಳೆಸಿದರೆ, ದೇಶದ ಬೆಳೆಗಳ ಬಹುಭಾಗವನ್ನಲ್ಲದೆ, ಅಪಾರ ಪ್ರಮಾಣದ ವಿದ್ಯುತ್ ಮತ್ತು ನೀರನ್ನು ಅವು ನುಂಗುತ್ತದೆ. ಆಧುನಿಕ ಮಾಂಸೋತ್ಪಾದನಾ ಉದ್ಯಮ ಆಹಾರ, ನೀರು, ಶಕ್ತಿ ಮತ್ತು ಕೃಷಿಭೂಮಿಯನ್ನು ಅನಗತ್ಯವಾಗಿ ದುಂದುಮಾಡುತ್ತದೆ, ಗಾಳಿ ಮತ್ತು ಜಲಮಾಲಿನ್ಯ ಉಂಟುಮಾಡುತ್ತದೆ'.

ಪೆಪ್ಸಿ ತನಗೆ ಸರಬರಾಜು ಮಾಡುವ ಕೋಳಿಗಳನ್ನು ಜೋಳ ಮತ್ತು ಸೋಯಾ ಬಳಸಿ ಬೆಳೆಸಿರಬೇಕು ಎಂದು ಒತ್ತಾಯಿಸುತ್ತಿದೆ. ಒಂದು ಪೌಂಡ್ ಹಂದಿ ಮಾಂಸ ೬ ಪೌಂಡು ಕಾಳು ನುಂಗಿದರೆ, ಒಂದು ಪೌಂಡ್ ಕೋಳಿ ಮಾಂಸಕ್ಕೆ ೨.೮ ಕೆ.ಜಿ ಕಾಳು ಬೇಕು. ಜೋಳ ಇಲ್ಲಿನ ಬಡವರ ಅಗತ್ಯ ಆಹಾರ. ಈ ವಿದೇಶೀ ಉಪಹಾರಗೃಹಗಳು ಹೆಚ್ಚಿದಂತೆ ಅವು ಬಳಸುವ ಜೋಳದ ಪ್ರಮಾಣ

ಹೆಚ್ಚುತ್ತಾ ಹೋಗಿ, ಜನಸಾಮಾನ್ಯರಿಗೆ ಜೋಳ ಕೈಗೆಟುಕದಂತಾಗುತ್ತದೆ. ಜೋಳವನ್ನು ಕೋಳಿ ಕಸವನ್ನಾಗಿಸುವುದು ಚಿನ್ನವನ್ನು ಮಣ್ಣಾಗಿಸುವ ಮೂರ್ಖ ಕೆಲಸ. ಪ್ರಪಂಚದ ಎಲ್ಲೆಡೆ ಪಶುಸಂಗೋಪನೆ ಬೆಟ್ಟದಷ್ಟು ಆಹಾರ ನುಂಗುತ್ತಿದೆ. ಅಮೆರಿಕಾದ ಕೃಷಿ ಇಲಾಖೆಯ ಅಂದಾಜಿನಂತೆ ಪ್ರಪಂಚದ ಒಟ್ಟು ಉತ್ಪಾದನೆಯಾದ ಧಾನ್ಯದಲ್ಲಿ ಪ್ರತಿಶತ ೪೦ ನ್ನು, ಅಮೆರಿಕಾದ ಉತ್ಪಾದನೆಯ ಶೇ. ೭೦ ನ್ನು ಪಶುಗಳು ತಿನ್ನುತ್ತಿವೆ. ಅಮೆರಿಕಾದಲ್ಲಿ ಹಿಂದಿನ ವರ್ಷ (೧೯೯೪)ದಲ್ಲಿ ಬಳಸಲ್ಪಟ್ಟ ಧಾನ್ಯದ ಪ್ರಮಾಣ ೧೬.೨ ದಶಲಕ್ಷ ಟನ್‌ಗಳು! ಬರ ಮತ್ತು ಮಹಾಪೂರಗಳ ನಿರಂತರ ಸುಳಿಯಲ್ಲಿ ನರಳುತ್ತಿರುವ ಭಾರತದಲ್ಲಿ ಶೇ. ೩೯ ರಷ್ಟು ಕೃಷಿ ಜಮೀನನ್ನು ಹುಲ್ಲುಗಾವಲಾಗಿ ಬಳಸುತ್ತಿರುವುದು ದೇಶಘಾತುಕ. ಭಾರತೀಯ ಕೃಷಿವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ಪ್ರಕಾರ ನಾವು ಈ ಭೂಮಿಯನ್ನು ಆಹಾರ ಬೆಳೆಸಲು ಬಳಸಿದ್ದಾದರೆ ಇಂದಿನ ಜನಸಂಖ್ಯೆಯ ೫ ಪಟ್ಟು ಜನರಿಗೂ ಆಹಾರ ಪೂರೈಸಬಹುದು. ಜನಾಗತ್ಯದ ಆಹಾರಧಾನ್ಯ ಬಳಸಿ, ಮಾಂಸೋತ್ಪಾದನೆಗೆ ಪಶುಸಂಗೋಪನೆ ಮಾಡುವುದು ಒಂದು ಹರಾಕಿರಿಯ ಪ್ರಯತ್ನ.

ಪಶುಪಾಲನೆಗೆ ಶಕ್ತಿಯ ಅಗತ್ಯ ಕೂಡಾ ಹೆಚ್ಚು. ಮೇವು ಬೆಳೆಸಲು ಬಳಸುವ ಯಂತ್ರೋಪಕರಣಗಳ, ಗೊಬ್ಬರ ಮತ್ತು ಕೀಟನಾಶಕಗಳ ಉದ್ಯಮ ಅಪಾರವಾಗಿ ವಿದ್ಯುತ್ ಬಳಸುತ್ತವೆ. ತಜ್ಞರ ಪ್ರಕಾರ-ಒಂದು ಪೌಂಡ್ ಹಂದಿಮಾಂಸ ಉತ್ಪಾದನೆಗೆ ೧೪,೦೦೦ ಕಿಲೋ ಕ್ಯಾಲೋರಿಯಷ್ಟು ಶಕ್ತಿ ಬಳಸಲ್ಪಡುತ್ತದೆ. ಇದು ೧/೨ ಗ್ಯಾಲನ್ ಪೆಟ್ರೋಲ್ ಉತ್ಪಾದಿಸುವ ಶಕ್ತಿಗೆ ಸಮ. ಧಾನ್ಯದಲ್ಲಿನ ಒಂದು ಪ್ರೋಟಿನ್ ಘಟಕ ಬಳಸುವ ಶಕ್ತಿಯ ಅಂಶ (Energy factor) ೨ ರಿಂದ ೧೦, ಆದರೆ ಮಾಂಸಾಹಾರದಲ್ಲಿ ಅದರ ಪ್ರಮಾಣ ೧೦ ರಿಂದ ೭೮. ಕೆಲವು ಜನ ಮಾತ್ರ ಬಳಸುವ ಮಾಂಸಕ್ಕಾಗಿ ಸಾರ್ವಜನಿಕರಿಗೆ ಅತ್ಯಗತ್ಯವಾದ ಶಕ್ತಿಯನ್ನು ಪೋಲುಮಾಡುವುದು ಎಷ್ಟು ಸರಿ? ಇಲ್ಲಿ ಸರ್ಕಾರದ ಬೆಂಬಲದಿಂದ ಅಮೆರಿಕಾದಲ್ಲಿ ಇರುವಂತಹ ಕೋಳಿ / ಹಂದಿ ಸಾಕುವ ತೋಟಗಳನ್ನು ಸ್ಥಾಪಿಸಲಾಗುತ್ತಿದೆ. ಇವು ಬಳಸುವ ವಿದ್ಯುತ್ ಬಿಲ್ಲನ್ನು ತೆರುವವರ‍್ಯಾರು? ನಾವು, ನೀವು. ಈ ತ್ಯಾಗ ಎಷ್ಟು ಸಮರ್ಥನೀಯ?

ದೇಶದ 'ಶ್ವೇತಕ್ರಾಂತಿ'ಯ ಕೇಂದ್ರ ಗುಜರಾತ್‌ನಲ್ಲಿ ಬಳಸಲ್ಪಡುವ ನೀರಿನಲ್ಲಿ ಮೂರನೇ ಒಂದು ಭಾಗ ಪಶುಸಂಗೋಪನೆಗೆ ಹೋಗುತ್ತಿದೆ. ಒಂದು ಅಂದಾಜಿನ ಪ್ರಕಾರ ಒಂದು ಪೌಂಡ್ ಹಂದಿ ಮಾಂಸ ಬೆಳೆಸಲು ೪೩೦ ಗ್ಯಾಲನ್ ನೀರು ಬೇಕು, ದನದ ಮಾಂಸಕ್ಕೆ ೩೯೦ ಗ್ಯಾಲನ್ ಮತ್ತು ಕೋಳಿ ಮಾಂಸಕ್ಕೆ ೩೭೫ ಗ್ಯಾಲನ್ ನೀರು ಬೇಕು. ಮಾಂಸ ಬೆಳೆಸಲು ಬಳಸುವ ತಲಾವಾರು ದಿನವಹಿ ನೀರಿನ ಪ್ರಮಾಣ ೧೯೦ ಗ್ಯಾಲನ್ ಇದ್ದು, ಇದು ಭಾರತದ ಪ್ರತೀ ಕುಟುಂಬ ಪ್ರತಿದಿನ ಬಳಸುವ ನೀರಿನ

ಪ್ರಮಾಣದ ಹತ್ತುಪಟ್ಟು, ಇಲ್ಲಿ ಜನಬಳಕೆಗೆ ನೀರಿಲ್ಲ. ದೇಶದ ೫ ಲಕ್ಷಕ್ಕೂ ಹೆಚ್ಚಿನ ಹಳ್ಳಿಗಳಲ್ಲಿ ಬಹುಪಾಲು ಹಳ್ಳಿಗಳು ಆಶ್ರಯಿಸುವುದು ಕೆರೆ, ಹಳ್ಳದ ನೀರನ್ನು. ಇಲ್ಲಿನ ಶೇ. ೮೦ ರಷ್ಟು ಕಾಯಿಲೆಗಳು ಬರುವುದು ಕೆಟ್ಟ ನೀರಿನ ಬಳಕೆಯಿಂದ. ನೀರಿನ ಬಳಕೆ ಅಸಮರ್ಪಕ, ಅವೈಜ್ಞಾನಿಕ. ದೇಶದ ಅನೇಕ ಕಡೆ ನೀರಿಗಾಗಿ ಹೆಣ್ಣುಮಕ್ಕಳು ಪ್ರತಿದಿನ ೮ ರಿಂದ ೧೦ ಕಿ. ಮೀ. ನಡೆಯಬೇಕಾದ ಪರಿಸ್ಥಿತಿ ಇದೆ. ನಗರಗಳ ಸ್ಥಿತಿಯೇನು ಉತ್ತಮವಾಗಿಲ್ಲ. ಅಂತರ್ಜಲ ವರ್ಷದಿಂದ ವರ್ಷಕ್ಕೆ ಪಾತಾಳಕ್ಕಿಳಿಯುತ್ತಿದೆ. ನೀರಾವರಿ ಜಮೀನಿನಲ್ಲಿ ನಿಂತ ನೀರಿನಿಂದ ಜೌಗುವರಿ, ಸೊಳ್ಳೆಗಳು ಹೆಚ್ಚಿ, ರೋಗಗಳು ಹೆಚ್ಚುತ್ತಿವೆ. ಇಂತಹ ಪರಿಸ್ಥಿತಿ ಇರುವಾಗ ನೀರಿನ ದುರ್ಬಳಕೆ, ಅಪವ್ಯಯ ಒಂದು ದುಸ್ಸಾಹಸ.

ಪ್ರತೀ ಕುರಿ ಅಥವಾ ಮೇಕೆ ವರ್ಷಕ್ಕೆ ೪ ಹೆಕ್ಟೇರ್ ಜಮೀನಿನಲ್ಲಿ ಬೆಳೆಯುವ ಹುಲ್ಲನ್ನು ತಿನ್ನುತ್ತದೆ. ಅವು ೪ ವರ್ಷ ಬದುಕಿ, ಸಾಯುವ ಮೊದಲು ಅನೇಕ ಹೆಕ್ಟೇರ್ ಸರ್ಕಾರಿ ಜಮೀನನ್ನು ನುಂಗುತ್ತವೆ. ಇಲ್ಲಿನ ಬಹುಪಾಲು ಜಾನುವಾರುಗಳು ಮೇವಿಗಾಗಿ ಆಶ್ರಯಿಸಿರುವುದು ಸರ್ಕಾರಿ ಜಮೀನು, ಕಾಡು ಮತ್ತು ರಸ್ತೆ ಬದಿಯ ಜಮೀನನ್ನು. ನಾಶವಾದ ಸರ್ಕಾರಿ ಜಮೀನನ್ನು ಸ್ವಸ್ಥವನ್ನಾಗಿ ಮಾಡಲು ಪರಿಸರ ಇಲಾಖೆ ಬಂಜರು ಭೂಮಿ ಅಭಿವೃದ್ಧಿ ಯೋಜನೆಯಡಿ ರೂ. ೬೦೦೦ ಕೋಟಿ ಖರ್ಚು ಮಾಡಿದೆ. ಈ ಹಣ ಬಂದದ್ದಾದರೂ ಎಲ್ಲಿಂದ? ತೆರಿಗೆದಾರನ ಜೇಬಿನಿಂದ. ಆದರೂ ಈ ಕಾರ್ಯಕ್ರಮ ಹಣದ ಕೊರತೆಯಿಂದ ಯಶಸ್ವಿಯಾಗಲಿಲ್ಲ. ರಾಷ್ಟ್ರೀಯ ಬಜೆಟ್‌ನ ಶೇ. ೧ ಪಾಲು ಅರಣ್ಯ ಇಲಾಖೆಗೆ ಹೋಗುತ್ತದೆ. ಈ ಹಣದಿಂದ ವರ್ಷಕ್ಕೆ ಕೆಲವು ಸಾವಿರ ಹೆಕ್ಟೇರ್ ಬಂಜರು ಜಮೀನನ್ನು ಸರಿಪಡಿಸಬಹುದು. ಕಾಡುಗಳನ್ನು ಮೇವಿಗಾಗಿ ಬಳಸುವುದಲ್ಲದೆ, ಅಪಾರ ಜಮೀನನ್ನು ಮೇವಿಗಾಗಿ ಬಳಸುತ್ತಿದ್ದೇವೆ. ಆದಾಗ್ಯೂ, ರಾಷ್ಟ್ರೀಯ ಕೃಷಿ ಆಯೋಗದ ಪ್ರಕಾರ-ಮೇವಿನ ಕೊರತೆ ಪ್ರತಿಶತ ೩೮ ರಷ್ಟಿದ್ದು, ಈ ಕೊರತೆಯನ್ನು ನೀಗಲು ಇನ್ನಷ್ಟು ಜಮೀನನ್ನು ಮೇವಿಗಾಗಿ ಮೀಸಲಿಡಬೇಕು. ಒಂದು ಸಲ ಜಮೀನಿನ ಮೇಲ್ಪದರದ ಮಣ್ಣು ಹೋದರೆ ಹೋಯಿತು, ಮತ್ತದರ ಸೃಷ್ಟಿಯಾಗಲು ನೂರಾರು ವರ್ಷ ಬೇಕು. ಕೃಷಿಭೂಮಿ, ಅರಣ್ಯವನ್ನು ನಾಶಮಾಡಿಕೊಂಡಿದ್ದರಿಂದ ಗುಲಾಮರಾದ ದಕ್ಷಿಣ ಅಮೆರಿಕಾ ದೇಶಗಳ ಜಾಡನ್ನು ಭಾರತ ಹಿಡಿಯಬೇಕೆ? ಒಂದು ಕೆ.ಜಿ. ಮಾಂಸ ರೂ. ೧೦೦ ಗಳಿಸಬಹುದು, ಆದರೆ ಅದರಿಂದಾದ ಹಾನಿಯನ್ನು ಸರಿಪಡಿಸಲು ಅದಕ್ಕಿಂತ ೮೦ ಪಟ್ಟು ಹೆಚ್ಚು ಖರ್ಚಾಗುತ್ತದೆ. ಹೆಚ್ಚು ಮಾಂಸ ಬಳಕೆಯಾದಷ್ಟು, ಹೆಚ್ಚು ಜನ ಬಡವರಾಗುತ್ತಾರೆ.

ಸೇಬಿನ ಬೆಳೆಗಾಗಿ, ಅದರ ಸಾಗಾಣಿಕೆಗಾಗಿ, ಪೈನ್ ಮರಗಳನ್ನು ಬೆಳಸಲು ಮತ್ತು ಕಾಡುಕಳ್ಳರಿಂದ ಹಿಮಾಲಯದ ಬಹುಪಾಲು ಕಾಡು ನಾಶವಾಗಿದೆ. ಈಗ ಅಳಿದುಳಿದದ್ದು ಮೇವಿಗಾಗಿ ನಾಶವಾಗುತ್ತದೆ. ಕಾಡು ನಾಶವಾದಂತೆ, ಗಾಳಿ ಮಳೆಗೆ ತನ್ನನ್ನು ತೆರೆದುಕೊಂಡ ಮಣ್ಣು ನದಿ, ಜಲಾಶಯವನ್ನು

ಸೇರುತ್ತದೆ. ಪ್ರವಾಹಗಳು ಹೆಚ್ಚುತ್ತಿವೆ, ಅಂತರ್ಜಲದ ಮಟ್ಟ ಕುಸಿದಿದೆ, ಜಲಾಶಯಗಳು ತಮ್ಮ ಜೀವಿತಾವಧಿ ಮುಗಿಯುವ ಮೊದಲೇ ಹೂಳುತುಂಬಿ ಸಾಯುತ್ತಿವೆ. ಸದಾ ನೀರಿನಿಂದ ತುಂಬಿದ್ದ ನದಿಗಳು, ತೊರೆಗಳು ಬತ್ತುತ್ತಿವೆ. ರಾಜಸ್ಥಾನದಲ್ಲಿ ಮೇಕೆಗಳು ಬಹಳಷ್ಟು ನೆಲವನ್ನು ಮರುಭೂಮಿಯನ್ನಾಗಿಸಿದ್ದರೆ, ಹರಿಯಾಣ ಅದೇ ಕಾರಣದಿಂದ ಶುಷ್ಕ ಪ್ರದೇಶವಾಗಿ ಬದಲಾಗುತ್ತಿದೆ. ತಜ್ಞರಪ್ರಕಾರ - ಪ್ರತಿ ಕೆ.ಜಿ. ಮಾಂಸಕ್ಕೆ ಕೃಷಿ ಭೂಮಿಯ ೫ ಕೆ.ಜಿ. ಮಣ್ಣು ನಾಶವಾಗುತ್ತಿವೆ. ಈ ವಿದೇಶೀ ಉಪಹಾರ ಗೃಹಗಳು ದಿನವೊಂದಕ್ಕೆ ಒಂದು ಲಕ್ಷ ಕೋಳಿಗಳಿಗಾಗಿ, ವಾರಕ್ಕೆ ೨೫,೦೦೦ ಕುರಿಗಳಿಗಾಗಿ ಬೇಡಿಕೆ ಸಲ್ಲಿಸಿವೆ. ಮೊಕ್‌ಡೊನಾಲ್ಡ್‌ನ ಬೇಡಿಕೆಯೇ ವಾರಕ್ಕೆ ಒಂದು ಲಕ್ಷ ಕುರಿಗಳು. ಈ ಜಾನುವಾರುಗಳಿಗೆ ಮೇವನ್ನು ಒದಗಿಸುವುದು ಎಲ್ಲಿಂದ ಮತ್ತು ಮೇವು ಯಾವುದು?

ಅಮೆರಿಕಾ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಸಂಕಷ್ಟ ತಂದೊಡ್ಡಿರುವ ಎಲ್ಲ ಕಾರ್ಯಕ್ರಮಗಳನ್ನು ಭಾರತ ಸರ್ಕಾರ ಕುರುಡಾಗಿ ಅನುಸರಿಸುತ್ತಿದೆ. ಈಗಾಗಲೇ ೧೮೦ ದಶಲಕ್ಷ ಹೆಕ್ಟೇರ್ ಜಮೀನು ಬರಡಾಗಿದ್ದರೂ, ನಾವು ನಮ್ಮ ಶ್ರೀಮಂತರಿಗಾಗಿ ಕಸಾಹಾರ ಉತ್ಪತ್ತಿಮಾಡಿ, ಹಸಿದವರ ಸಂಖ್ಯೆ ಹೆಚ್ಚಲು ಕಾರಣರಾಗುತ್ತಿದ್ದೇವೆ. ಆಹಾರ ಧಾನ್ಯಗಳಿಗೆ ಬೇಡಿಕೆ ಹೆಚ್ಚುತ್ತಿರುವುದರಿಂದ ಬೆಲೆ ದಿನೇ ದಿನೇ ಏರುತ್ತಿದೆ. ಕೃಷಿ ಭೂಮಿಯಲ್ಲಿ ಬೆಳೆಯುವ ಬೆಳೆಗಳು ಶ್ರೀಮಂತರು ಮತ್ತು ರಫ್ತಿಗಾಗಿ ಮೀಸಲಾಗುತ್ತಿವೆ.

ಪೆಪ್ಸಿ ಸಂಸ್ಥೆ ಸರ್ಕಾರಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ಭಾರತದ ಕಚ್ಚಾವಸ್ತು ಮತ್ತು ಉತ್ಪನ್ನಗಳ ರಫ್ತನ್ನು, ಹೆಚ್ಚಿಸುವುದಾಗಿ ಹೇಳಿತ್ತು. ಪಶು ಆಹಾರ ಮತ್ತು ಔಷಧಿಗೆ ಇಲ್ಲಿ ಹೆಚ್ಚಿನ ಸಬ್ಸಿಡಿ ಸಿಗುತ್ತಿದೆ. ಇದನ್ನು ಬಳಸಿಕೊಂಡು ಪೆಪ್ಸಿ ಕಡಿಮೆವೆಚ್ಚದಲ್ಲಿ ಮಾಂಸ ಉತ್ಪಾದಿಸಿ, ಸಬ್ಸಿಡಿ ಸಿಗದ ಮಾರುಕಟ್ಟೆಗಳಲ್ಲಿ ಹೆಚ್ಚಿನ ಬೆಲೆಗೆ ಮಾರುತ್ತಿದೆ. ಅದರ ಕಾರ್ಯನೀತಿ ಇದು - ನನ್ನದು ನನಗಿರಲಿ ಹಾಗೆಯೇ ನಿನ್ನದೂ ನನಗಿರಲಿ. ಇಲ್ಲಿ ಕೋಡಂಗಿಯಾದದ್ದು ನಾವು !

ಉದಾರೀಕರಣ ಮತ್ತು ಅಭಿವೃದ್ಧಿ :-

ನೆಹರು ಪ್ರಾರಂಭಿಸಿದ 'ಆಧುನಿಕ ದೇವಾಲಯ' ಗಳನ್ನು ಸರ್ಕಾರ ಒಂದಲ್ಲ ಒಂದು ರೀತಿ ಪೋಷಿಸುತ್ತಾ ಬಂದಿತು. ಸರ್ಕಾರ ನಿರ್ಮಿಸಿದ ಹಂದರದ ಮೇಲೆ, ಸರ್ಕಾರದ ನೆರವಿನಿಂದ ಉದ್ಯಮಕಟ್ಟಿದವರು ಸಂಶೋಧನೆ / ಅಭಿವೃದ್ಧಿಯ ಕಡೆ ಗಮನಹರಿಸಲಿಲ್ಲ. ರಾಷ್ಟ್ರೀಯ ಸಂಶೋಧನಾಲಯಗಳ ಸಂಶೋಧನೆಯ ಲಾಭ ಪಡೆಯುತ್ತಾ, ರಾಜಕಾರಣೀ ಅಧಿಕಾರಿಗಳ ವಶೀಲಿಬಾಜಿ ಬಳಸಿ ವ್ಯವಹಾರಕ್ಕೆ ತೊಂದರೆಯಾಗದಂತೆ ಪರವಾನಗಿ ಗಿಟ್ಟಿಸಿಕೊಂಡರು. ವಿದೇಶೀ

ಸಂಸ್ಥೆಗಳಿಗೆ ಅತೀ ಹೆಚ್ಚಿನ ಹಣ ತೆತ್ತು ಪಶ್ಚಿಮದಲ್ಲಿ ಅನಗತ್ಯ, ಅಸಮರ್ಪಕವೆನ್ನಿಸಿದ್ದ ತಂತ್ರಜ್ಞಾನವನ್ನು ಆಮದುಮಾಡಿಕೊಂಡವು. ಸರ್ಕಾರಿ ಉದ್ಯಮಗಳು ತೆರಿಗೆದಾರರ ಹಣ ನುಂಗುವ ಬಿಳಿಯಾನೆಗಳಾದವು.

ಮೊದಲ ಪ್ರಯತ್ನಗಳಲ್ಲಿ ಸೋಲುಂಡ 'ಆರ್ಥಿಕ ಸರಳೀಕರಣ'ದ ಮತ್ತೊಂದು ಪ್ರಯತ್ನ ೧೯೯೧ರಲ್ಲಿ ನರಸಿಂಹರಾಯರಿಂದ ಪ್ರಾರಂಭವಾಯಿತು. ಒಂದೊಂದೇ ಕ್ಷೇತ್ರಗಳು ವಿದೇಶಿಯರಿಗೆ 'ಉದಾರೀಕರಣ'ದ ಹೆಸರಿನಲ್ಲಿ ತೆರೆಯುತ್ತಾ ಬಂದವು. ವಿದೇಶೀ ಬಂಡವಾಳ ಹೂಡಿಕೆ ಎಷ್ಟಿದೆ ಎನ್ನುವುದನ್ನೇ ಹೇಳಲು ಹಿಂಜರಿಯುತ್ತಿದ್ದ ಸರ್ಕಾರ ಮೊನ್ನೆ ನೀಡಿದ ಅಂಕಿ- ಅಂಶಗಳ ಪ್ರಕಾರ ೧೯೯೧ - ೯೨ ರಿಂದ ೧೯೯೪ - ೯೫ರ ವರೆಗೆ ಬಂದ ವಿದೇಶೀ ನೇರ ಬಂಡವಾಳ ಹೂಡಿಕೆಯ ಮೊತ್ತ ರೂ. ೪೯೦೦ ಕೋಟಿ, ಅಂದರೆ ವರ್ಷಕ್ಕೆ ರೂ. ೧೨೫೦ ಕೋಟಿ. ಇದು ಎಷ್ಟು ಸಣ್ಣ ಮೊತ್ತವೆಂದರೆ ದೇಶದ ಒಟ್ಟು ಉತ್ಪನ್ನದ (GNP) ಶೇ. ೧ ರಲ್ಲಿ ೫ನೇ ೧ ಭಾಗ ! ವಾರ್ಷಿಕ ವಿದೇಶೀ ಬಂಡವಾಳ ಹೂಡಿಕೆ ಚೀನಾದಲ್ಲಿ ೩೫ ರಿಂದ ೪೦ ಬಿಲಿಯನ್ ಡಾಲರ್ ಇದ್ದರೆ ಇಂಡೋನೇಷಿಯಾದಲ್ಲಿ ೧೦ ರಿಂದ ೧೫ ಬಿಲಿಯನ್ ಡಾಲರ್‌ನಷ್ಟಿದ್ದು, ಭಾರತದಲ್ಲಿ ಅದು ಒಂದು ಬಿಲಿಯನ್ ಡಾಲರ್ ಕೂಡಾ ಇಲ್ಲ. ಈ ಸಣ್ಣ ಮೊತ್ತಕ್ಕಾಗಿ ಪ್ರಧಾನ ಮಂತ್ರಿ, ಮುಖ್ಯಮಂತ್ರಿ ಸೇರಿದಂತೆ ಮಂತ್ರಿಮಾಗಧರು ಮಾಡಿದ ದಂಡಯಾತ್ರೆಗೆ ಲೆಕ್ಕವಿಲ್ಲ, ಮಾಡಿದ ತ್ಯಾಗ ಕೂಡಾ ಅಸದಳ. ಬಂದ ಬಂಡವಾಳ ಹೂಡಿಕೆ ನೆಡೆದದ್ದು - ಶ್ಯಾವಿಗೆ, ಬಿಸ್ಕತ್, ಲಘುಪಾನೀಯ, ನ್ಯಾಪ್‌ಕಿನ್, ಬ್ಲೇಡ್, ಟೂತ್‌ಪೇಸ್ಟ್, ಸೋಪುಗಳ ಕ್ಷೇತ್ರದಲ್ಲಿ. ಇಲ್ಲಾದರೂ ವಿದೇಶೀ ಸಂಸ್ಥೆಗಳು ಸ್ವಂತ ಕಾರ್ಖಾನೆ ಸ್ಥಾಪಿಸಿ, ಉದ್ಯೋಗಾವಕಾಶ ನೀಡಿ, ಸ್ವಂತ ಮಾರುಕಟ್ಟೆ ನಿರ್ಮಿಸಿಕೊಂಡವೇ, ಅದೂ ಇಲ್ಲ. ಇಲ್ಲಿ ಮೊದಲಿನಿಂದ ಇದ್ದ ಸಂಸ್ಥೆಗಳನ್ನು ಸಾಮ, ದಾನ, ಭೇದ, ದಂಡ ಬಳಸಿ, ಬಗ್ಗಿಸಿ, ಅವುಗಳ ಪಾಲುಗಳನ್ನು ಕೊಂಡು ಸಾಮ್ರಾಜ್ಯ ನಿರ್ಮಿಸಿದವು. ಪ್ರವಾಸೋದ್ಯಮ, ಮೋಟಾರುವಾಹನ, ಸಂಪರ್ಕಸಾಧನಗಳು ಇವೆಲ್ಲ ಮೇಲ್ವರ್ಗದ ತೆವಲುಗಳು. ಉಕ್ಕು, ವಿಮಾನ ನಿರ್ಮಾಣ, ಶಕ್ತ್ಯುತ್ಪಾದನೆ, ಆರೋಗ್ಯ ಕ್ಷೇತ್ರದಂತಹ ಮುಖ್ಯ ಕ್ಷೇತ್ರಗಳಲ್ಲಿ ಬಂದ ಬಂಡವಾಳ ನಗಣ್ಯ. ವಿದೇಶೀ ಸಂಸ್ಥೆಗಳು ಸ್ವದೇಶೀ ಸಂಸ್ಥೆಗಳನ್ನು ತಳ್ಳಿ, ಶಕ್ತ್ಯುತ್ಪಾದನಾ ಕ್ಷೇತ್ರದಲ್ಲಿ ಕಾಲಿಕ್ಕಿದವು. ಬಂದ ೫ ಯೋಜನೆಗಳಲ್ಲಿ ಎನ್ರಾನ್, ಕೋಜೆಂಟ್ರಿಕ್ಸ್, ಈ ದೇಶದಲ್ಲಿ ಸಿಗಬಹುದಾದ ಎಲ್ಲ ಲಾಭ ನುಂಗಿ, ಲಂಚ ರುಷುವತ್ತು ನೀಡಿ ಯೋಜನೆಗಳ ನಿರ್ಮಾಣಕ್ಕೆ ತೊಡಗಿವೆ.

ವಿದೇಶೀ ಸಂಸ್ಥೆಗಳು ಮತ್ತು ಅನಿವಾಸಿ ಹೈ -ಫೈ ಭಾರತೀಯರು ನೂರಾರು ಶರತ್ತುಗಳೊಡನೆ ಹೂಡಿದ ಬಂಡವಾಳಕ್ಕೆ ಹೋಲಿಸಿದರೆ, ಮಧ್ಯಪ್ರಾಚ್ಯ ದೇಶಗಳಲ್ಲಿನ ನಮ್ಮ ಕಾರ್ಮಿಕರು ಕಳಿಸುವ ಹಣದ (ಸುಮಾರು ೪,೦೦೦ ದಿಂದ ೫,೦೦೦ ಕೋಟಿ ರೂ. ವರ್ಷಕ್ಕೆ) ಪ್ರಮಾಣವೇ ಹೆಚ್ಚು. ಸರ್ಕಾರೀ

ಪೋಷಿತ ಭಾರತ ವಾಯುಯಾನ ಸಂಸ್ಥೆಯ ಮತ್ತು ಸುಂಕ ಇಲಾಖೆಯ ಸಿಬ್ಬಂದಿಗಳು ಅವರನ್ನು ಕಸದಂತೆ ನೋಡದೆ, ಸರ್ಕಾರ ಅವರನ್ನು ಉತ್ತೇಜಿಸಿದರೆ ಅವರು ಕಳಿಸುವ ಹಣ ಎಲ್ಲ ವಿದೇಶಿ ಬಂಡವಾಳವನ್ನು ಮೀರುತ್ತದೆ. ಅವರ ಒಂದೇ ದೋಷ ಅವರು punk ಇಂಗ್ಲಿಷ್ ಮಾತನ್ನಾಡರು, Ray ban ಧರಿಸರು! ಆದರೆ ಹೆದರಿಸಿ ಗಿಟ್ಟಿಸಿಕೊಳ್ಳುವ ಕರ್ಲಾಹಿಲ್ಸ್ ಇಲ್ಲಿ ಗೌರವಕ್ಕೆ ಅರ್ಹಳು. ಇದೊಂದು ವಿಪರ್ಯಾಸ.

ಆರ್ಥಿಕ ಸುಧಾರಣೆ ಫಲ ನೀಡಿದೆಯೆಂದೂ, ಎರಡಂಕೆ ಇದ್ದ ಹಣದುಬ್ಬರ ಒಂದಂಕಿಗೆ ಇಳಿದಿದೆ-ಎಂದು ಮನಮೋಹನಸಿಂಗ್ ಹೇಳುತ್ತಾರೆ. ರಿಸರ್ವ್ ಬ್ಯಾಂಕಿನಲ್ಲಿ ಶೇಖರವಾದ ಹಣವಾಗಲೀ, ಹೆಚ್ಚಿದ ವಿದೇಶೀ ಕಾಯ್ದಿಟ್ಟ ಹಣವಾಗಲೀ, ಸ್ಥಳೀಯ ಮಾರುಕಟ್ಟೆಯಲ್ಲಿ ಪದಾರ್ಥಗಳ ಬೆಲೆಯನ್ನು ತಗ್ಗಿಸದು. ಬಜೆಟ್‌ನಲ್ಲಿ ಕಡಿತಗೊಳಿಸಿದ ತೆರಿಗೆಯ ಲಾಭ ಗ್ರಾಹಕರಿಗೆ ತಲುಪುವುದೂ ಅಪರೂಪ. ಉತ್ಪಾದನೆ ಹೆಚ್ಚಿ, ರಫ್ತು ಹೆಚ್ಚಿದಂತೆ, ಅನಗತ್ಯ ವಸ್ತುಗಳ ಆಮದು ನಿಂತರೆ ಮಾತ್ರ ಆರ್ಥಿಕ ಪರಿಸ್ಥಿತಿ ಸುಧಾರಿಸೀತು. ಇಲ್ಲದಿದ್ದರೆ ಆ ಅಂಕಿಸಂಖ್ಯೆಗಳೆಲ್ಲ ಪತ್ರಿಕೆಯಲ್ಲಿ ಸ್ಥಳ ತುಂಬಿಸಲು ಬಳಕೆ ಆಗಬಹುದಷ್ಟೆ!

ಆರ್ಥಿಕ ಸರಳೀಕರಣದ ಪ್ರಕ್ರಿಯೆಯನ್ನು ಮೊದಲಿನಿಂದ ವಿರೋಧಿಸುತ್ತಾ ಬಂದವರ ಮಾತನ್ನು ಎನೇ ಯೋಜನೆಯ ಮಧ್ಯಂತರ ವರದಿ ದೃಢೀಕರಿಸಿದೆ. ವರದಿಯ ಪ್ರಕಾರ ಆರ್ಥಿಕ ಪುನರ್‌ವಿನ್ಯಾಸ ಪ್ರಾರಂಭವಾದ ನಂತರ ನಿರುದ್ಯೋಗ ಮತ್ತು ಬಡತನ ಎರಡೂ ಹೆಚ್ಚಿವೆ. ಕೆಲವು ಕ್ಷೇತ್ರಗಳಲ್ಲಿ ಹಣ ಹೂಡಿಕೆಯನ್ನು ಕಡಿಮೆಮಾಡಿದ್ದರಿಂದ ಅಭಿವೃದ್ಧಿ ಅಸಮರ್ಪಕವಾಗಿದೆ. ಆರ್ಥಿಕ ಪರಿಸ್ಥಿತಿಯು ಸ್ಥೂಲನೋಟ ತೀರಾ ಡೋಲಾಯಮಾನ ಸ್ಥಿತಿಯಲ್ಲಿದೆ. ಸ್ಥಿತ್ಯಂತರ ಸಮಯದಲ್ಲಿ ರಫ್ತಿನ ಪ್ರಮಾಣ ಹೆಚ್ಚದಿದ್ದರೆ, ದೇಶ ಮತ್ತೊಮ್ಮೆ ಸಾಲ ಹಿಂತಿರುಗಿಸಲು ಪರದಾಡಬೇಕಾಗುತ್ತದೆ. (Balance of payment crisis) ಬಜೆಟ್ ಕೊರತೆಯನ್ನು ಕಡಿಮೆ ಮಾಡಲು ಯೋಜನೇತರ ವೆಚ್ಚವನ್ನು ಕಡಿತಗೊಳಿಸಬೇಕು. ಎಲ್ಲಿಯವರೆಗೆ ಬಜೆಟ್ ಕೊರತೆ ಇರುವುದೋ ಅಲ್ಲಿಯವರೆಗೆ ಅಗತ್ಯ ವಸ್ತುಗಳ ಬೆಲೆ ತಗ್ಗದು. ವಿದೇಶೀ ಕಾಯ್ದಿಟ್ಟ ಹಣ (foreign reserve) ಹೆಚ್ಚಿದ್ದರೂ ಸಣ್ಣ ಉಳಿತಾಯ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿನ ಉಳಿತಾಯ ತೀರಾ ಕಡಿಮೆಯಾಗಿದೆ. ೧೯೯೪-೯೫ರಲ್ಲಿನ ನಿರುದ್ಯೋಗಿಗಳ ಸಂಖ್ಯೆ ೧೮.೯ ದಶಲಕ್ಷ. ಕ್ರಿ. ಶ. ೨೦೦೨ರ ಹೊತ್ತಿಗೆ ನಿರುದ್ಯೋಗ ನಿವಾರಣೆಯಾಗಬೇಕಾದರೆ ಉದ್ಯೋಗಾವಕಾಶ ಶೇ. ೩.೧ ರಷ್ಟು, ಹಣಕಾಸು ವ್ಯವಹಾರ ಶೇ. ೭ ರಷ್ಟು ಹೆಚ್ಚಬೇಕು. ಹೆಚ್ಚುತ್ತಿರುವ ಜನಸಂಖ್ಯೆ, ಕುಸಿಯುತ್ತಿರುವ ಕೈಗಾರಿಕಾ /ಕೃಷಿ ಉತ್ಪಾದನೆ, ವಿದ್ಯುತ್/ನೀರಿನ ಕೊರತೆ, ಸಾರ್ವಜನಿಕ ಹಣದ ಪೋಲು-ಇವೆಲ್ಲ ಸಮಸ್ಯೆಗಳಿಂದ ತುಂಬಿರುವ ಈ

ದೇಶದಲ್ಲಿ ಸಾಧ್ಯವೇ! ಇದಕ್ಕಿಲ್ಲ ಕಿರೀಟವಿಟ್ಟಂತೆ ಸಂಘಟಿತ ಕ್ಷೇತ್ರದಲ್ಲಿ ನಡೆಯುತ್ತಿರುವ ಉದ್ಯೋಗಿಗಳ ಮುಷ್ಕರ. ರಷ್ಯಾದ ವಿಚ್ಛೇದದ ನಂತರ ಇಡೀ ಪ್ರಪಂಚದಲ್ಲೇ ಆರ್ಥಿಕ ಬೆಳವಣಿಗೆಯ ಅಭಿವೃದ್ಧಿ ತೀರಾ ಕಡಿಮೆಯಾಗಿದೆ. ಪ್ರಧಾನಿ ತನಗಾದ ಮುಖಭಂಗವನ್ನು ತಪ್ಪಿಸಿಕೊಳ್ಳಲು ಜುಲೈ ೨೦ರಂದು ನಡೆಯಬೇಕಿದ್ದ ಯೋಜನಾ ಆಯೋಗದ ಸಭೆಯನ್ನು ಅನಿರ್ದಿಷ್ಟ ಕಾಲ ಮುಂದೆ ಹಾಕಿದರು! ಆದಾಗ್ಯೂ ದೂರದರ್ಶನದಲ್ಲಿ ಪ್ರಗತಿಯೆಡೆಗೆ ನಡೆದ ದೇಶದ ಬಗ್ಗೆ ಪದೇ ಪದೇ ಚಿಟ್ಟು ಹಿಡಿಸುವಷ್ಟು ಸಲ ಕಿರುಚಿತ್ರ ಮೂಡಿ ಬರುತ್ತಿದೆ, ಪ್ರಧಾನಿಯ ಮುಖ ಮುದ್ರೆಯ ಠಸ್ಸೆಯೊಂದಿಗೆ. ಗೋಸುಂಬೆತನದಿಂದ ತತ್‌ಕ್ಷಣದ ಲಾಭವಾಗಬಹುದು. ಅದರಿಂದ ದೇಶ ದೂರಪಯಣದಲ್ಲಿ ಬಲು ಬೆಲೆಯನ್ನು ತೆರಬೇಕಾಗುತ್ತದೆ. ಸ್ಪಷ್ಟ ಉದಾಹರಣೆಯಾಗಿ ನಮ್ಮ ಮುಂದೆ ಲ್ಯಾಟಿನ್ ಅಮೆರಿಕಾದ ದೇಶಗಳು ಇವೆ.

ಜನರ ಬದುಕಿನಲ್ಲಿ ಯಾವುದೇ ಸಮಾಧಾನಕರ ಬದಲಾವಣೆ ಆಗದಿದ್ದಲ್ಲಿ, ಈ ಎಲ್ಲ ಪದಾಡಂಬರಗಳೂ ವ್ಯರ್ಥ. ಜನರ ಆಯ್ಕೆಯ ಸ್ವಾತಂತ್ರ್ಯವನ್ನು ಹೆಚ್ಚಿಸದ ಯಾವುದೇ ಆರ್ಥಿಕ ಬೆಳವಣಿಗೆ ಅಮಾನ್ಯ. ಯಾವುದು ಅಭಿವೃದ್ಧಿ, ಯಾವುದು ಅಲ್ಲ, ಇದನ್ನು ನಿರ್ಧರಿಸುವವರು ಯಾರು ಮತ್ತು ಅದಕ್ಕೆ ಬಳಸುವ ಮಾನದಂಡ ಯಾವುದು? ಒಂದು ಮಾತು, ಬರ್ಟ್ರೆಂಡ್ ಸೆಲ್ ಹೇಳಿದ್ದು ಇಲ್ಲಿ ಪ್ರಸ್ತುತ. ಅವರು ಹೇಳುತ್ತಾ "ಜೀವಶಾಸ್ತ್ರಜ್ಞನೊಬ್ಬ ಮಾನವ ಜೀವಸ್ತರದ ಅತೀ ಮೇಲಿನ ಸ್ಥಾನದಲ್ಲಿದ್ದಾನೆ ಎಂದೂ, ಅಮೀಬಾ ಅತೀ ಕೆಳಗಿನ ಸ್ಥಾನದಲ್ಲಿದೆ ಎಂದೂ ನಿರ್ಧರಿಸಿದ. ಅದು ಆತನ ಅಭಿಪ್ರಾಯವೇ ಹೊರತು, ಆತ ಅಮೀಬಾದ ಅಭಿಪ್ರಾಯ ಕೇಳಲಿಲ್ಲ". ಇವತ್ತು ಆಗಬೇಕಾಗಿರುವುದು ಬಹುಸಂಖ್ಯಾತ ಜನ ತಮಗೇನು ಬೇಕು ಎನ್ನುವುದನ್ನು ನಿರ್ಧರಿಸಿ, ಅವರ ಆತ್ಮಾಭಿಮಾನಕ್ಕೆ ಧಕ್ಕೆ ಬರದಂತೆ ಬದುಕಲು, ತಮ್ಮ ಬದುಕನ್ನು ರೂಪಿಸಿಕೊಳ್ಳಲು ಅವಕಾಶ ನೀಡುವುದು.

ನೈತಿಕತೆಯ ಪ್ರಶ್ನೆ

ವಿಶ್ವಕೃಷಿ ಮತ್ತು ಆರೋಗ್ಯ ಸಂಸ್ಥೆ (FAO) ಪ್ರಕಾರ ಭಾರತದಲ್ಲಿ ನಿಗದಿಪಡಿಸಿದ್ದಕ್ಕಿಂತ ೧೦೦ ರಿಂದ ೧೫೦ ಪಟ್ಟು ಕೀಟನಾಶಕಗಳು ಆಹಾರದಲ್ಲಿ ಸೇರಿವೆ. ತಾಯಂದಿರ ಎದೆಹಾಲಿನಲ್ಲಿ ೪೦ ಪಟ್ಟು ಹೆಚ್ಚು ಡಿಡಿಟಿ ಇದೆ. ವಿಶ್ವದಾದ್ಯಂತ ನಿಷೇಧಿಸಲ್ಪಟ್ಟ ಆಹಾರಬಣ್ಣಗಳು, ಔಷಧಗಳು, ಕೀಟನಾಶಕಗಳು ಇಲ್ಲಿ ಬಳಸಲ್ಪಡುತ್ತಿವೆ. ಕಸಿಕಾಯಿಯನ್ನು ಬೇಗ ಹಣ್ಣು ಮಾಡಲು ಅಸಿಟಲೀನ್ ಅಥವಾ ಕಾರ್ಬೈಡ್ ಅನಿಲ ಬಳಸಲಾಗುತ್ತಿದೆ. ತರಕಾರಿಯ ತಾಜಾತನ ಉಳಿಸಲು ಬೆಂಜೀನ್ ಹೆಕ್ಸ್ ಕ್ಲೋರೈಡ್ (BHC)

ಬಳಸುತ್ತಿದ್ದಾರೆ. ಪೂರ್ವಾಪರ ವಿವೇಚನೆಯಿಲ್ಲದೆ ಬಳಸುವ ಕೀಟನಾಶಕ, ರಸಾಯನಿಕ ಗೊಬ್ಬರಗಳ ದೆಸೆಯಿಂದ ನೆಲ, ನೀರು ನಂಜಾಗಿ ಆಹಾರದಲ್ಲಿ ಸೇರುತ್ತಿವೆ.

ಸಂಪೂರ್ಣ ಕೆಟ್ಟುಹೋದ ಪರಿಸರದಲ್ಲಿ, ವಿಷವನ್ನೇ ತಿಂದು, ಕುಡಿದು, ಉಸಿರಾಡುತ್ತಿರುವಾಗ ಕೆಂಟುಕಿ ಕೋಳಿ ತಿಂದರೆ ಅಂತಹ ವಿಪತ್ತೇನೂ ಆಗದು ಎಂದು ವಾದ ಮಾಡಬಹುದು. ಮೇಲಿನ ಎಲ್ಲ ವಿಪತ್ತನ್ನು ಜನ ತಾವಾಗೇ ತಂದು ಕೊಂಡಿದ್ದಲ್ಲ, ಬದಲಿಗೆ ಸರ್ಕಾರ ಅವುಗಳನ್ನು 'ಹಸಿರು ಕ್ರಾಂತಿ' ಹೆಸರಿನಲ್ಲಿ ಹೇರಿದೆ. ಇಂದು ಬಳಸುವ 'ತೀವ್ರ ಇಳುವರಿಯ ಬೀಜಗಳು' ಸ್ಥಳೀಯ ಗಡಸು, ವೈಶಿಷ್ಟ್ಯಪೂರ್ಣ ಬೀಜಗಳನ್ನೆಲ್ಲಾ ನುಂಗಿ ; ಹೆಚ್ಚಿನ ಪ್ರಮಾಣದಲ್ಲಿ ನೀರು, ಗೊಬ್ಬರ, ಕೀಟನಾಶಕ ಬೇಡುತ್ತವೆ. ನೀರಿಗಾಗಿ ಕಟ್ಟಿದ ದೊಡ್ಡ ಜಲಾಶಯಗಳು ಕಾಡನ್ನು ನುಂಗಿದವು, ಜನ ಅಪಾರ ಸಂಖ್ಯೆಯಲ್ಲಿ (ಸುಮಾರು ೩೦ ದಶಲಕ್ಷ ಜನ) ನಿರ್ವಸಿತರಾದರು. ಇದೆಲ್ಲ ಸರ್ಕಾರ ಆರಿಸಿಕೊಂಡ ಅಭಿವೃದ್ಧಿ ನೀತಿಯ ಫಲವೇ ಹೊರತು, ಜನರನ್ನು ಕೇಳಿ ಯಾವುದೇ ಕಾರ್ಯಕ್ರಮ ರೂಪುಗೊಳ್ಳಲಿಲ್ಲ. ಜನಪ್ರತಿನಿಧಿಗಳನ್ನು ಆರಿಸಿದ್ದು ಜನ, ಹಾಗೆಂದ ಮಾತ್ರಕ್ಕೆ ಜನರ ಆಶೋತ್ತರಕ್ಕೆ ತಕ್ಕಂತೆ ಸರ್ಕಾರ ನಡೆಯುತ್ತದೆ ಎನ್ನುವುದು ಭ್ರಮೆ. "ಉತ್ತಮ ಪ್ರಭುತ್ವ ಲಂಗುಲೊಳಲೊಟ್ಟೆ" ಎಂದದ್ದು ಪುರಂದರದಾಸರು. ಯಾವ ಪ್ರಭುತ್ವ ಕಡಿಮೆ ಪ್ರಮಾಣದಲ್ಲಿ ಅಧಿಕಾರವನ್ನು ಚಲಾಯಿಸುತ್ತದೋ ಅದೇ ಉತ್ತಮ ಸರ್ಕಾರ. ಇಲ್ಲಿ ಜನರಿಗೆ ಆಯ್ಕೆಗೆ ಹೆಚ್ಚು ಸ್ವಾತಂತ್ರ್ಯವಿಲ್ಲ, ಕುರುಡುಗಣ್ಣಿನ ಬದಲು ಅವರು ಮೆಳ್ಳೆಗಣ್ಣನ್ನು ಆಯಲೇ ಬೇಕು. 'ರಾಜಕೀಯ ಪಾತಕಿಗಳಿಂದ ತುಂಬಿಹೋಗಿದೆ' ಎನ್ನುತ್ತದೆ ವೋಹ್ರಾ ಸಮಿತಿಯ ವರದಿ. ಇದರಲ್ಲಿ ಎಲ್ಲರದ್ದೂ ಪಾಲಿದೆ.

ತನಗಿಷ್ಟವಾದ ಆಹಾರದ ಆಯ್ಕೆ ಮನುಷ್ಯನ ವೈಯಕ್ತಿಕ ಹಕ್ಕು, ಅವರ ಮೇಲೆ ಯಾವುದೇ ಅಭಿಪ್ರಾಯವನ್ನು ಹೇರಬಾರದು - ಎನ್ನುವುದಾದರೆ ಹಕ್ಕು ಎನ್ನುವುದು ನಮಗೆ ದಕ್ಕುವುದು ನಮ್ಮ ಕರ್ತವ್ಯ ಸಲ್ಲಿಸಿದ ನಂತರವೇ. ಮನುಷ್ಯ ತಾನು ಬದುಕಿರುವ ಸಮಾಜಕ್ಕೆ ಬದ್ಧನಾಗಿರಬೇಕು. ಇದು ಇಂದು ಪ್ರಪಂಚದ ಹೆಚ್ಚಿನ ಜನ ಕೆಂಪುಮಾಂಸ (ಹಂದಿ, ದನ) ಬಿಟ್ಟು, ಬಿಳಿ ಮಾಂಸ (ಕೋಳಿ, ಮೀನು) ತಿನ್ನುತ್ತಿದ್ದಾರೆ ಎನ್ನುವುದಾಗಲೀ, ಸಸ್ಯಾಹಾರ ಮತ್ತು ಮಾಂಸಾಹಾರದ ನಡುವಿನ ಆಯ್ಕೆಯ ಪ್ರಶ್ನೆಯಲ್ಲ. ಬದಲಿಗೆ ನೈತಿಕತೆಯ ಪ್ರಶ್ನೆ. ನಮ್ಮಂತೆ ಈ ಭೂಗ್ರಹದ ಮೇಲೆ ಬದುಕಲು ಆ ಪ್ರಾಣಿಗಳಿಗೆ ಹಕ್ಕಿದೆ ಎನ್ನುವ ಪ್ರಜ್ಞೆಯ ಪ್ರಶ್ನೆ, ವಿವೇಕದ ಆಯ್ಕೆಯ ಪ್ರಶ್ನೆ. ಬ್ರೆಕ್ಟ್ ಒಂದೆಡೆ ಹೇಳುತ್ತಾನೆ - 'ಒಬ್ಬ ಮನುಷ್ಯ ಒಳ್ಳೆಯವನೋ, ಕೆಟ್ಟವನೋ ಎನ್ನುವುದರ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಬದಲಿಗೆ ಆತ ವಿವೇಕಿಯೋ, ಮೂರ್ಖನೋ ಎನ್ನುವುದು ನನ್ನ ಪ್ರಶ್ನೆ' ಹಿಟ್ಲರ್ ಮಾಡಿದ ಯಹೂದಿಗಳ ಮಾರಣಹೋಮ, ನಂತರ ತಲೆ ಎತ್ತಿದ ಮಕಾರ್ಥಿಯಿಸಂ,

ಜಪಾನಿಯರ ಮೇಲೆಸೆದ ಲಿಟ್ಲ್ ಮ್ಯಾನ್, ಫ್ಯಾಟ್‌ಬಾಯ್ ಬಾಂಬುಗಳು, ವಿಯಟ್ನಾಂ ಯುದ್ಧ, ಬಿದ್ದ ಮಸೀದಿ..... ಇವೆಲ್ಲ ಅವಿವೇಕದ ಫಲಗಳು. ಗಾಂಧಿ ಹೇಳುವಂತೆ ಇವೆಲ್ಲ ಮಾರ್ಗದೋಷಗಳು; ಇದರಲ್ಲಿ ಮಾನುಷ ದೋಷವೂ ಇದೆ. ಒಂದೂ ತಪ್ಪು ಮಾಡದವರು ಕಲ್ಲೆಸೆಯಿರಿ ಎಂದು ಏಸು ಹೇಳಿದಾಗ ಎಲ್ಲರೂ ಸುಮ್ಮನೆ ನಿಂತರು. ನಮ್ಮದೂ ಅಂತದ್ದೇ ಸ್ಥಿತಿ.

ಉಳಿದದ್ದು

ಸೆಪ್ಟಂಬರ್ ಒಂದನೇ ತಾರೀಖು ಬೆಂಗಳೂರು ನಗರ ಪಾಲಿಕೆಯ ಅಧಿಕಾರಿಗಳು ಕೆಂಟುಕಿ ಕೋಳಿಯಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಮನೋಸೋಡಿಯಂಗ್ಲೂಟಾಮೇಟ್ ಇದ್ದದ್ದರಿಂದ, 'ಪದಾರ್ಥಕಲಬೆರಕೆಯಾಗಿದೆ ಮತ್ತು ತಿನ್ನಲು ಯೋಗ್ಯವಲ್ಲ' ಎಂದು ನಿರ್ಧರಿಸಿ ಪೆಟ್ಟಿಗೆ ನೋಟಿಸ್ ಜಾರಿಮಾಡಿದರು. ಸಂಸ್ಥೆ ತಾನು ವಿಶ್ವಾದ್ಯಂತ ೭೮ ದೇಶಗಳಲ್ಲಿನ ೯,೪೦೦ ಅಂಗಡಿಗಳಲ್ಲಿ ಒಂದೇ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತಿದ್ದೇವೆ ಎಂದು ಹೇಳಿದ್ದಲ್ಲದೆ, ನಗರಪಾಲಿಕೆಗೆ ತನ್ನ ಮೇಲೆ ನಿಯಂತ್ರಣ ಹೇರಲು ಯಾವುದೇ ಹಕ್ಕಿಲ್ಲ ಎಂದು ಆಜ್ಞೆಯ ಸಿಂಧುತ್ವವನ್ನೇ ಪ್ರಶ್ನಿಸಿತು. ಸೆಪ್ಟೆಂಬರ್ ೧೨ ರಂದು ನಗರಪಾಲಿಕೆ ಅಂಗಡಿಯ ಲೈಸೆನ್ಸ್ ರದ್ದುಪಡಿಸಿತು. ಇದನ್ನು ರಾಜ್ಯದ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿ, ಆಜ್ಞೆಗೆ ತಡೆಹಾಕಲಾಗಿದೆ. ಮಹಾತ್ಮಾಗಾಂಧಿ ರಸ್ತೆಯಲ್ಲಿ ಅಂಗಡಿಯ ವ್ಯಾಪಾರ ಅನಿರ್ಬಂಧಿತವಾಗಿ ನಡೆದಿದೆ. ಜನವಿರೋಧದಿಂದ ಕರ್ನಾಟಕದಿಂದ ಕಾಲ್ತೆಗೆದ ಜಪಾನ್ ಟೌನ್‌ಶಿಪ್ ಹರ್‍ಯಾಣಕ್ಕೆ ಹೋದರೆ, ನಿಷೇಧಿತ ಎನ್ರಾನ್ ಮತ್ತೆ ಮಹಾರಾಷ್ಟ್ರದೊಡನೆ ಸಂಧಾನ ನಡೆಸುತ್ತಿದೆ. ಗೋವಾದಿಂದ ಕಾಲ್ತೆಗೆದ ಡುಪಾಂಟ್ ತಮಿಳುನಾಡಿಗೆ ಬಂದರೆ, ಹರಿಹರ ಪಾಲಿಫೈಬರ್ಸ್ ಸಂಸ್ಥೆ ನಿರಂತರವಾಗಿ ಜನರ ಬದುಕನ್ನು ನರಕವಾಗಿಸುತ್ತಾ ನಡೆದಿದೆ. ಕಡತಸೇರಿದ್ದ ಬೇಡ್ತಿ, ಶರಾವತಿಟೇಲ್‌ರೇಸ್ ಯೋಜನೆಗಳಿಗೆ ಮತ್ತೆ ಚಾಲನೆ ಸಿಕ್ಕಿದ್ದರೆ, ಮೇಲ್ಛಾವಣಿ ಕುಸಿದ ಕೈಗಾದ ಅಣುವಿದ್ಯುತ್ ಸ್ಥಾವರದ ನಿರ್ಮಾಣ ಮುಂದುವರಿದಿದೆ. ಸಾವಿನ ಸಾಲನ್ನೇ ಸೃಷ್ಟಿಸಿದ ಯೂನಿಯನ್ ಕಾರ್ಬೈಡ್ ಸಂಸ್ಥೆಯ ಊರು ಭೂಪಾಲ್. ಅಲ್ಲಿ ಇಂದು, ಗ್ರೀನ್‌ಪೀಸ್ ಸಂಸ್ಥೆಯ ವರದಿ ಪ್ರಕಾರ - 'ಜರ್ಮನ್ ಮತ್ತು ಹಾಲೆಂಡ್‌ನಿಂದ ಬಂದ ವಿಷವಸ್ತುಗಳನ್ನು ಸತುವಾಗಿ ಬದಲಿಸುವ ಕೆಲಸ ನಡೆದಿದೆ. ವಾತಾವರಣಕ್ಕೆ ಅತ್ಯುಗ್ರದಿಷ ಡೈಆಕ್ಸಿನ್ ಅಲ್ಲದೆ ಅಪಾರ ಸೀಸವನ್ನು ತುಂಬಲಾಗುತ್ತಿದೆ. ರಕ್ಷಣಾಕವಚಗಳಿಲ್ಲದೆ ಹೆಣ್ಣು ಮಕ್ಕಳು / ಮಕ್ಕಳು ಕೆಲಸ ಮಾಡುತ್ತಿದ್ದಾರೆ' ಕಳೆದ ಮಾರ್ಚ್‌ನಲ್ಲಿ ಆಫ್ರಿಕಾದಲ್ಲಿ ವಿಷವಸ್ತುವನ್ನು ತುಂಬುತ್ತಿರುವುದರ ಬಗ್ಗೆ ಪರಿಶೀಲಿಸಲು ಮಾನವರ ಹಕ್ಕುಗಳ ಆಯೋಗ ವಿಶೇಷ ಪ್ರತಿನಿಧಿಯೊಬ್ಬನನ್ನು ನೇಮಿಸಿತ್ತು. ಛೀಮಾರಿ ಹಾಕಿಸಿಕೊಂಡ ಅದೇ ಸಂಸ್ಥೆಗಳು ಈಗ ಭಾರತವನ್ನು ಕಸದ ತೊಟ್ಟಿಯಾಗಿಸಿವೆ. ಕುದುರೆಮುಖವನ್ನು ಸಮಾಧಿ ಮಾಡಿದ ಜಯಪ್ರಕಾಶ್

ಸಂಸ್ಥೆ ತುಂಗಾ ಮೂಲಕ್ಕೆ ಕೈ ಇಟ್ಟಿತ್ತು. ಜನವಿರೋಧಕ್ಕೆ ಹೆದರಿ ಕೈ ಹಿಂತೆಗೆದುಕೊಂಡಿತು. ಈಗ ಪ್ರಪಂಚದಲ್ಲೇ ಮಳೆ ಮತ್ತು ಸೂರ್ಯಾಸ್ತಕ್ಕೆ ಪ್ರಸಿದ್ಧಿಯಾದ ಆಗುಂಬೆಯನ್ನು ನಾಶಮಾಡಲು ನವೀನ್ ಕಂಪನಿ (NMCC) ಹೊರಟಿದೆ. ಯಾವುದೇ ಇಲಾಖೆಗಳ ಅನುಮತಿಯಿಲ್ಲದೆ, ಮಲಾಪಹಾರಿ ನದಿಯ ಪಕ್ಕದಲ್ಲಿ ಜೇಡಿ ಸಂಸ್ಕರಣೆಯ ಕಾರ್ಯ ಪ್ರಾರಂಭಿಸಿದೆ. ೨ ವ್ಯಾಲಿ ರಿಸಾರ್ಟ್‌ಗಳು, ಜಪಾನಿ ಗಾಲ್ಫ್ ಕ್ಲಬ್ ಪ್ರವಾಸೋದ್ಯಮದ ಹೆಸರಿನಲ್ಲಿ ನುಗ್ಗಲು ಕಾಯ್ದುನಿಂತಿವೆ. ಇವೆಲ್ಲ ಬಂಡವಾಳ ಹೂಡಿಕೆ, ಮುಕ್ತ ಆರ್ಥಿಕ ನೀತಿ, ಇತ್ಯಾದಿ ಪದ ಪುಂಜಗಳ ಬೇರೆ ಬೇರೆ ಮುಖಗಳು.

ಉದ್ಯಮಕ್ಕೆ ಲಾಭವೇ ಮುಖ್ಯ. ಭ್ರಷ್ಟ ಅಧಿಕಾರಿ, ರಾಜಕಾರಣಿ, ಮತ್ತು ಉದ್ಯಮಿಗಳ ಕೂಟ ಜನಜೀವನದ ಜೊತೆ ಎಲ್ಲೆಡೆ ಆಟವಾಡುತ್ತಿದೆ. ಪೆಪ್ಸಿ ಅಥವಾ ಯಾವುದೇ ಸ್ವದೇಶಿ ಅಥವಾ ವಿದೇಶೀ ಸಂಸ್ಥೆ ತನ್ನ ವಿರುದ್ಧ ನಡೆಯುವ ಚಳುವಳಿಗೆ ಬೆದರಿ ಸುಮ್ಮನಿದ್ದೀತೆಂದು ತಿಳಿಯುವುದು ಮೂರ್ಖತನ. ತನ್ನೆಲ್ಲ ವಶೀಲಿಬಾಜಿ ಬಳಸಿ, ಶಾಶ್ವತವಾಗಿ ತಮ್ಮ ವ್ಯವಹಾರ ಮುಂದುವರಿಸಲು ಪ್ರಯತ್ನಿಸುತ್ತವೆ. ತೀವ್ರ ಜನಾಂದೋಳನದಿಂದಷ್ಟೆ ಇಂತಹ ಕಳೆಗಳ ನಾಶ ಸಾಧ್ಯ.

ಯಶವಂತ ಚಿತ್ತಾಲರ ಕಾಂದಂಬರಿ 'ಶಿಕಾರಿ' ಯಲ್ಲಿ ನಾಯಕ ನಾಗಪ್ಪನನ್ನು ಬೇಟೆಯಾಡಲು ಹುಟ್ಟಿಕೊಂಡ ತಂಡದಲ್ಲಿನ ಒಬ್ಬ ಧೂರ್ತ ಡಾ. ದಸ್ತೂರ್. ಆತ ನಾಗಪ್ಪನಿಗೆ ಹೇಳುತ್ತಾನೆ - 'ಈ ಹೊಸಜಗತ್ತಿನಲ್ಲಿ ವಿಸಂಗತಿಯಿಲ್ಲದ್ದು ಸತ್ಯ'. ಕೊನೆಗೆ ಉಳಿಯುವುದು - ಋತವೇ, ಅನೃತವೇ ?

○



ಬಾಲ್ಯಕಾಲ



ಡಾ. ಸಿದ್ಧಲಿಂಗಯ್ಯ

ಬಾಲ್ಯಕಾಲ - ಭಾಗ ೩

ಬೆಳಗ್ಗೆಯಿಂದ ಸಂಜೆಯ ತನಕ ಬೀದಿಬೀದಿ ಅಲೆದು ಕತ್ತಲಾಗುತ್ತಿದ್ದಂತೆ ಶಾಲೆಗೆ ಹೋಗುತ್ತಿದ್ದೆ. ಶಾಲೆಯ ಉಪಾಧ್ಯಾಯರು ಹುಡುಗರನ್ನು ಕಠಿಣ ದಂಡನೆಗೆ ಒಳಪಡಿಸುತ್ತಿದ್ದರು. ಚೆನ್ನಾಗಿ ಪಾಠ ಹೇಳಿಕೊಡುತ್ತಿದ್ದರು. ಆದರೆ ಅವರು ಹೇಳುತ್ತಿದ್ದ ಕೆಲವು ಸುಳ್ಳುಗಳು ನಿಜದ ತಲೆಯ ಮೇಲೆ ಹೊಡೆದಂತೆ ಇರುತ್ತಿದ್ದವು. ಆ ಮಾತುಗಳನ್ನು ಹುಡುಗರು ನಿಜವೆಂದೇ ಭಾವಿಸಿದ್ದರು.

ರಾತ್ರಿ ಒಂಭತ್ತು ಗಂಟೆಗೆ ಗುರುಗಳು ಪಾಠ ಮುಗಿಸುತ್ತಿದ್ದರು. ಅವರ ಹತ್ತಿರ ವಾಚಿರಲಿಲ್ಲ. ಆದ್ದರಿಂದ ದೊಡ್ಡ ಹುಡುಗರನ್ನು "ಯಾರ್ದಾದ್ರು ಮನೇಲಿ ಗಡಿಯಾರ ಇದ್ರೆ ಟೈಮ್ ಕೇಳ್ಕಂಡ್ ಬನ್ರೋ" ಎಂದು ಕಳುಹಿಸುತ್ತಿದ್ದರು. ಆ ಹುಡುಗರು ಕೆಲವು ಸಲ ಎಂಟೂವರೆ, ಎಂಟೂಮುಕ್ಕಾಲು ಆಗಿದ್ದರೂ ಒಂಭತ್ತು ಗಂಟೆ ಎಂದು ಹೇಳಿಬಿಡುತ್ತಿದ್ದರು. ಇದರಿಂದ ನಮ್ಮ ಕೃತಜ್ಞತೆಗೆ ಪಾತ್ರರಾಗಿದ್ದರು. ಒಂದು ಹುಡುಗ ಮೇಷ್ಟರನ್ನು "ಸಾರ್ ನಿಮ್‌ಹತ್ರ ಯಾಕ್ ಸಾರ್ ವಾಚಿಲ್ಲ" ಎಂದು ಕೇಳಿಬಿಟ್ಟ. ಮೇಷ್ಟರು ಅವನಿಗೆ ಚೆನ್ನಾಗಿ ಬಾರಿಸುತ್ತಾರೆ ಎಂದು ಭಾವಿಸಿ ನಾವು ಅಂಜಿದೆವು. ಆದರೆ ಗುರುಗಳು ಶಾಂತರಾಗಿಯೇ ಹೇಳಿದರು. ಅವರು ಹೇಳಿದಂತೆ ಅವರ ಹತ್ತಿರ ಜುಜುಬಿ ವಾಚಲ್ಲ ಚಿನ್ನದ ವಾಚೇ ಇತ್ತು. ಮೇಷ್ಟರಾಗುವುದಕ್ಕಿಂತ ಮೊದಲೇ ಅವರು ವಿಮಾನದಲ್ಲಿ ಪೈಲೆಟ್ ಆಗಿ ಕೆಲಸ ಮಾಡುತ್ತಿದ್ದರು. ಒಂದು ಸಲ ಏರೋಪ್ಲೇನನ್ನು ಬಿಡುತ್ತಿರುವಾಗ ಇವರಿಗೆ ಬಾಯಾರಿಕೆ ಆಯಿತು. ಕುಡಿಯಲು ನೀರಿಲ್ಲ. ಹೇಗೂ ಮೇಲಿದ್ದರಲ್ಲ, ಕೆಳಕ್ಕೆ ನೋಡಿದರು. ವಿಶಾಲವಾದ ಅರಬ್ಬಿ ಸಮುದ್ರ. ಕೂಡಲೇ ವಿಮಾನವನ್ನು ಕೆಳಕ್ಕೆ ತಂದರು. ವಿಮಾನವನ್ನು ಹಾಗೇ ಬ್ಯಾಲೆನ್ಸಿನಲ್ಲಿ ನಿಲ್ಲಿಸಿ ಕಿಟಕಿಯಿಂದ ಎರಡೂ ಕೈಚಾಚಿ ಅರಬ್ಬೀಸಮುದ್ರದ ನೀರನ್ನು ಬೊಗಸೆಯಲ್ಲಿ ತೆಗೆದುಕೊಂಡು ಕುಡಿಯಬೇಕು ಅನ್ನುವಷ್ಟರಲ್ಲಿ ಕೈಯ್ಯಲ್ಲಿದ್ದ ಚಿನ್ನದ ವಾಚು ಕಳಚಿಕೊಂಡು ಸಮುದ್ರಕ್ಕೆ ಬಿದ್ದು ಹೋಯಿತು. ಮಾಸ್ಟರು ಚಿನ್ನದ ವಾಚು ಹೋದರೆ ಹೋಗಲಿ, ಸದ್ಯ ಪ್ರಾಣ ಉಳಿದರೆ ಸಾಕಪ್ಪ ಎಂದುಕೊಂಡು ಶೀಘ್ರವಾಗಿ

ವಿಮಾನವನ್ನು ಮೇಲಕ್ಕೆ ತಂದು ಪ್ರಾಣಾಪಾಯದಿಂದ ಪಾರಾದರು. ಈ ಪ್ರಕರಣ ನಡೆದುದರಿಂದ ಇಂದು ಅವರ ಕೈಯ್ಯಲ್ಲಿ ವಾಚಿಲ್ಲ. ಈ ವಿಚಾರವನ್ನು ಗುರುಗಳು ಹುಡುಗರ ಮನಮುಟ್ಟುವಂತೆ ಹೇಳುತ್ತಿದ್ದರು. ಈ ಸಂಗತಿಯನ್ನು ನಾನು ಬಹಳ ವರ್ಷ ನಂಬಿದ್ದೆ.

ಅಂಡಾಳಮ್ಮನವರ ಮಮತೆ

ಸ್ಮಶಾನದ ಹತ್ತಿರ ಒಂದು ಸರ್ಕಾರಿ ಪ್ರಾಥಮಿಕ ಪಾಠಶಾಲೆಗೆ ಸೇರಿದೆ. ಒಂದು ಮತ್ತು ಎರಡನೇ ತರಗತಿಯನ್ನು ಮಾಗಡಿ ಮಂಚನಬೆಲೆಯಲ್ಲಿ ಮುಗಿಸಿದ್ದರಿಂದ, ನೇರವಾಗಿ ಮೂರನೆಯ ತರಗತಿಗೆ ಸೇರಿದೆ. ಆ ಶಾಲೆಯಲ್ಲಿ ಅಂಡಾಳಮ್ಮ ಎಂಬ ಉಪಾಧ್ಯಾಯಿನಿ ಇದ್ದರು. ಅವರದು ಪ್ರೀತಿ ಮತ್ತು ಕರುಣೆ ತುಂಬಿದ ಮುಖ. ಆಗಾಗ ಮನೆಯಿಂದ ಪುಳಿಯೋಗರೆ ಮಾಡಿಸಿಕೊಂಡು ತಂದು ತರಗತಿಯ ಮಕ್ಕಳಿಗೆ ಮಿಡಿಕೆ ಮಾಡಿ ಹಂಚುತ್ತಿದ್ದರು. ಆಗ ನನಗೆ ಇದರ ಹೆಸರೂ ಗೊತ್ತಿರಲಿಲ್ಲ. ಅದನ್ನು ತಿಂದದ್ದು ಅದೇ ಮೊದಲು. ನಾನು ಶಾಲೆಗೆ ಒಂದು ನೀಲಿ ಚಡ್ಡಿ ಮತ್ತು ಬಿಳಿ ಅಂಗಿಯನ್ನು ಹಾಕಿಕೊಂಡು ಹೋಗುತ್ತಿದ್ದೆ. ತರಗತಿಯಲ್ಲಿ ಚೆನ್ನಾಗಿ ಓದುತ್ತಿದ್ದುದರಿಂದ ಮೇಡಂ ನನ್ನ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದರು.

ಒಂದು ದಿನ ತರಗತಿಯಲ್ಲಿ ಬಡ ವಿದ್ಯಾರ್ಥಿಗಳು ಎದ್ದು ನಿಂತುಕೊಳ್ಳಿ ಎಂದರು. ಕೆಲವರು ಎದ್ದು ನಿಂತರು. ಮೇಡಂ ಅವರಿಗೆಲ್ಲ ಸರ್ಕಾರದಿಂದ ಬಂದಿದ್ದ ಉಚಿತ ಪುಸ್ತಕ ಪೆನ್ಸಿಲ್ಲುಗಳನ್ನು ಹಂಚಿದರು. ನಾನು ಹಾಗೇ ಕುಳಿತಿದ್ದೆ. ಮೇಡಂ ನನ್ನನ್ನು ಸ್ಥಿತಿವಂತರ ಹುಡುಗನೆಂದು ಭಾವಿಸಿರಬೇಕು. ಒಂದು ದಿನ ನನ್ನ ತಂದೆ ನನ್ನನ್ನು ಹುಡುಕಿಕೊಂಡು ಶಾಲೆಗೆ ಬಂದನು. ಮೇಡಂ ನನ್ನ ತಂದೆಯನ್ನು ನೋಡಿರಲಿಲ್ಲ. ಅವರಿಗೆ ಬಂದವನು ನನ್ನ ತಂದೆ ಎಂದು ಗೊತ್ತಾಗಿ ತುಂಬಾ ವ್ಯಥೆ ಪಟ್ಟರು. ಬಡ ವಿದ್ಯಾರ್ಥಿಗಳು ನಿಂತುಕೊಳ್ಳಿ ಎಂದಾಗ ಯಾಕೆ ನಿಲ್ಲಲಿಲ್ಲ ಎಂದು ಕೋಪಗೊಂಡರು. ತಂದೆಯ ಹರಕು ಬಟ್ಟೆ, ದೈನ್ಯ, ಕ್ಷೌರವಿಲ್ಲದ ಮುಖ ಆತ ಬಡವನೆಂದು ಹೇಳುತ್ತಿತ್ತು. ಮೇಡಂ ಕೂಡಲೇ ಬಡ ವಿದ್ಯಾರ್ಥಿಗಳಿಗೆ ಕೊಡುವ ಪುಸ್ತಕ ಪೆನ್ಸಿಲ್ಲುಗಳನ್ನು ಆಫೀಸು ರೂಮಿನಿಂದ ತರಿಸಿಕೊಟ್ಟರು. ನಾನು ಅತಿ ಬಡವನ ಮಗನೆಂದು ತಿಳಿದ ಮೇಲೆ ಇನ್ನೂ ಹೆಚ್ಚಿನ ಮಮತೆಯನ್ನು ತೋರಿದರು.

ನಮ್ಮ ಕೇರಿಯ ಜನಕ್ಕೆ ತಮ್ಮ ಮಕ್ಕಳು ಚೆನ್ನಾಗಿ ಓದಿ ಮುಂದೆ ಬರಬೇಕೆಂಬ ಆಸೆ ಬಲವಾಗಿತ್ತು. ಆದ್ದರಿಂದ ಒಂದು ಮನೆಯಲ್ಲಿ ತಂದೆ, ಶಾಲೆಗೆ ಹೋಗುತ್ತಿದ್ದ ಮಗನನ್ನು ಸಂಜೆಯಾಗುತ್ತಲೇ ಸೀಮೆಣ್ಣೆ ಬುಡ್ಡಿಯ ಮುಂದೆ ಕೂರಿಸಿ ಪಾಠ ಓದು ಎಂದು ಪುಸ್ತಕ ಮುಂದಿಡುತ್ತಿದ್ದನು. ಅವನು ಓದುವುದನ್ನು ನೋಡಲು ಅವನ ತಾಯಿ, ಅಣ್ಣ ಎಲ್ಲರೂ ಸೇರುತ್ತಿದ್ದರು. ಹುಡುಗ ನಾಲ್ಕನೇ ತರಗತಿಯವನಾದರೂ ಅಕ್ಷರಮಾಲೆಯೂ ಸರಿಯಾಗಿ ಗೊತ್ತಿರಲಿಲ್ಲ. ಪಾಠ ಓದುವುದಂತೂ ಸಾಧ್ಯವೇ

ಇರಲಿಲ್ಲ. ಇವನಿಗೆ ಬರುವುದಿಲ್ಲ, ತಂದೆ ತಾಯಿ ಬಿಡುವುದಿಲ್ಲ. ತನ್ನ ಮಗ ಪುಸ್ತಕ ಓದುವುದನ್ನು ಕಿವಿಯಾರೆ ಕೇಳಿ ಆನಂದಿಸುವ ಹೆತ್ತವರ ಆಸೆಗೆ ಭಂಗ ತರುವುದು ಹುಡುಗನಿಗೆ ಇಷ್ಟವಾಗಲಿಲ್ಲ. ಹುಡುಗ ಏನೇನೋ ಓದತೊಡಗಿದ. ಪುಸ್ತಕದಲ್ಲಿ ಇರುವುದೊಂದು ಇವನು ಹೇಳುವುದೊಂದು. ಅಕ್ಷರಗಳನ್ನು ಓದುವವನಂತೆ ನಟಿಸುತ್ತಾ ಯಾವುದೋ ಹೊಳೆದ ತಿಳಿದ ವಿಚಾರಗಳನ್ನು ಹೇಳುತ್ತಿದ್ದ. ಇದನ್ನು ಕೇಳಿದ ತಂದೆಗೆ ಆನಂದ, ತಾಯಿಗೆ ಸಂತೋಷ, ಅಣ್ಣನಿಗೆ ಹೆಮ್ಮೆ. ಇವನು ಒಂದೊಂದು ಪಂಕ್ತಿ ಸುಳ್ಳು ಓದಿದರೆ ತಂದೆ, ತಾಯಿ, ಅಣ್ಣ ಅವನಿಗೆ ಕ್ರಮವಾಗಿ ಕಾಸನ್ನು ಅಲ್ಲೇ ಪ್ರೋತ್ಸಾಹಧನದಂತೆ ನೀಡುತ್ತಿದ್ದರು. ಹೀಗೆ ನನ್ನ ಆ ಗೆಳೆಯನಿಗೆ ಸರಸ್ವತಿ ಒಲಿಯದಿದ್ದರೂ ಲಕ್ಷ್ಮಿ ಮಾತ್ರ ದಿನವೂ ಜೇಬು ಸೇರುತ್ತಿದ್ದಳು.

ಏ! ಐಸ್‌ಕ್ಯಾಂಡಿ

ಒಬ್ಬ ಹುಡುಗ ಆಗಾಗ ನಮ್ಮ ಬೀದಿಯಲ್ಲಿ ಐಸ್‌ಕ್ಯಾಂಡಿ ಮಾರಲು ಬರುತ್ತಿದ್ದ. ತಿನ್ನುವ ಆಸೆಯಿದ್ದರೂ ಕೊಳ್ಳುವ ಶಕ್ತಿ ಇಲ್ಲದೆ ನಾನು ಸುಮ್ಮನಾಗುತ್ತಿದ್ದೆ. ಐಸ್‌ಕ್ಯಾಂಡಿ ಮಾರುವ ಹುಡುಗ ನನಗಿಂತ ದೊಡ್ಡವನು. ನಮ್ಮ ಶಾಲೆಯ ಪಕ್ಕದಲ್ಲಿದ್ದ ಹೈಸ್ಕೂಲು ಮುಂದುಗಡೆ ಅವನು ನಿಂತಿದ್ದ. ದೂರದಲ್ಲಿದ್ದುದರಿಂದ ನಾನು 'ಏ ಐಸ್‌ಕ್ಯಾಂಡಿ' ಎಂದು ಕೂಗಿದೆ. ಕೋಪಗೊಂಡ ಅವನು ನನ್ನ ಜೊತೆ ಜಗಳಕ್ಕೆ ಬಂದು ಇನ್ನೊಂದು ಸಲ ಹಾಗೆ ಕರೆಯಬಾರದೆಂದು ಹೆದರಿಸಿದ. ಅವನ ಕೈಯ್ಯಲ್ಲಿ ಐಸ್‌ಕ್ಯಾಂಡಿ ಡಬ್ಬದ ಬದಲು ಪುಸ್ತಕ ಇದ್ದವು. ಅವನು ಆ ಹೈಸ್ಕೂಲಿನ ವಿದ್ಯಾರ್ಥಿ. ಜೊತೆಗೆ ಓದಿನಲ್ಲಿ ಮುಂದಿದ್ದವನು. ಶಾಲೆ ಬಿಟ್ಟ ಮೇಲೆ, ರಜಾ ದಿನಗಳಲ್ಲಿ ಐಸ್‌ಕ್ಯಾಂಡಿ ಮಾರಿ ಓದಲು ಹಣ ಸಂಪಾದಿಸುತ್ತಿದ್ದ. ಕ್ರಮೇಣ ನಾನೂ ಆತನೂ ಹತ್ತಿರದ ಗೆಳೆಯರಾದೆವು. ಇಂದು ಆತ ಕರ್ನಾಟಕ ಸರ್ಕಾರದ ಉನ್ನತ ಅಧಿಕಾರಿ.

ಶಾಲೆಯಲ್ಲಿ ಆಟಕ್ಕೆ ಬಿಟ್ಟಾಗ ಹಣವಿದ್ದ ಹುಡುಗರು ಅದೂ ಇದೂ ಕೊಂಡು ತಿನ್ನುತ್ತಿದ್ದರು. ಏನಾದರೂ ತಿನ್ನುವ ಆಸೆ ಆದರೆ ಹಣವಿಲ್ಲ. ಅದಕ್ಕೆ ನಾವು ಇಬ್ಬರು ಮೂವರು ಹುಡುಗರು ಒಂದು ಉಪಾಯ ಮಾಡುತ್ತಿದ್ದೆವು. ಒಬ್ಬ ದಾಂಡಿಗ ಶಾಲೆಯ ಮುಂದೆ ಕಡ್ಲೆಕಾಯಿಯನ್ನು ಒಂದು ಗೋಣಿಚೀಲದ ಮೇಲೆ ಹರಡಿಕೊಂಡು ಮಾರಾಟ ಮಾಡುತ್ತಿದ್ದ. ನಾವು ಮೂರೂ ಜನ ಜಗಳವಾಡುವವರಂತೆ ನಟಿಸುತ್ತಿದ್ದೆವು. ಹೊಡೆತ ತಿಂದಂತೆ ನಟಿಸುವ ನಮ್ಮಲ್ಲೊಬ್ಬ ಗಾಬರಿಯಾದವನಂತೆ ಗೋಣಿಚೀಲದ ಮೇಲೆ ಬಿದ್ದುಬಿಡುತ್ತಿದ್ದ. ಸಣ್ಣ ವ್ಯಾಪಾರಿ ದಾಂಡಿಗ ಕೆಳಗೆ ಬಿದ್ದವನ ಪರ ವಹಿಸಿಕೊಂಡು ನಮ್ಮನ್ನು ಬಯ್ಯುತ್ತಿದ್ದಂತೆ ಬಿದ್ದವನು ಸಾಕಷ್ಟು ಕಡ್ಲೆಕಾಯಿಯನ್ನು ಜೇಬಿಗೆ ಸೇರಿಸುತ್ತಿದ್ದ. ನಂತರ ವ್ಯಾಪಾರಿಗೆ ಗೊತ್ತಾಗದಂತೆ ನಾವು ಕಡ್ಲೆಕಾಯಿ ತಿನ್ನುತ್ತಿದ್ದೆವು. ನಮ್ಮ

ಜಗಳ ಹುಸಿಯಾದುದೆಂದು ದಾಂಡಿಗನಿಗೆ ಸುಳಿವು ಸಿಕ್ಕುತ್ತಲೇ ನಾವು ಜಗಳವಾಡುವುದನ್ನೂ, ಅತ್ತಕಡೆ ಹೋಗುವುದನ್ನೂ ನಿಲ್ಲಿಸಿಬಿಟ್ಟೆವು.

ಈ ವೇಳೆಗಾಗಲೇ ನಾನು ಚೆನ್ನಾಗಿ ಓದುವ ಹುಡುಗ ಎಂದು ನಮ್ಮ ಕೇರಿಯಲ್ಲಿ ಹೇಗೋ ಗೊತ್ತಾಗಿತ್ತು. ತಂಟೆಕೋರತನದ ಬಗ್ಗೆಯೂ ತಿಳಿದಿತ್ತು. ತಮಗೆ ಊರಿನಿಂದ ಬರುವ ಕಾಗದಗಳನ್ನು ಓದಿಸಿ ಕೇಳುವ ಅಗತ್ಯ ಬಹಳ ಜನರಿಗಿತ್ತು. ನಾನು ಆ ಅಗತ್ಯವನ್ನು ಚೆನ್ನಾಗಿ ಪೂರೈಸಿದೆ. ಕಾಗದ ಬಂದರೆ ಕಾಗದ ಬಂದ ಮನೆಯವರು ನನ್ನನ್ನು ತಮ್ಮ ಮನೆಗೆ ಕರೆಯುತ್ತಿದ್ದರು. ಮನೆಗೆ ಹೋದಾಗ ಗೌರವದಿಂದ ಕೂರಿಸುತ್ತಿದ್ದರು. ಏನಾದರೂ ತಿಂಡಿ ಇದ್ದರೆ ಕೊಡುತ್ತಿದ್ದರು. ನಂತರ ಕಾಗದ ಕೈಗಿಡುತ್ತಿದ್ದರು. ಕಾಗದ ಓದುವುದನ್ನು ಒಂದು ಆಚರಣೆ ಎಂಬಂತೆ ನಾನು ಮಾಡುತ್ತಿದ್ದೆ. ಓಂ, ಶ್ರೀ, ಕ್ಷೇಮ ಇವೆಲ್ಲವನ್ನೂ ಓದಿ ಕಾಗದದ ಮಹತ್ವವನ್ನು ಅವರಿಗೆ ಮನವರಿಕೆ ಮಾಡಿಕೊಡುತ್ತಿದ್ದೆ. ವಿಷಯವನ್ನು ಓದುವುದು ಮಾತ್ರವಲ್ಲ ವಿವರಣೆಯನ್ನೂ ಕೊಡುತ್ತಿದ್ದುದರಿಂದ ಆ ಮನೆಯವರಿಗೆ ಬಹಳ ಸಂತೋಷವಾಗುತ್ತಿತ್ತು. ಕೆಲವರು ಅವರ ಬಂಧುಗಳಿಗೆ ನನ್ನಿಂದ ಕಾಗದ ಬರೆಸುತ್ತಿದ್ದರು. ಆಗ ತಿಂಡಿ ಯಥೇಚ್ಛವಾಗಿ ಸಿಗುತ್ತಿದ್ದುದಲ್ಲದೆ ಕಾಸೂ ಸಿಗುತ್ತಿತ್ತು. ಪ್ರೇಮ ಪತ್ರ ಬರುತ್ತಿದ್ದ ಕೆಲವರಿಗಂತೂ ನಾನು ದೈವಸಮಾನನಾಗಿದ್ದೆ. ಅವರು ಕೊಡುತ್ತಿದ್ದ ಸಂಭಾವನೆ ಬಹು ಆಕರ್ಷಣೀಯವಾಗಿತ್ತು.

ಒಂದು ದಿನ ಗೆಳೆಯನೊಬ್ಬ ನನ್ನ ಮನೆಯ ಬಳಿ ಬಂದು ಹೊರಕ್ಕೆ ಕರೆದ. ಅವನು ನನಗೆ ಆತ್ಮೀಯ. ಅವನ ಬಳಿ ತಿಂಡಿಯಾಗಲೀ, ಚಿಂತೆಯಾಗಲೀ ಏನೇ ಇದ್ದರೂ ನನ್ನೊಡನೆ ಹಂಚಿಕೊಳ್ಳುತ್ತಿದ್ದ. ಇಂದು ಹೋಟೆಲಿಗೆ ಹೋಗೋಣ ಬಾ ಎಂದು ಕರೆದ. ನಾನು 'ಹಣ ' ಎಂದೆ. ಅದಕ್ಕವನು 'ಅದರ ಚಿಂತೆ ನನಗಿರಲಿ' ಎಂದ. ದಾರಿಯಲ್ಲಿ ಸಿಕ್ಕಿದ ಇನ್ನೂ ಇಬ್ಬರನ್ನು ಜೊತೆಗೆ ಸೇರಿಸಿಕೊಂಡ. ನಮ್ಮ ಪ್ರಯಾಣ ಹೋಟೆಲಿನತ್ತ ಸಾಗಿತು. ನಾನು ಹೋಟೆಲಿಗೆ ಹೋಗುತ್ತಿರುವುದು ಇದೇ ಮೊದಲು. ಬಹುಶಃ ಉಳಿದವರೂ ಮೊದಲ ಸಲ ಹೋಗುತ್ತಿದ್ದರು. ಸಂಭ್ರಮ, ಆತಂಕದಿಂದ ನಾವು ಹೋಟೆಲನ್ನು ಪ್ರವೇಶಿಸಿದೆವು. ಖಾಲಿಯಿದ್ದ ಟೇಬಲ್ಲಿನ ಸುತ್ತ ಕುಳಿತೆವು. ಗೆಳೆಯ ಆತ್ಮ ವಿಶ್ವಾಸದಿಂದ ಆರ್ಡರ್ ಮಾಡಿದ. ಇಡ್ಲಿ, ದೋಸೆ ಏನೇನೋ. ಚಟ್ನಿ, ಸಾಗು ನೋಡಿದ ನನ್ನ ಆನಂದಕ್ಕೆ ಪಾರವೇ ಇರಲಿಲ್ಲ. ಚಟ್ನಿ, ಸಾಗು ಇಡ್ಲಿ ದೋಸೆಗೆ ಪೂರಕ ಎಂಬ ಅರಿವೂ ನನಗಿರಲಿಲ್ಲ. ಅದನ್ನೂ ಪ್ರಧಾನ ತಿಂಡಿ ಎನ್ನುವಂತೆ ಬಾರಿಸಿದೆ. ನನ್ನ ಗೆಳೆಯನ ಬಗ್ಗೆ ಧನ್ಯತೆ ಕೃತಜ್ಞತೆ ಮೂಡತೊಡಗಿತು. ಅವನೇ ನಮ್ಮ ನಿಜವಾದ ನಾಯಕ ಎನ್ನುವ ಭಾವನೆ ಬೆಳೆಯತೊಡಗಿತು. ಕಾಫಿ ಕುಡಿಯುವಷ್ಟರಲ್ಲಿ ಒಂದು ಸಣ್ಣ ಘಟನೆ ನಡೆಯಿತು. ಹೋಟೆಲ್ಲಿನ ಇನ್ನೊಂದು ಮೂಲೆಯಲ್ಲಿದ್ದ ಹಿರಿಯ ಗಿರಾಕಿಯೊಬ್ಬ ನಮ್ಮನ್ನು ಬಹಳ ಹೊತ್ತಿನಿಂದ ಅಸಹನೆಯಿಂದ ಗಮನಿಸುತ್ತಿದ್ದ. ಅವನ ಅಸಹನೆಯ ಕಟ್ಟೆಯೊಡೆದಾಗ ಅವನು

ರುಜುವಾತು

ನಮ್ಮ ಟೇಬಲ್ಲಿನ ಹತ್ತಿರ ಬಂದು ಕೂಗಾಡತೊಡಗಿದ. "ನೀವು ಚಿಕ್ಕ ಹುಡುಗರು ಇಷ್ಟೊಂದು ತಿಂಡಿ ತಿನ್ನಲು ನಿಮಗೆ ದುಡ್ಡು ಎಲ್ಲಿಂದ ಬಂತು" ಎಂದು ಗದರಿದ. ನನ್ನ ಗೆಳೆಯ "ನಮ್ಮ ಮನೆಯಲ್ಲಿ ಕೊಟ್ಟರು" ಎಂದ. ಹಿರಿಯ ಗಿರಾಕಿ ಬಿಡಲಿಲ್ಲ. "ಇಷ್ಟು ಚಿಕ್ಕ ಹುಡುಗರು ಹೋಟಲಿಗೆ ಬರಬಹುದಾ" ಎಂದ. ಅವನ ಮಾತಿಗೆ ಹೋಟೆಲಿನಲ್ಲಿದ್ದ ಕೆಲವು ಗಿರಾಕಿಗಳು ದನಿಗೂಡಿಸಿದರು. ಈ ಪ್ರಶ್ನೆಗೆ ನನ್ನ ಗೆಳೆಯನ ಬಳಿ ಉತ್ತರ ಇರಲಿಲ್ಲ. ಗಿರಾಕಿ "ಯಾರು ನಿಮ್ಮ ತಂದೆ ತಾಯಿ ? ನಿಮ್ಮ ಮನೆ ಎಲ್ಲಿ ? ಬಂದು ಕೇಳ್ತೀನಿ" ಎಂದು ಹೇಳಿ ಬಹಳ ವ್ಯಥೆಯಿಂದ ಹೊರಟು ಹೋದ.

ಚಲಿಸುವ ತಣಿಗೆ

ನಾವು ಹೋಟೆಲಿಗೆ ಹೋಗಿ ಎರಡು ಮೂರು ದಿನವಾಗಿತ್ತು. ಒಂದು ರಾತ್ರಿ ನಮ್ಮ ಬೀದಿಯಲ್ಲಿ ಜನರ ಗುಂಪು ರಭಸವಾಗಿ ಓಡುತ್ತಿತ್ತು. ಮಾತುಗಳೂ ಅಷ್ಟಾಗಿ ಕೇಳಿಬರುತ್ತಿರಲಿಲ್ಲ. ಜನ ಹಾಗೆ ಮೌನವಾಗಿ ಚಲಿಸುವುದನ್ನು ನಾನು ನೋಡೇ ಇರಲಿಲ್ಲ. ಕುತೂಹಲದಿಂದ ನಾನೂ ಗುಂಪು ಸೇರಿಕೊಂಡೆ. ಅದೊಂದು ಆಚರಣೆ. ಅದರ ಹೆಸರು ತಣಿಗೆ ಶಾಸ್ತ್ರ. ಒಂದು ಮನೆಯಲ್ಲಿ ಹತ್ತು ರೂ. ಕಳುವಾಗಿತ್ತು. ಕಳ್ಳ ಯಾರು ಎಂದು ಪತ್ತೆ ಮಾಡಲಾಗಲಿಲ್ಲ. ಆದ್ದರಿಂದ ಮನೆಯವರು ತಣಿಗೆ ಶಾಸ್ತ್ರದ ಮೊರೆ ಹೊಕ್ಕರು. ಕಳುವಾದ ಮನೆಯಲ್ಲಿ ಊಟ ಮಾಡುವ ಹಿತ್ತಾಳೆಯ ತಣಿಗೆಯನ್ನಿಟ್ಟು ಪೂಜಿಸಿ ಒಬ್ಬ ವ್ಯಕ್ತಿ ಅದರೊಳಕ್ಕೆ ಎರಡೂ ಕೈಗಳನ್ನು ಇಟ್ಟು ನಿಂತರೆ ಆ ತಣಿಗೆ ಚಲಿಸಲಾರಂಭಿಸುತ್ತದೆ. ಅದರ ಹಿಂದೆಯೇ ಆ ತಟ್ಟೆಯಲ್ಲಿ ಕೈಯಿಟ್ಟವನು ಚಲಿಸುತ್ತಾನೆ. ಅದರ ಚಲನೆ ಕ್ರಮೇಣ ವೇಗವಾಗುತ್ತದೆ. ಜನ ತಣಿಗೆಯನ್ನು ಹಿಂಬಾಲಿಸುತ್ತಾರೆ. ಆ ತಣಿಗೆ ಬೀದಿಯಲ್ಲಿ ಮನೆ ಮನೆಯ ಮುಂದೆ ಹೋಗುತ್ತಾ ಹಣ ಕದ್ದವರ ಮನೆ ಮುಂದೆ ನಿಲ್ಲುತ್ತದೆ. ಆಗ ಜನ ಕಳ್ಳನನ್ನು ಹಿಡಿಯುತ್ತಾರೆ. ಚಲಿಸುವ ತಣಿಗೆ ಯಾರ ಮನೆಯ ಮುಂದೆಯಾದರೂ ಸ್ವಲ್ಪ ನಿಧಾನವಾಗಿ ಚಲಿಸಿದರೆ ಅವರ ಎದೆ ಒಡೆದುಕೊಳ್ಳಲಾರಂಭಿಸುತ್ತದೆ. ಈ ತಣಿಗೆ ಅನೇಕ ಮನೆಗಳನ್ನು ದಾಟಿದರೂ ಎಲ್ಲೂ ನಿಲ್ಲಲಿಲ್ಲ. ಕೊನೆಗೆ ಮುನೇಶ್ವರ ಮೈದುಂಬುತ್ತಿದ್ದ ಪೂಜಾರಿಯ ಮನೆಯ ಮುಂದೆ ನಿಂತಿತು. ಒಳ್ಳೆಯ ಮನುಷ್ಯನೆಂದು ಹೆಸರು ಪಡೆದಿದ್ದ ಪೂಜಾರಪ್ಪನ ಮುಖ ಕಪ್ಪಿಟ್ಟಿತು. ಅವನ ಮುಖದಲ್ಲಿ ವೇದನೆ ಹೇಳತೀರದು. ಪೂಜಾರಪ್ಪನ ಅದೃಷ್ಟವೋ ಎನ್ನುವಂತೆ ತಟ್ಟೆ ಬಹಳ ವೇಗವಾಗಿ ಮುಂದಕ್ಕೆ ಚಲಿಸತೊಡಗಿತು. ಪೂಜಾರಪ್ಪನ ಮುಖದಲ್ಲಿ ಗೆಲವು ಮೂಡತೊಡಗಿತು. ಹೀಗೆ ತಟ್ಟೆ ಚಲಿಸಿತೇ ಹೊರತು ಕಳ್ಳ ಸಿಗಲಿಲ್ಲ.

ತಟ್ಟೆ ಶಾಸ್ತ್ರವಾದ ಮಾರನೆಯ ದಿನ ಬೆಳಗ್ಗೆ ಹಣ ಕಳುವಾದ ಮನೆಯ ಯಜಮಾನ ನಮ್ಮ ಮನೆಗೆ ಬಂದು ನನ್ನನ್ನು ಹೊರಕ್ಕೆ ಕರೆದ. ನಾನು ಯಾವ ಅಂಜಿಕೆಯೂ ಇಲ್ಲದೆ ಹೋದೆ. ಆತ ಬಹಳ

ದೈನ್ಯದಿಂದ "ನಿನಗೆ ಎಂಟಾಣೆ ಕೊಡುತ್ತೇನೆ ನನಗೆ ಒಂದು ವಿಷಯ ಹೇಳು" ಎಂದ. ನಾನು ಒಪ್ಪಿಕೊಂಡೆ. ನಾವು ಗೆಳೆಯರು ಹೋಟೆಲಿಗೆ ಹೋಗಿದ್ದು ನಿಜವೇ ಎಂಬುದು ಅವನ ಪ್ರಶ್ನೆಯಾಗಿತ್ತು. ನಾನು ಹೌದೆಂದು ಹೇಳಿದೆ. ಆತ ಹಣ ಕೊಟ್ಟವರು ಯಾರೆಂದು ಕೇಳಿದ. ನಾನು ನಿಜ ಸಂಗತಿ ಹೇಳಿದೆ. ಆ ಮನೆಯ ಯಜಮಾನ ಹೊರಟು ಹೋದ. ನನ್ನ ಗೆಳೆಯ ಇವರ ಮನೆಗೆ ಆಗಾಗ ಹೋಗುತ್ತಿದ್ದನಂತೆ. ಹತ್ತು ರೂಪಾಯಿ ನೋಟನ್ನು ಇವರು ಅವನ ಕಣ್ಣಿಗೆ ಕಾಣುವಂತೆ ಯಾಕೆ ಇಟ್ಟಿದ್ದರೋ ಗೊತ್ತಿಲ್ಲ. ಗೆಳೆಯ ಎಗರಿಸಿದ. ಕೊನೆಗೆ ಹಣವನ್ನು ಮಿತ್ರನ ತಂದೆ ಕಂತಿನ ಮೇಲೆ ಹಿಂದಿರುಗಿಸಿದ.

ಬಡತನದ ಬೇಗೆ

ನನ್ನ ತಂದೆ ರಾಜಾ ಮಿಲ್ಲಿನಲ್ಲಿ ಬದಲಿ ಕೆಲಸಗಾರನಾಗಿದ್ದ. ಬೆಳಗಿನ ಜಾವ ಐದು ಗಂಟೆಗೆ ಎದ್ದು ರಾಜಾ ಮಿಲ್ಲಿನ ಗೇಟಿಗೆ ಹೋಗಿ ನಿಲ್ಲುತ್ತಿದ್ದ. ಆ ದಿನ ಯಾರಾದರೂ ಖಾಯಂ ಕೆಲಸಗಾರರು ಗೈರು ಹಾಜರಾಗಿದ್ದರೆ ಮಿಲ್ಲಿನವರು ಹೊರಗೆ ಕಾಯುತ್ತಿದ್ದ ಬದಲಿ ಕೆಲಸದವರನ್ನು ಕೆಲಸಕ್ಕೆ ಕರೆಯುತ್ತಿದ್ದರು. ಹೀಗೆ ಕೆಲಸ ಮಾಡಿದ ದಿನ ಒಂದು ಕಾರ್ಡಿನಲ್ಲಿ ಟಿಕ್ ಮಾಡುತ್ತಿದ್ದರು. ನನ್ನ ತಂದೆಗೆ ತಿಂಗಳಿನಲ್ಲಿ ಕೆಲವು ದಿನವಾದರೂ ಕೆಲಸ ಸಿಕ್ಕುತ್ತಿತ್ತು. ಇದರಿಂದ ನಮಗೆ ಸ್ವಲ್ಪ ಅನುಕೂಲವಾಗಿತ್ತು. ಆದರೆ ರಾಜಾ ಮಿಲ್ಲಿನಲ್ಲಿ ಕಾರ್ಮಿಕರ ಚಳುವಳಿ ನಡೆದು ಮಿಲ್ಲನ್ನು ಮಾಲೀಕರು ವರ್ಷಗಟ್ಟಲೆ ಮುಚ್ಚಿಬಿಟ್ಟರು. ಆಗ ಬದಲಿ ಕೆಲಸಗಾರರಿರಲಿ ಖಾಯಂ ಕೆಲಸಗಾರರಿಗೂ ಊಟಕ್ಕೆ ತೊಂದರೆಯಾಯಿತು.

ಅಕ್ಕಪಕ್ಕದ ಸೌದೆ ಡಿಪೋಗಳಲ್ಲಿ ತಂದೆ ನಿತ್ಯವೂ ಸೌದೆ ಒಡೆಯುತ್ತಿದ್ದನು. ಆಗ ಬಹುಪಾಲು ಜನ ಅಡುಗೆ, ಸ್ನಾನ ಪ್ರತಿಯೊಂದಕ್ಕೂ ಸೌದೆಯನ್ನೇ ಬಳಸುತ್ತಿದ್ದರಿಂದ ಡಿಪೋಗೆ ಸೌದೆ ಕೊಳ್ಳಲು ಬಂದೇ ಬರುತ್ತಿದ್ದರು. ತಂದೆ ಮರದ ಚಿಕ್ಕ ಚಿಕ್ಕ ದಿಮ್ಮಿಗಳನ್ನು ಒಲೆಯಲ್ಲಿ ಉರಿಯಲು ಅನುಕೂಲವಾಗುವಂತೆ ಹೋಳಕೆಗಳನ್ನಾಗಿ ಸೀಳುತ್ತಿದ್ದನು. ಆ ಸೀಳುಗಳನ್ನು ಹೊರೆ ಕಟ್ಟಿ ಅವರ ಮನೆಗೆ ಹೊತ್ತುಕೊಂಡು ಹೋಗಿ ತಲುಪಿಸುತ್ತಿದ್ದನು. ಈ ಕೆಲಸಕ್ಕೆ ೧ ಕಿಲೋ ಸೌದೆಗೆ ೧೦ ಪೈಸೆ ಸಿಗುತ್ತಿತ್ತು. ನಮ್ಮ ಕುಟುಂಬ ನಡೆಯಲು ಇದೇ ಜೀವನಾಧಾರ. ಇದು ಸಾಕಾಗದೆ ಇದ್ದುದರಿಂದ ನನ್ನ ತಾಯಿ ಮತ್ತು ಜೊತೆಗಾತಿಯರು ಶಿವನಹಳ್ಳಿ ಕೆರೆಯಲ್ಲಿ ಗೋಟಿಗೆಡ್ಡೆ ಆಯಲು ಹೋಗುತ್ತಿದ್ದರು. ಕೆರೆಯ ಒಳಗೆ ಇಳಿದು ಅದರ ಬೇರುಗಳನ್ನು ಗುರುತಿಸಿ ಗೋಟಿಗೆಡ್ಡೆಯನ್ನು ಸಂಗ್ರಹಿಸುತ್ತಿದ್ದರು. ಬರುವ ದಾರಿಯಲ್ಲಿ ರಾಜಾಜಿನಗರದಲ್ಲಿ ಅಣ್ಣೆಸೊಪ್ಪು, ಬೆರಕೆಸೊಪ್ಪು ಬಹುವಾಗಿ ಬೆಳೆಯುತ್ತಿತ್ತು. ಅದನ್ನು ಕಿತ್ತು ತರುತ್ತಿದ್ದರು. ಗೋಟಿಗೆಡ್ಡೆ ಮತ್ತು ಸೊಪ್ಪು ರಾತ್ರಿಯ ಆಹಾರಕ್ಕೆ ಒದಗುತ್ತಿತ್ತು.

ಕೇರಿಯ ಜನ ಸಾಲಗಾರರಾಗಿದ್ದರು. ಒಬ್ಬ ಹೆಂಗಸು ಲೇವಾದೇವಿಗಾರನೊಬ್ಬನಿಂದ ಸಾಲ ಪಡೆದಿದ್ದಳು. ಕೂಲಿ ಸರಿಯಾಗಿ ಸಿಗದೆ ಅವಳು ಬಡ್ಡಿಯನ್ನು ಕಟ್ಟಲಾಗಲಿಲ್ಲ. ಈಕೆ ವಾರದ ಬಡ್ಡಿಗೆ ಸಾಲ ಪಡೆದಿದ್ದಳು. ಮೂರು ನಾಲ್ಕು ವಾರ ಬಡ್ಡಿ ಕಟ್ಟದೆ ಇದ್ದುದರಿಂದ ಲೇವಾದೇವಿಗಾರನು ಈಕೆಯ ಚಿಕ್ಕ ವಯಸ್ಸಿನ ಮಗನನ್ನು ಎತ್ತಿಕೊಂಡು ಹೋಗಿ ಮನೆಯಲ್ಲಿಟ್ಟುಕೊಂಡನು. ಈಕೆಯಿಂದ ಬಡ್ಡಿಯನ್ನು ಕಟ್ಟಲಾಗಲೇ ಇಲ್ಲ. ಆಗಾಗ ಲೇವಾದೇವಿಗಾರನ ಮನೆಗೆ ಹೋಗಿ ತನ್ನ ಪುಟ್ಟ ಮಗುವನ್ನು ನೋಡಿ ಕಣ್ಣೀರು ಸುರಿಸಿ ಬರುತ್ತಿದ್ದಳು.

ಕೇರಿಯಲ್ಲಿ ಒಬ್ಬ ವ್ಯಕ್ತಿ ಬಹಳ ಪ್ರತಿಷ್ಠೆ ಮಾಡುತ್ತಿದ್ದನು. ಆದರೆ ಅವನನ್ನು ಬಡತನ ಕಾಡತೊಡಗಿತು. ತನ್ನ ಮನೆಯಲ್ಲಿದ್ದ ತಾಮ್ರದ ಹಂಡೆಯನ್ನು ಗಿರವಿ ಅಂಗಡಿಯಲ್ಲಿ ಅಡವಿಡಲು ಆತ ತೀರ್ಮಾನಿಸಿದ. ಅದನ್ನು ಮಾರವಾಡಿ ಅಂಗಡಿಗೆ ಹೊತ್ತುಕೊಂಡು ಹೋಗಲು ಅವನ ಪ್ರತಿಷ್ಠೆಗೆ ಕುಂದು. ಆದರೆ ಮಾರದೆ ವಿಧಿಯಿಲ್ಲ. ಆ ಹಿರಿಯ ನನ್ನನ್ನು ಹತ್ತಿರ ಕರೆದು ಮೈದಡವಿ "ನನಗೊಂದು ಕೆಲಸ ಮಾಡಿಕೊಡುತ್ತೀಯಾ" ಎಂದು ಕೇಳಿದ. ನಾನು 'ಏನಾಗಬೇಕು'ಎಂದೆ. ತನ್ನ ತಾಮ್ರದ ಹಂಡೆಯನ್ನು ಮಾರವಾಡಿ ಅಂಗಡಿಗೆ ಹೊತ್ತು ತರಬೇಕೆಂದೂ ತಾನು ಅಂಗಡಿಯ ಮುಂದೆ ಕಾಯುತ್ತಿರುವುದಾಗಿಯೂ ಹೇಳಿದ. ನಾನು ಒಪ್ಪಿಕೊಂಡೆ. ದೊಡ್ಡದಾಗಿದ್ದ, ಪುರಾತನವಾಗಿದ್ದ ತಾಮ್ರದ ಹಂಡೆಯನ್ನು ಬೀದಿಯಲ್ಲಿ ಹೊತ್ತುಕೊಂಡು ಹೋಗುತ್ತಿರುವಾಗ ಯಾರಾದರೂ ನನ್ನನ್ನೇ ಕಳ್ಳನೆಂದು ಹಿಡಿಯಬಹುದೆಂಬ ಭಯದಲ್ಲೇ ಅಂಗಡಿ ತಲುಪಿದೆ. ಹಿರಿಯ ಆತಂಕದಿಂದ ಕಾಯುತ್ತಿದ್ದ. ಗಿರವಿ ಇಟ್ಟ ಹಣ ಜೇಬು ತುಂಬಿದ್ದರೂ ತನ್ನ ಪೂರ್ವಿಕರ ಕಾಲದ ಹಂಡೆಯನ್ನು ಮಾರಿದ ವ್ಯಥೆ ಮುಖದಲ್ಲಿ ತುಂಬಿತ್ತು.

ಬಡವರಾದ ತಂದೆ ತಾಯಿಗಳಿಗೆ ಮಕ್ಕಳನ್ನು ಸಾಕುವ ಶಕ್ತಿ ಇರಲಿಲ್ಲ. ಆದರೆ ಅಷ್ಟು ವಯಸ್ಸಿಗಾಗಲೇ ಮಕ್ಕಳ ಬುದ್ಧಿ ಬಲಿತಿತ್ತು. ಹೆತ್ತವರು ತಮ್ಮನ್ನು ಸಲುಹಬೇಕೆಂದು ಅವರು ನಿರೀಕ್ಷಿಸುತ್ತಿದ್ದರು. ಸಾಮಾನ್ಯವಾಗಿ ಮಕ್ಕಳು ಅಪ್ಪನನ್ನು ಏಕವಚನದಲ್ಲಿ ಮಾತನಾಡಿಸುತ್ತಿದ್ದರು. ಏನೋ, ಬಾರೋ ಎಂದು ಕರೆಯುತ್ತಿದ್ದರು. ನಮ್ಮ ಬೀದಿಯ ಒಬ್ಬ ಹುಡುಗನಂತೂ ಅವನ ತಿಂಡಿಗೆ ಅವರಪ್ಪ ಕಾಸು ಕೊಡದಿದ್ದರೆ "ನನ್ನನ್ನು ಸಾಕಲು ಆಗದಿದ್ದರೆ ಯಾಕೆ ಹುಟ್ಟಿಸಬೇಕಾಗಿತ್ತು" ಎಂದು ರೇಗುತ್ತಿದ್ದ. ಆಗ ಅವನ ತಂದೆ ಅಷ್ಟೇ ಖಾರವಾಗಿ "ನಿನ್ನಂಥ ಅಯೋಗ್ಯ ಹುಟ್ತಾನೆ ಅಂಥ ಗೊತ್ತಿದ್ರೆ ಹುಟ್ಟುಸ್ತನೇ ಇರಲಿಲ್ಲ" ಎಂದು ಹೇಳುತ್ತಿದ್ದ. ಮನೆಗೆ ಸರಿಯಾಗಿ ತಂದು ಹಾಕಲು ಆಗದಿದ್ದರೆ ನನ್ನನ್ನು ಯಾಕೆ ಕಟ್ಟಿಕೊಳ್ಳಬೇಕಾಗಿತ್ತು ಎಂದು ಕೆಲವು ಹೆಂಗಸರು ಗಂಡಂದಿರನ್ನು ಉದ್ದೇಶಿಸಿ ಜೋರಾಗಿ ಬೀದಿಯಲ್ಲಿ ಕೂಗುತ್ತಿದ್ದರು. ಇದಕ್ಕೆ ಮೌನವೇ ಗಂಡಸರ ಉತ್ತರವಾಗಿತ್ತು. ಕೆಲವು ಚಿಕ್ಕ

ಹುಡುಗರಂತೂ ಹಸಿವಾದಾಗ ತಂದೆ ತಾಯಿಯರನ್ನು ಹೊಡೆಯಲು ಹೋಗುತ್ತಿದ್ದರು. ರಾಮು ಎಂಬುವವನಿಗೆ ತನ್ನ ತಂದೆಯ ಮೇಲೆ ಕೊಂಚವೂ ಗೌರವವಿರಲಿಲ್ಲ. ಸಂಪಾದನೆಯೂ ಇಲ್ಲದೆ ಸದಾ ನಿಶ್ಯಕ್ತನಾಗಿರುತ್ತಿದ್ದ ಅವನ ತಂದೆ ಖಾಯಿಲೆ ಬಿದ್ದ. ಬಹಳ ದಿನವಾದರೂ ಖಾಯಿಲೆ ವಾಸಿಯಾಗದೆ ಸಾವಿನದವಡೆಯಲ್ಲಿದ್ದ. ಜನ ಅವನನ್ನು ಇಷ್ಟರಲ್ಲೇ ಸಾಯುತ್ತಾನೆ ಎಂದು ಹೇಳುತ್ತಿದ್ದರು. ರಾಮು ಕೂಡಾ ಇವನು ಸತ್ತರೆ ಸಾಕಪ್ಪ ಎನ್ನುತ್ತಿದ್ದ. ಯಾರಾದರೂ ನಿಮ್ಮ ತಂದೆಗೆ ಹೇಗಿದೆ ಎಂದರೆ 'ಇನ್ನೂ ಸತ್ತಿಲ್ಲ ಕಣ್ರೀ' ಎಂದು ನಿರ್ಲಿಪ್ತವಾಗಿ ಹೇಳುತ್ತಿದ್ದ.

ನನ್ನ ತಂದೆ ದೊಡ್ಡ ಸಾಲಗಾರನಾಗಿದ್ದ. ಸಾಲ ತರುವುದು ಆತನಿಗೆ ನೀರು ಕುಡಿದಷ್ಟು ಸುಲಭವಾಗಿತ್ತು. ಆದರೆ ತೀರಿಸಲು ಬಹಳ ಪಡಿಪಾಟಲು ಬೀಳುತ್ತಿದ್ದ. ಒಂದು ದಿನ ಇಬ್ಬರು ದಾಂಡಿಗರು ಬೀದಿಯಲ್ಲಿ ನಮ್ಮ ತಂದೆಯನ್ನು ಹೊಡೆಯುತ್ತಿದ್ದರು. ಈತ ಗೋಳಾಡುತ್ತಾ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಹೀಗೆ ಪ್ರಯತ್ನಿಸಿದಷ್ಟೂ ಅವರು ಜೋರಾಗಿ ಹೊಡೆಯುತ್ತಿದ್ದರು. ನಾವೆಲ್ಲ ಗಾಬರಿಯಾಗಿ ಹತ್ತಿರ ಹೋದೆವು. ಕೆಲವರು ಬಿಡಿಸಿದ್ದರಿಂದ ತಂದೆಗೆ ಭಾರೀ ಹೊಡೆತಗಳು ತಪ್ಪಿದವು. ಮೈಯೆಲ್ಲ ಗಾಯವಾಗಿ, ಬಟ್ಟೆ ಹರಿದಿತ್ತು. ಈ ದಾಂಡಿಗರು ಲೇವಾದೇವಿಗಾರನ ಏಜೆಂಟರು. ಸಾಲ ಹಿಂದಿರುಗಿಸುವುದು ನಿಧಾನವಾದ್ದರಿಂದ ತಂದೆಯ ಮೇಲೆ ಹೀಗೆ ಹಲ್ಲೆ ನಡೆಸಿದ್ದರು. ಆ ದಿನ ರಾತ್ರಿಯೇ ತಂದೆ ಅವಮಾನ ತಾಳಲಾರದೆ ವಿಷ ಕುಡಿದು ಮನೆಯಲ್ಲಿ ವಿಲವಿಲನೆ ಒದ್ದಾಡುತ್ತಿದ್ದ. ಆಸ್ಪತ್ರೆಗೆ ಸೇರಿಸಿದ ಮೇಲೆ ಗುಣಮುಖನಾದ.

ಈ ಕಷ್ಟದಲ್ಲೂ ತಂದೆ ಕೇರಿಯಲ್ಲಿ ಜಾಗ ಹಿಡಿದು ಒಂದು ಗುಡಿಸಲು ಹಾಕಿದ್ದ. ಹತ್ತು ಅಡಿ ಅಗಲ ಐದಡಿ ಎತ್ತರದ ಆ ಗುಡಿಸಲು ಮಳೆಗಾಲದಲ್ಲಿ ಬಹಳ ಸೋರುತ್ತಿದ್ದುದರಿಂದ ಛಾವಣಿಯ ಗಳಗಳನ್ನು ಜೋಡಿಸಲು ಸದಾ ಮನೆಯ ಮೇಲೆಯೇ ಇರುತ್ತಿದ್ದ. ಶಾಲೆಯಲ್ಲಿ ನನಗೆ ರಾಮಕೃಷ್ಣ ಎಂಬ ಗೆಳೆಯನಿದ್ದ. ಅವನ ಮನೆಯವರು ಹಸುಗಳನ್ನು ಸಾಕಿದ್ದರು. ಇವನು ಹಾಲು ಮಾರುತ್ತಿದ್ದ. ಅದರಲ್ಲಿ ಮಿಗಿಸಿದ ದುಡ್ಡನ್ನು ಇಬ್ಬರೂ ಖರ್ಚು ಮಾಡುತ್ತಿದ್ದೆವು. ಒಂದು ದಿನ ಯಾವುದೋ ನೆಪದಲ್ಲಿ ಅವನು ನನ್ನನ್ನು ಹುಡುಕುತ್ತಾ ನಮ್ಮ ಕೇರಿಗೆ ಬಂದ. ನಾನು ಗುಡಿಸಲಿನಲ್ಲಿ ಇದ್ದುದನ್ನು ಕಂಡು ಅವನಲ್ಲಿ ಮರುಕ ಉಂಟಾಯಿತು. ಅಂದಿನಿಂದ ಹಾಲಿನಲ್ಲಿ ಮಿಗಿಸಿದ ಹಣದಲ್ಲಿ ಸ್ವಲ್ಪವನ್ನು ನನಗೆ ಕೊಡಲಾರಂಭಿಸಿದ.

ಗೆಳೆಯ ಪುಟ್ಟಪ್ಪ

ನಾನು ಐದನೇ ತರಗತಿ ಸೇರಿದಾಗ ಹೊಸ ವಾತಾವರಣವನ್ನು ಕಂಡು ಹೆದರಿದ್ದೆ. ಆಗ ಅದೇ ಶಾಲೆಯಲ್ಲಿ ನನಗಿಂತ ಮುಂದಿನ ತರಗತಿಯಲ್ಲಿ ಓದುತ್ತಿದ್ದ ಪುಟ್ಟಪ್ಪ ನನಗೆ ಸಿಕ್ಕಿದ. ಅವನೂ ನಮ್ಮ

ಕೇರಿಯಲ್ಲಿದ್ದ. ನಾನು ಶಾಲೆಗೆ ಹೊಸಬನಾಗಿರುವುದರಿಂದ ಹೆದರಬೇಕಾಗಿಲ್ಲವೆಂದೂ, ಯಾರಾದರೂ ತೊಂದರೆ ಕೊಟ್ಟರೆ ತಿಳಿಸಬೇಕೆಂದೂ, ತಾನು ವಿಚಾರಿಸಿಕೊಳ್ಳುವುದಾಗಿಯೂ ಹೇಳಿದ. ಅವನ ಮಾತಿನಿಂದ ನನ್ನಲ್ಲಿದ್ದ ಭಯವೆಲ್ಲ ಮಾಯವಾಯಿತು.

ಪುಟ್ಟಪ್ಪನ ತಂದೆ ತಾಯಿಗಳು ಅವನನ್ನು ಚೆನ್ನಾಗಿ ಸಾಕುತ್ತಿದ್ದರು. ಪುಟ್ಟಪ್ಪನ ಅಕ್ಷರಗಳು ಬಹಳ ದುಂಡಾಗಿದ್ದು, ಲೆಕ್ಕದಲ್ಲಿ ಅವನು ಎಲ್ಲರಿಗಿಂತ ಮುಂದಿದ್ದ. ಪುಟ್ಟಪ್ಪನ ತಾಯಿಗೆ ಖಾಯಿಲೆ ಆಯಿತು. ಗಂಡ ತನ್ನ ಖಾಯಿಲೆಯ ಬಗ್ಗೆ ಲಕ್ಷ್ಯಕೊಡುತ್ತಿಲ್ಲವೆಂಬ ಸಿಟ್ಟಿನಿಂದ ಆಕೆ ಯಾರಿಗೂ ಹೇಳದೆ ಆಸ್ಪತ್ರೆ ಸೇರಿಕೊಂಡಳು. ಬಹಳ ದಿನಗಳಾದರೂ ಆಕೆ ಎಲ್ಲಿದ್ದಾಳೆ ಎಂಬುದು ಯಾರಿಗೂ ತಿಳಿಯಲಿಲ್ಲ. ಪುಟ್ಟಪ್ಪನೂ ಮಂಕಾದನು. ಆದರೆ ಅವನ ತಂದೆ ಎರಡನೇ ಮದುವೆಗೆ ಸಿದ್ಧತೆ ಮಾಡಿಕೊಳ್ಳತೊಡಗಿದನು. ಹೊಸಬಟ್ಟೆ, ಖರ್ಚಿಗೆ ಕಾಸು ಸಿಕ್ಕಿದ್ದರಿಂದ ಆ ಮದುವೆಯಲ್ಲಿ ಪುಟ್ಟಪ್ಪ ಸಂಭ್ರಮದಿಂದ ಓಡಾಡಿದನು. ಪುಟ್ಟಪ್ಪನ ಮಲತಾಯಿ ಒಳ್ಳೆಯ ಹೆಂಗಸು. ಕ್ರಮೇಣ ಅವನು ತನ್ನ ತಾಯಿಯನ್ನು ಮರೆತೇಬಿಟ್ಟನು.

ಇದ್ದಕ್ಕಿದ್ದಂತೆ ಒಂದು ದಿನ ಪುಟ್ಟಪ್ಪನ ತಾಯಿ ಕೇರಿಯಲ್ಲಿ ಪ್ರತ್ಯಕ್ಷವಾದಳು. ಅವಳ ಖಾಯಿಲೆ ಗುಣವಾಗಿತ್ತು. ತನ್ನ ಗಂಡ ಬೇರೆ ಮದುವೆ ಆಗಿರುವುದನ್ನು ತಿಳಿದು ತನ್ನ ಮನೆಯ ಬೀದಿಯ ಕಡೆ ಮುಖವನ್ನೇ ತೋರಿಸದೆ ನೇರವಾಗಿ ಮೇಗಳಹಟ್ಟಿಯಲ್ಲಿದ್ದ ತನ್ನ ತಾಯಿಯ ಮನೆಗೆ ಹೋದಳು. ಅವಳು ಪುಟ್ಟಪ್ಪನನ್ನೂ ನೋಡಲಿಲ್ಲ. ಒಂದೆರಡು ದಿನಗಳಲ್ಲಿ ತನ್ನ ತಾಯಿ ಬಂದಿರುವ ಸುದ್ದಿ ಪುಟ್ಟಪ್ಪನಿಗೆ ಯಾರಿಂದಲೋ ತಿಳಿಯಿತು. ಅವನು ತಾಯಿಯನ್ನು ನೋಡುವ ಹಂಬಲವನ್ನು ತಂದೆಗೆ ತಿಳಿಸಿದ. ಇದರಿಂದ ಸಿಟ್ಟಾದ ತಂದೆ ಮಲತಾಯಿ ಇಬ್ಬರೂ ಪುಟ್ಟಪ್ಪನನ್ನು ಹಿಗ್ಗಾಮುಗ್ಗಾ ಹೊಡೆದರು. ಪುಟ್ಟಪ್ಪನ ರೋದನ ಕೇರಿಯನ್ನೆಲ್ಲ ತುಂಬಿತು. ಏಟನ್ನು ತಪ್ಪಿಸಿಕೊಂಡು ಅವನು ಬೀದಿಗೆ ಓಡಿ ಬಂದಾಗ ಈ ದೃಶ್ಯ ನೋಡಲು ಜನ ಜಮಾಯಿಸಿತು. ವಿಷಯ ಹೇಗೋ ಪುಟ್ಟಪ್ಪನ ತಾಯಿಯ ಕಿವಿಗೆ ಬಿದ್ದು ಆಕೆ "ನನ್ನ ಮಗನನ್ನು ಸಾಯಿಸಿಬಿಟ್ರಲ್ಲಪ್ಪೋ" ಎಂದು ರೋದಿಸುತ್ತ ಗಂಡನ ಮನೆಯ ಕಡೆ ಓಡಿಬಂದಳು. ಅವಳ ಹಿಂದೆಯೇ ಅವಳ ತಾಯಿ, ಸೋದರ ಧಾವಿಸಿದರು. ಪುಟ್ಟಪ್ಪನ ತಾಯಿ ಮುನ್ನುಗ್ಗಿ ಗಂಡನ ಕೈಯಿಂದ ತನ್ನ ಮಗನನ್ನು ಕಸಿದುಕೊಳ್ಳಲು ಹೋರಾಡಿದಳು. ತಾಯಿ, ಸೋದರ ಇತರ ಬಂಧುಗಳು ಅವಳ ನೆರವಿಗೆ ನಿಂತರು. ಇನ್ನೊಂದು ಕಡೆ ಗಂಡ, ಮಲತಾಯಿ ಪುಟ್ಟಪ್ಪನನ್ನು ಬಲವಾಗಿ ಹಿಡಿದಿದ್ದರು. ಮೊದಲೇ ಏಟು ತಿಂದು ನೊಂದಿದ್ದ ಪುಟ್ಟಪ್ಪನಿಗೆ ಗೋಳಾಡುವುದನ್ನು ಬಿಟ್ಟರೆ ಏನೂ ಗೊತ್ತಾಗಲಿಲ್ಲ. ಈ ಜಗ್ಗಾಟದಲ್ಲಿ ಸಾರ್ವಜನಿಕರಲ್ಲಿ ಕೆಲವರು ಪುಟ್ಟಪ್ಪನ ತಾಯಿಯ ಪರ ನಿಂತಿದ್ದರಿಂದ ಪುಟ್ಟಪ್ಪ ತಾಯಿಯ ಪಾಲಾದನು. ಈ ಜಗಳದಲ್ಲಿ ಗಂಡನಿಂದ ಮೈಕೈಗೆ ಏಟು ತಿಂದಿದ್ದ ಆಕೆ ತನ್ನ ತಾಯಿಯ ಮನೆಗೆ ಪುಟ್ಟಪ್ಪನನ್ನು ಕರೆದುಕೊಂಡು ಹೋದಳು. ಕೂಲಿನಾಲಿ ಮಾಡಿ

ಪುಟ್ಟಪ್ಪನನ್ನು ಓದಿಸುತ್ತಿದ್ದಳು. ಪುಟ್ಟಪ್ಪನ ದುರಾದೃಷ್ಟ ಆಕೆಗೆ ಹಿಂದಿನ ಖಾಯಿಲೆ ಮರುಕಳಿಸಿ ಒಂದೇ ವರ್ಷದಲ್ಲಿ ಸತ್ತುಹೋದಳು.

ಈಗ ಪುಟ್ಟಪ್ಪನನ್ನು ಸಾಕುವ ಸರದಿ ಅವನ ಅಜ್ಜಿಯದಾಯಿತು. ಆಕೆ ಅಲ್ಲಿ ಇಲ್ಲಿ ಮನೆಗೆಲಸ ಮಾಡಿ ಅವನನ್ನು ಬೆಳೆಸಿದಳು. ಎರಡು ವರ್ಷಗಳಲ್ಲಿ ಅಜ್ಜಿಯೂ ಸತ್ತಳು. ಮತ್ತೆ ಕೆಲವು ವರ್ಷ ಪುಟ್ಟಪ್ಪನನ್ನು ಅವನ ತಾಯಿಯ ಸೋದರ ಪಾಲನೆ ಮಾಡಿದನು. ಮುಂದೆ ಕೆಲಕಾಲದ ನಂತರ ಏನೋ ಹೊಂದಾಣಿಕೆಯಾಗಿ ಪುಟ್ಟಪ್ಪ ತನ್ನ ತಂದೆಯ ಮನೆಗೆ ಬಂದು ಸೇರಿ ಕೊಂಡನು. ಆ ವೇಳೆಗಾಗಲೇ ಅವನ ತಂದೆಗೆ ಎರಡನೆಯ ಹೆಂಡತಿಯಲ್ಲಿ ನಾಲ್ಕೈದು ಮಕ್ಕಳಾಗಿದ್ದವು. ಈಗ ಪುಟ್ಟಪ್ಪ ಬೆಂಗಳೂರಿನ ದಲಿತ ಸಂಘರ್ಷ ಸಮಿತಿಯ ಮುಂದಾಳುಗಳಲ್ಲಿ ಒಬ್ಬನಾಗಿದ್ದಾನೆ.

ಮುದ್ದೇ ! ಮುದ್ದೇ !

ಶ್ರೀರಾಮಪುರದ ದಲಿತ ವಿದ್ಯಾರ್ಥಿ ನಿಲಯದಲ್ಲಿ ನನ್ನ ತಾಯಿ ಕಸ ಗುಡಿಸುವ ಕೆಲಸಕ್ಕೆ ಸೇರಿಕೊಂಡಳು. ಅದರ ಹೆಸರು ಆರ್. ಗೋಪಾಲಸ್ವಾಮಿ ಅಯ್ಯರ್ ವಿದ್ಯಾರ್ಥಿನಿಲಯ. ಡಿ. ವೆಂಕಟಯ್ಯ ಎಂಬುವವರು ಅದರ ಮೇಲ್ವಿಚಾರಕರು. ವಿದ್ಯಾರ್ಥಿಗಳಿಗೆ ಊಟ ಬಡಿಸಿ ಆದ ಮೇಲೆ ಅಲ್ಲಿಯ ಕೆಲಸಗಾರರಿಗೂ ಊಟ ಕೊಡುತ್ತಿದ್ದರು. ಅವರು ಕೊಡುತ್ತಿದ್ದ ಮುದ್ದೆ ಸಾರನ್ನು ನನ್ನ ತಾಯಿ ಮಧ್ಯಾಹ್ನ, ರಾತ್ರಿ ಮನೆಗೆ ತರುತ್ತಿದ್ದಳು. ಇದರಿಂದ ನಮ್ಮ ಅನ್ನದ ಸಮಸ್ಯೆ ನಿವಾರಣೆ ಆಯಿತು. ಮಧ್ಯಾಹ್ನ ೧೧ ಗಂಟೆಗೆ ಮನೆಗೆ ಊಟ ತಂದ ಕೂಡಲೇ ನಾನು ಊಟ ಮಾಡಿ ಶಾಲೆಗೆ ಹೊರಡುತ್ತಿದ್ದೆ. ನನ್ನ ತಾಯಿ ಕೆಲಸ ಮಾಡುತ್ತಿದ್ದ ಹಾಸ್ಟೆಲಿನ ಹಿಂದುಗಡೆ ನಾನು ಓದುತ್ತಿದ್ದ ಮಾಧ್ಯಮಿಕ ಶಾಲೆ ಇತ್ತು. ಆ ದಿನ ಹಾಸ್ಟೆಲ್‌ನಿಂದ ಊಟ ತರಲು ನನ್ನ ತಂಗಿ ಹೋಗಿದ್ದಳು. ಯಾಕೋ ಊಟ ತರುವುದು ತಡವಾಯಿತು. ಶಾಲೆಗೆ ಹೊತ್ತಾಗ ತೊಡಗಿತ್ತು. ನಾನು ಪುಸ್ತಕದ ಚೀಲ ಹೆಗಲಿಗೇರಿಸಿಕೊಂಡು ಶಾಲೆಗೆ ಹೊರಟೆ. ಅರ್ಧ ದಾರಿ ನಡೆದಿದ್ದಾಗ ಎದುರಿಗೆ ನನ್ನ ತಂಗಿ ಊಟದೊಂದಿಗೆ ಮನೆಗೆ ಬರುತ್ತಿದ್ದಳು. ಯಾವುದಾದರೂ ಅಂಗಡಿಯಲ್ಲಿ ಉಪ್ಪು ಪಡೆದು ಮಧ್ಯಾಹ್ನ ತಿನ್ನಬಹುದೆಂದು ನಾನು ತಂಗಿಯಿಂದ ಒಂದು ರಾಗಿ ಮುದ್ದೆಯನ್ನು ಈಸಿಕೊಂಡು ಬ್ಯಾಗಿನಲ್ಲಿ ಹಾಕಿಕೊಂಡು ಶಾಲೆಗೆ ಹೊರಟೆ.

ಮಧ್ಯಾಹ್ನ ಊಟಕ್ಕೆ ಬಿಡುವುದನ್ನೇ ನಿರೀಕ್ಷಿಸುತ್ತಿದ್ದೆ. ಈ ಪಿರಿಯಡ್ಡಿನ ನಂತರ ವಿರಾಮ. ಅಂದು ಒಬ್ಬ ಹುಡುಗ ಒಂದು ಕಡೆಯಿಂದ ಎಲ್ಲರ ಚೀಲಗಳನ್ನು ಪರೀಕ್ಷಿಸುತ್ತಿದ್ದ. ಚೀಲದಲ್ಲಿ ಕೈ ಆಡಿಸಿ ಪುಸ್ತಕ ನೋಟುಬುಕ್ಕುಗಳನ್ನು ಹೊರಗಿಟ್ಟು ಒಳಗಿಡುವುದು ಅವರ ಪರೀಕ್ಷೆಯ ರೀತಿ. ತನ್ನ ಕಳೆದು ಹೋದ ಪೆನ್ಸಿಲ್ಲನ್ನು ಹುಡುಕಲು-ಎಲ್ಲರ ಚೀಲ ತಪಾಸಣೆಗೆ ಅವನು ಮೇಡಂನಿಂದ ಅನುಮತಿ ಪಡೆದಿದ್ದ. ಪೆನ್ಸಿಲ್ ಕಳೆದುಕೊಂಡವನು ನನ್ನ ಮುದ್ದೆಯನ್ನು ಹೊರತೆಗೆದು ಪ್ರದರ್ಶನಕ್ಕೆ

ರುಜುವಾತು

ಇಡಬಹುದೆಂಬ ಅನುಮಾನ ಬಂತು. ಭಯವಾಯಿತು. ನನ್ನ ಬಳಿ ಬಂದಾಗ ನಾನು ನನ್ನ ಪರೀಕ್ಷೆಗೆ ಅವಕಾಶ ಕೊಡಲಿಲ್ಲ. ಇದರಿಂದ ಅವನು ನಾನೇ ಕಳ್ಳನೆಂದು ತೀರ್ಮಾನಿಸಿ ಮೇಡಂಗೆ ದೂರಿತ್ತ. ಮೇಡಂ ನನ್ನ ಹತ್ತಿರ ಬಂದು ಬ್ಯಾಗು ತೆಗೆಯಲು ಒತ್ತಾಯಿಸಿದರು. ಹುಡುಗರೆಲ್ಲ ಕುತೂಹಲದಿಂದ ನೋಡತೊಡಗಿದರು. ಅವರಿಗೆ ಪೆನ್ಸಿಲ್ಲಿನ ಸಮಸ್ಯೆ. ನನಗೆ ಮುದ್ದೆಯ ಭಯ. ಅವರು ಒತ್ತಾಯದಿಂದ ನನ್ನ ಬ್ಯಾಗಿನೊಳಗಿನ ವಸ್ತುಗಳನ್ನು ಹೊರ ತೆಗೆದರು. ಪೆನ್ಸಿಲ್ ಸಿಗಲಿಲ್ಲ. ರಾಗಿಮುದ್ದೆ ಸಿಕ್ಕಿತು. ಮೇಡಂ ಚಕಿತರಾದರು. ಹುಡುಗರಿಗೆ ಇದು ಮೋಜಿನ ವಿಷಯವಾಯಿತು. ಮಧ್ಯಾಹ್ನ ಆಟಕ್ಕೆ ಬಿಟ್ಟದ್ದೇ ತಡ ಎಲ್ಲರೂ ಏಕಕಂಠದಿಂದ “ಮುದ್ದೇ ಮುದ್ದೇ” ಎಂದು ಕೂಗುತ್ತ ಹೊರನಡೆದರು.

ಮಾನ್ಯ ಹಂಡೆಯವರೆ ! ಮಾನ್ಯ ಗುಂಡಿಯವರೆ !

ನನ್ನ ಇನ್ನೊಬ್ಬ ದೊಡ್ಡಪ್ಪ ಗಂಗಮಾಳಗಯ್ಯ. ಅವರು ವಿದ್ಯಾವಂತರಾಗಿದ್ದರು. ನನ್ನ ಅತ್ತೆಯ ಮನೆಗೆ ಆಗಾಗ ಬರುತ್ತಿದ್ದರು. ಅವರನ್ನು ಕಂಡರೆ ನಮ್ಮ ಬಂಧುಬಳಗಕ್ಕೆಲ್ಲ ಭಯ ಗೌರವ. ಅವರು ಅತ್ತೆಯ ಮನೆಗೆ ಬಂದಾಗಲೆಲ್ಲ ನಾನು ಹೋಗಿ ಅವರೆದುರಿಗೆ ಕೂರುತ್ತಿದ್ದೆ. ನಾನು ಚೂಟಿಯಾಗಿ ಮಾತನಾಡುವುದನ್ನು ನೋಡಿ ಅವರು ನನಗೆ ಭಾಷಣ ಮಾಡುವುದನ್ನು ಹೇಳಿಕೊಟ್ಟರು. ಯಾವುದಾದರೂ ಒಂದು ವಿಷಯವನ್ನು ಕುರಿತು ಹೇಗೆ ಭಾಷಣ ಮಾಡಬೇಕೆಂದು ಅವರು ಜಗತ್ತಿನ ಶ್ರೇಷ್ಠ ಭಾಷಣಕಾರರನ್ನು ಉದಾಹರಿಸಿ ವಿವರಿಸುತ್ತಿದ್ದರು. ಆಗ ಭಾರತ-ಚೈನಾ ಯುದ್ಧ ನಡೆಯುತ್ತಿತ್ತು. ಈ ವಿಷಯವನ್ನೇ ಕುರಿತು ಯಾಕೆ ಭಾಷಣ ಮಾಡಬಾರದು ಅನ್ನಿಸಿತು. ವಿಷಯ ಸಂಗ್ರಹಕ್ಕಾಗಿ ನಾನು ಬೇರೆ ಬೇರೆ ಬಡಾವಣೆಗಳ ಉಚಿತ ವಾಚನಾಲಯಗಳಿಗೆ ಹೋಗತೊಡಗಿದೆ. ಪತ್ರಿಕೆ ಪುಸ್ತಕ ಓದತೊಡಗಿದೆ. ಕೆಲವೇ ದಿನಗಳಲ್ಲಿ ಪುಟಾಣಿ ಭಾಷಣಕಾರನಾದೆ. ಗಂಗಾಮಾಳಗಯ್ಯನವರು ಭಾಷಣದ ಪೂರ್ವ ಸಿದ್ಧತೆಯನ್ನೂ ಹೇಳಿಕೊಟ್ಟಿದ್ದರು. ಮನೆಯಲ್ಲಿಯೇ ಹಂಡೆಗುಂಡಿ ಬಿಂದಿಗೆ ತಣಿಗೆಗಳನ್ನೇ ಸಭಿಕರೆಂದು ಭಾವಿಸಿ ಅವರನ್ನು ಉದ್ದೇಶಿಸಿ ಭಾಷಣ ಮಾಡುವುದರಿಂದ ಜನರ ಮುಂದೆ ಭಾಷಣ ಮಾಡುವುದು ಸುಲಭ ಎಂದಿದ್ದರು. ನಾನೊಮ್ಮೆ ಮನೆಯಲ್ಲಿ ಮಾನ್ಯ ಹಂಡೆಯವರೇ, ಮಾನ್ಯ ಗುಂಡಿಯವರೇ, ಮಾನ್ಯ ಬಿಂದಿಗೆಯವರೇ ಎಂದು ಭಾಷಣ ಅಭ್ಯಾಸ ಮಾಡುತ್ತಿದ್ದುದನ್ನು ನನ್ನ ತಂದೆ ತಾಯಿಗಳು ನೋಡಿ ಹೆದರಿದರು. ನನಗೆ ಹುಚ್ಚು ಹಿಡಿದಿರಬಹುದೆಂದು ಭಾವಿಸಿ ಹುಚ್ಚಾಸ್ಪತ್ರೆಗೆ ಸೇರಿಸಲು ತಯಾರಾದರು. ಕೆಲವರು ಹಿರಿಯರು ಈಗಲೇ ಬೇಡ ಇನ್ನೂ ಸ್ವಲ್ಪ ಕಾದು ನೋಡಿ ಮುಂದೆ ಏನಾಗುವುದೋ ನೋಡೋಣ ಎಂದು ಸಲಹೆ ನೀಡಿದ ಮೇಲೆ ಸುಮ್ಮನಾದರು.

ಭಾಷಣ ಮಾಡುವುದರ ಜೊತೆಗೆ ನನ್ನ ದೊಡ್ಡಪ್ಪ ಗಂಗಾಮಾಳಯ್ಯ ನಾನು ಕವಿತೆ ಬರೆಯುವುದನ್ನೂ ಪ್ರೋತ್ಸಾಹಿಸಿದರು. ಆಗ ನನ್ನ ಭಾಷಣದ ಮೊದಲ ಸಭಿಕ ಮತ್ತು ನನ್ನ ಕವಿತೆಯ ಮೊದಲ ಹಾಡುಗಾರ ಜೆನ್ನಿ. ಜೆನ್ನಿ ನನಗಿಂತ ಚೂಟಿಯಾದ ಲವಲವಿಕೆಯ ವ್ಯಕ್ತಿ. ಜೆನ್ನಿ ನನ್ನ ಸಾಹಸ ಮೆಚ್ಚುತ್ತಿದ್ದನಲ್ಲದೆ ನನಗಿಂತ ಕಿಲಾಡಿಯಾಗಿದ್ದ. ನಾನು ಭಾಷಣ ಮಾಡುವ ವಿಷಯ ಕೇರಿಯಲ್ಲೆಲ್ಲ ಹಬ್ಬಿತು. ಕೇರಿಯ ಜನ ನನ್ನಿಂದ ಭಾಷಣ ಮಾಡಿಸಿ ಆನಂದಪಟ್ಟರು. ಸೌದೆ ಡಿಪೋ ಮಾಲೀಕರು ಭಾಷಣ ಮಾಡಿಸಿ ಸಂಭಾವನೆ ಕೊಟ್ಟರು. ನಾನು ಮಂಚನಬೆಲೆಗೆ ಮತ್ತೆ ಹೋದಾಗ ಅಲ್ಲಿಯ ಜನ ಕುತೂಹಲಿಗಳಾಗಿ ಬೀದಿಯಲ್ಲಿ ಭಾಷಣ ಮಾಡಿಸುತ್ತಿದ್ದರು. ಅಂಗಡಿಯವರು ಮಿಠಾಯಿ, ಪೆಪ್ಪರಮೆಂಟನ್ನು ಕೊಟ್ಟರೆ, ಹೋಟೆಲಿನವರು ವಡೆ, ಪಕೋಡದ ರೂಪದಲ್ಲಿ ಬಹುಮಾನ ಕೊಡತೊಡಗಿದರು. ಭಾಷಣದ ವಿಷಯ ಭಾರತ -ಚೈನಾ ಯುದ್ಧವಾದುದರಿಂದ -ಆಗ ಯುದ್ಧ ನಡೆಯುತ್ತಿದ್ದುದರಿಂದ-ಎಲ್ಲರೂ ಭಾಷಣವನ್ನು ಗಂಭೀರವಾಗಿ ಆಲಿಸುತ್ತಿದ್ದರು. ಶಾಲೆಯಲ್ಲಿ ಈ ಸಂಗತಿ ಗೊತ್ತಾಗಿ ಉಪಾಧ್ಯಾಯರು ಭಾಷಣ ಮಾಡಲು ಹೇಳುತ್ತಿದ್ದರು. ಕ್ರಮೇಣ ಎಲ್ಲರೂ **ಭಾಷಣಕಾರ** ಎಂದು ಕರೆಯಲು ಶುರು ಮಾಡಿದರು.

೦

ಹಾರ್ದಿಕ ಶುಭಾಶಯಗಳು

ಬಿ. ಎಸ್. ವಿಶ್ವನಾಥನ್	ಶರಣಬಸಪ್ಪ	ಉಷಾ ಗಣೇಶ್, ಐ.ಎ.ಎಸ್.
ಅಧ್ಯಕ್ಷರು	ಕಾರ್ಯದರ್ಶಿ	ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ ಬೆಂಗಳೂರು -೫೬೦ ೦೧೮

ಒಂದು ಚಿಂತನೆ

ಮದುವೆಯೆಂಬ ನರಕ



ಗುರುದತ್ತರ ಜನಪ್ರಿಯ ಹಿಂದಿ ಸಿನೆಮಾ ಒಂದರಲ್ಲಿ ಕುಡುಕ ಹಾಸ್ಯಗಾರ ಜಾನಿವಾಕರ್ ಕುಡಿದು ತೂರಾಡುತ್ತ, 'ಮದುವೆಯೆಂದರೆ ಬರೆ ಮೂರಾಬಟ್ಟೆ ಮಾರಾಯ!' ಎಂದು ರಾಗವಾಗಿ ಹಾಡುತ್ತಾನೆ. ಜಾನಿವಾಕರನ ಅನುಭವ ಪ್ರೇಕ್ಷಕರಿಂದ ಮಂದಹಾಸ್ಯದ ಪ್ರತಿಕ್ರಿಯೆ ಪಡೆಯುತ್ತದೆ. ಹೆಚ್ಚಿನ ಭಾರತೀಯರು ಮದುವೆಯ ಬಗ್ಗೆ, ಮಂದಹಾಸ್ಯ, ಕದ್ದು ಮುಚ್ಚಿಟ್ಟ ಹಾದರ, ಭೋಳೆ ಸ್ವಭಾವದ ಅನುಕಂಪ, ಅಥವಾ ಸುಳ್ಳು ನೈತಿಕತೆಗಿಂತ ಹೆಚ್ಚಿನ ಪ್ರತಿಕ್ರಿಯೆ ತೋರಿಸಲು ಅಸಮರ್ಥರು. ಏಕೆಂದರೆ ಈಗಲೂ ಮದುವೆಯ ಬಗೆಗಿನ ನಮ್ಮ ನಂಬಿಕೆ ರಾಮ ಸೀತೆಯರ ಆದರ್ಶ ದಾಂಪತ್ಯದಿಂದ ಪ್ರೇರಿತವಾದದ್ದು. ನಮ್ಮ ಎಲ್ಲ ಜನಪ್ರಿಯ ಕತೆ, ಕಾದಂಬರಿಗಳಲ್ಲಿ, ಸಿನೆಮಾಗಳಲ್ಲಿ-ಅಷ್ಟೇ ಏಕೆ ಕೆ.ಎಸ್. ನರಸಿಂಹಸ್ವಾಮಿಯವರ ಮೈಸೂರು ಮಲ್ಲಿಗೆಯಂತಹ ಕೃತಿಗಳಲ್ಲಿ ಕೂಡಾ ಮದುವೆಯೆಂಬುದು ಅನಂತವಾದ ಒಂದು ಯುಗಳಗೀತೆ; ಹೆಣ್ಣು ಗಂಡುಗಳ ಅನುರಾಗಕ್ಕೆ ಒದಗಬಲ್ಲ ಸುಖಿಯಾದ ಹಾಗೂ ಸಹಜವಾದ ಅಂತ್ಯ. ಭಾರತೀಯ ಮನಸ್ಸಿಗೆ ಎಲ್ಲ ಅಂತ್ಯಗಳೂ - ಜೀವದ ಅಂತ್ಯವೂ ಕೂಡಾ, ಮಂಗಳಕಾರಿಯೇ ಹೌದಾದ್ದರಿಂದ ಅನುರಾಗದ ಅಂತ್ಯದಲ್ಲಿ ಬರುವ ಮದುವೆಯೂ ಶಾಶ್ವತ ಮಂಗಳಕಾರಿಯೇ ಹೌದು.

ಭವಭೂತಿಯ ಉತ್ತರರಾಮಚರಿತೆ ನಾಟಕದಲ್ಲಿ, ತನ್ನ ಮದುವೆಯಲ್ಲಿ ಎರಡನೆಯ ಬಾರಿ ಅಪವಾದವನ್ನ ಹೊತ್ತು ನರಕ ಅನುಭವಿಸುವ ಸೀತಾದೇವಿ ಹಾಗೂ ಮತ್ತೆ ಮತ್ತೆ ಅಪರಾಧಿ ಭಾವದಿಂದ ನರಳಿ ನಲುಗಿ ಹೋಗುವ ಶ್ರೀ ರಾಮಚಂದ್ರ ಇಬ್ಬರೂ ನಾಟಕದ ಕೊನೆಯಲ್ಲಿ, ಆಶ್ಚರ್ಯಕರ ರೀತಿಯಲ್ಲಿ-ದೇವಾನುದೇವತೆಗಳ ಸಹಾಯದಿಂದಾಗಿ ಮತ್ತೆ ಒಂದುಗೂಡುತ್ತಾರೆ. ಕಾಳಿದಾಸನ ಶಾಕುಂತಲ ನಾಟಕದಲ್ಲಿ ಶಾಪಗ್ರಸ್ಥೆ ಶಾಕುಂತಲೆಯೂ ಕಡೆಗೊಮ್ಮೆ ದೈವ ಸಹಾಯದಿಂದಾಗಿ ಪತಿಯನ್ನ ಪುನಃ ಪಡೆಯುತ್ತಾಳೆ. ಭಾರತೀಯರಿಗೆ ಮದುವೆಯೆಂಬುದು ಒಂದೇ ಜನ್ಮದಲ್ಲಿ ಮುಗಿದು ಹೋಗುವ ರಗಳೆಯಲ್ಲ; ಅದು ಜನುಮ ಜನುಮಗಳ ಅನುಬಂಧ.

ಮದುವೆಯ ಶಾಶ್ವತತೆ ಹಾಗೂ ಸುಖದ ಕಲ್ಪನೆಗೆ ಅಪವಾದವಾಗಿ ಚಿತ್ರಿತವಾಗಿರುವ ಭಾರತೀಯ ಕೃತಿಗಳು ಇಲ್ಲವೆಂದೇನಿಲ್ಲ. **ಕಥಾಸರಿತ್ಸಾಗರ** ಅಂತಹದ್ದೊಂದು ಕೃತಿ. ಕಥಾಸರಿತ್ಸಾಗರದ ಹಲವು ಕತೆಗಳಲ್ಲಿ ದಾಂಪತ್ಯದ ವಿರಸ, ಸಣ್ಣತನ, ಮೂರ್ಖ ಲಾಲಸೆಗಳು ಚಿತ್ರಿತವಾಗಿವೆ. ಕಥಾಸ ರಿತ್ಸಾಗರದಿಂದ ಪ್ರೇರಿತವಾಗಿ ರಚಿತವಾಯಿತೆನ್ನಲಾದ ಮತ್ತೊಂದು ಪೌರ್ವಾತ್ಯ ಕೃತಿ **ಅರೇಬಿಯನ್ ನೈಟ್** ಕತೆಗಳು ಇಂತಹ ಮತ್ತೊಂದು ಉದಾಹರಣೆ. ಹೇಗೆ **ಪಂಚತಂತ್ರ**ದ ಕತೆಗಳು, ರಾಜನೊಬ್ಬನ ಮಕ್ಕಳ ಅಜ್ಞಾನ ನಿವಾರಣೆಯ ಸಲುವಾಗಿ ಹೆಣೆಯಲ್ಪಟ್ಟಿತೋ ಹಾಗೆಯೇ ಅರೇಬಿಯನ್ ನೈಟ್ ಕತೆಗಳು ಮದುವೆಯೆಂಬ ಕ್ರೌರ್ಯದಿಂದಾಗಿಯೇ ಜನ್ಮ ತಾಳಿದ ಕೃತಿಗಳು.

ಪ್ರೀತಿಸಿ ಮದುವೆಯಾದ ಹೆಣ್ಣೊಬ್ಬಳು ಮದುವೆಯೆಂಬ ಸಂಸ್ಥೆಯನ್ನ ಕುಲಷಿತಗೊಳಿಸಿ ಜಾರೆಯಾಗಬಲ್ಲಳು ಎನ್ನುವ ಅರಿವು ಅರೇಬಿಯಾದ ರಾಜನೊಬ್ಬನನ್ನ ಹುಚ್ಚನನ್ನಾಗಿಸುತ್ತದೆ. ಆ ರಾಜ ಹೆಣ್ಣು ಕುಲದ ಮೇಲೆಯೇ ಸೇಡು ತೀರಿಸಿಕೊಳ್ಳಲು ಮುಂದಾಗುತ್ತಾನೆ. ದಿನಕ್ಕೊಂದು ಹುಡುಗಿಯನ್ನ ಮದುವೆಯಾಗುವುದು, ಮದುವೆಯ ಪ್ರಸ್ಥದ ಮುಂಜಾವು ಆಕೆಯನ್ನ ಕೊಲ್ಲುವುದು ಆತನ ದಿನಚರಿಯಾಗುತ್ತದೆ. ಕಡೆಗೆ ಅದೇ ರಾಜ್ಯದ ಮಂತ್ರಿಯ ಜಾಣೆ ಮಗಳೊಬ್ಬಳು ಧೈರ್ಯವಹಿಸಿ ಆ ರಾಜನನ್ನ ಮದುವೆಯಾಗುತ್ತಾಳೆ. ತನ್ನ ಮದುವೆಯ ಪ್ರಸ್ಥದ ರಾತ್ರಿ ಕತೆಯೊಂದನ್ನ ಹೇಳಲು ಆರಂಭಿಸುತ್ತಾಳೆ ಆಕೆ. ಇನ್ನೇನು ಬೆಳಗಾದೀತು ಎನ್ನುವಾಗ ಕತೆಯನ್ನ ಅರ್ಧದಲ್ಲಿಯೇ ನಿಲ್ಲಿಸಿಬಿಡುತ್ತಾಳೆ. ಕತೆಯಲ್ಲಿ ಆಸಕ್ತಿ ಕುದುರಿದ ರಾಜ ಕತೆಯನ್ನ ಪೂರ್ತಿಗೊಳಿಸುವಂತೆ ಕೇಳಿಕೊಂಡಾಗ, ತನ್ನ ಕತೆ ಮುಗಿಯುವವರೆಗೂ ತನ್ನನ್ನ ಕೊಲ್ಲಬಾರದೆಂದು ಆಶ್ವಾಸನೆ ಪಡೆದುಕೊಳ್ಳುತ್ತಾಳೆ. ಅಲ್ಲಿಂದ ಮುಂದೆ ಪ್ರತೀ ರಾತ್ರಿ, ಬಿಡದೆ ಸಾವಿರದೊಂದು ರಾತ್ರಿಗಳವರೆಗೆ ಕತೆಗಳನ್ನ ಒಂದಕ್ಕೊಂದರಂತೆ ಪೋಣಿಸಿ ಹೆಣೆದು, ಹೇಳಿ, ತನ್ನ ಜೀವ ಹಾಗೂ ಮದುವೆಯೆಂಬ ಸಂಸ್ಥೆ ಎರಡನ್ನೂ ಉಳಿಸುವಲ್ಲಿ ಯಶಸ್ವಿಯಾಗುತ್ತಾಳೆ.

ಮೇಲೆ ಹೇಳಿದ ಎರಡು ಸಂದರ್ಭಗಳನ್ನ ವಿವೇಚಿಸಿದಾಗ ಒಂದು ಬಹುಮುಖ್ಯ ಸಂಗತಿ ನಮ್ಮ ಗಮನಕ್ಕೆ ಬರುತ್ತದೆ. ಅದೆಂದರೆ ರಾಮಾಯಣವೆಂಬುದು ಮದುವೆ ತಲುಪಬೇಕಾಗಿರುವ ಆದರ್ಶ ಸ್ಥಿತಿಯನ್ನ ಬಿಂಬಿಸಿದರೆ, ಅರೇಬಿಯನ್ ನೈಟ್ ಕತೆಗಳ ನೀತಿ ಮದುವೆ ನಿಂತಿರುವ ನೆಲಗಟ್ಟು ಅಥವಾ ಮದುವೆಗೆ ಒದಗಿ ಬರುವ ವಸ್ತುಸ್ಥಿತಿಯನ್ನ ಬಿಂಬಿಸುತ್ತದೆ. ಭಾರತೀಯ ಮನಸ್ಥಿತಿ ಮದುವೆಯ ವಿಷಯದಲ್ಲಿ -ಅಥವಾ ಮಿಕ್ಕ ವಿಷಯಗಳಲ್ಲೂ ಇರಬಹುದು, ಆದರ್ಶ ಮತ್ತು ವಸ್ತುಸ್ಥಿತಿಗಳ ನಡುವಿನ, ಆಕಾಶ ಭೂಮಿಗಳಂತಹ ಅಗಾಧ ಅಂತರವನ್ನ ನೀಗಲಾರದೆ ಏದುಸಿರು ಬಿಡುತ್ತಿದೆ.

ಮದುವೆಯೆಂಬ ಸಂಸ್ಥೆಗೆ ಆದರ್ಶ ಮತ್ತು ವಾಸ್ತವಗಳ ನಡುವಿನ ಅಂತರ ರಾಮನ ಕಾಲದಿಂದಲೂ ಜಾರಿಯಲ್ಲಿರುವ ಪರಿಸ್ಥಿತಿಯೇ ಹೌದು. ಹಾಗಿಲ್ಲದಿದ್ದರೆ ರಾಮಾಯಣವೆಂಬ ಮಹಾನ್ ಕೃತಿ ಹುಟ್ಟುತ್ತಲೇ ಇರಲಿಲ್ಲ. ಜೊತೆಗೆ ಮದುವೆಯ ಸಮಸ್ಯೆ ಬರೇ ಆದರ್ಶ ಮತ್ತು ವಾಸ್ತವಗಳ ಅಂತರ ಮಾತ್ರವೇ ಆಗಿದ್ದರೆ ಆ ಸಂಸ್ಥೆಯನ್ನ ಹೊಸದಾಗಿ ವಿಶ್ಲೇಷಣೆಗೆ ಹಚ್ಚಬೇಕಾದ ಅನಿವಾರ್ಯತೆ ಕೂಡಾ ಇರುತ್ತಿರಲಿಲ್ಲ. ಆಧುನಿಕ ಮದುವೆಗಳು ರಾಮ ಸೀತೆಯರ ಮದುವೆಯಂತೆ ಆಕಾಶ ಭೂಮಿಗಳ ನಡುವೆ ಮಾತ್ರ ಉಳಿಯದೆ ಪಾತಾಳದ ಆಳವನ್ನ ತಲುಪಿಬಿಟ್ಟಿದೆ. ಹಾಗಾಗಿ ಇಂದಿನ ಸಂದರ್ಭದಲ್ಲಿ ಮದುವೆಯೆಂಬ ಸಂಸ್ಥೆಗೆ ಆಕಾಶವೂ ವಾಸ್ತವ, ಭೂಮಿಯೂ ವಾಸ್ತವ, ಹಾಗೆಯೇ ನರಕ ಸದೃಶವಾದ ಪಾತಾಳವೂ ವಾಸ್ತವವಾಗಿದೆ. ಈ ಮೂರೂ ವಾಸ್ತವಗಳು ಏಕಕಾಲದಲ್ಲಿ ಪ್ರಕಟವಾಗುವ ಹಾಗೂ ಏಕಕಾಲದಲ್ಲಿ ಸತ್ಯವೆಂಬಂತೆ ಭ್ರಮೆ ಹುಟ್ಟಿಸುವ ಮದುವೆಯ ಮೂರು ಮುಖಗಳು.

ಸಾಹಿತ್ಯದ ಸಂದರ್ಭ

ಆದರೆ ಕನ್ನಡ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಮದುವೆಗಳು ಎಂಥವುಗಳು? ಕನ್ನಡ ಸಾಹಿತ್ಯ ಮದುವೆಯೆಂಬ ಸಂಸ್ಥೆಯನ್ನ ಇಡಿಯಾಗಿ, ನಿಷ್ಠುರವಾಗಿ ಹಾಗೂ ವ್ಯಕ್ತಿನಿಷ್ಠವಾಗಿ ವಿಶ್ಲೇಷಿಸಿದೆಯೆ? ಮದುವೆಯ ನರಕ ಸದೃಶವಾದ ಮೂರನೆಯ ಮುಖವನ್ನ ಕನ್ನಡ ಸಾಹಿತ್ಯ ಗುರುತಿಸಿದೆಯೆ?

ಕನ್ನಡದ ಹಲವು ಲೇಖಕರು, ಚಿಂತಕರು ಹಾಗೂ ಗಣ್ಯರುಗಳ ಮದುವೆ ನರಕವಾಗಿತ್ತು. ಖಾಸಗಿ ಸಂಭಾಷಣೆಗಳಲ್ಲಿ, ಹಾಗೂ ಗಾಸಿಪ್‌ಗಳಲ್ಲಿ ತಿಳಿದು ಬರುವ ಈ ಸಂಗತಿ, ಕನ್ನಡದಲ್ಲಿ ಸಾರ್ವಜನಿಕ ಚರ್ಚೆಗೆ ಒಳಗಾಗಿಲ್ಲ. ಮದುವೆಯೆಂಬ ಕಿರಿಕಿರಿಯನ್ನ ಸಾರ್ವಜನಿಕ ಚರ್ಚೆಗೆ ಒಳಪಡಿಸುವುದು ಕನ್ನಡಿಗರಿಗೆ ಇನ್ನೂ ಸಾಧ್ಯವಾಗಿಲ್ಲ. ಕತೆಗಾರ ಕೆ. ಎಸ್. ಸದಾಶಿವರ ವೈವಾಹಿಕ ಜೀವನದ ಬಗ್ಗೆ ನೋವಿನ ಮಾತುಗಳನ್ನ ನಾವು ಕೇಳಿದ್ದೇವೆ. ಸರ್. ಎಂ. ವಿಶ್ವೇಶ್ವರಯ್ಯನವರ ವೈವಾಹಿಕ ದುರಂತದ

ಬಗ್ಗೆ ಕೇಳಿದ್ದೇವೆ. ಟಿ.ಪಿ. ಕೈಲಾಸಂ ಅವರ ಬದುಕಿನ ದುರಂತದ ಮಾತು ಅಲ್ಲಲ್ಲಿ ಬಂದಿದೆ. ಈಗ ಬದುಕಿರುವ ಹಲವು ಲೇಖಕ, ಲೇಖಕಿಯರ ವೈವಾಹಿಕ ಜೀವನ ನರಕ ಸದೃಶವೆಂದು ನಮಗೆ ಖಾಸಗಿಯಾಗಿ ತಿಳಿದಿದೆ. ಆದರೂ ಕನ್ನಡ ಸಾಹಿತ್ಯದಲ್ಲಿ ಗಂಡ ಹೆಂಡಿರು ತಾತ್ವಿಕವಾಗಿ ಜಗಳವಾಡಿದ್ದು ಕಡಿಮೆಯೇ. ವ್ಯಕ್ತಿನಿಷ್ಠ ಹಟದಿಂದ ಮದುವೆಗೆ ಜೋತುಬಿದ್ದು, ಅದನ್ನ ಮುರಿಯಲೂ ಆಗದೆ, ಬಾಳಲೂ ಬಾರದೆ ನಿತ್ಯ ನರಕ ಅನುಭವಿಸಿದ್ದನ್ನ ಕನ್ನಡ ಸಾಹಿತ್ಯ ದಾಖಲು ಮಾಡಿಲ್ಲ. ಮದುವೆಯೆಂಬ ನರಕಕ್ಕೆ ನಮ್ಮದು ಮೂಕ ಪ್ರತಿಕ್ರಿಯೆ. ತನ್ನ ಪರಿಸ್ಥಿತಿಯನ್ನ ಹಣೆಯ ಬರಹ ಅಥವಾ ಪೂರ್ವ ಜನ್ಮದ ಫಲ ಎಂಬಂತೆ ಅನುಭವಿಸುವುದು ಕನ್ನಡಿಗರ ರೀತಿ, ಕನ್ನಡ ಸಾಹಿತ್ಯದ್ದೂ ಹೆಚ್ಚೂ ಕಡಿಮೆ ಇದೇ ರೀತಿ.

ಅನಂತಮೂರ್ತಿಯವರ **ಸಂಸ್ಕಾರ** ಕಾದಂಬರಿಯಲ್ಲಿ ಪ್ರಾಣೇಶಾಚಾರ್ಯರದ್ದು ವಿಶಮ ವಿವಾಹ. ಆದರೆ ಪ್ರಾಣೇಶಾಚಾರ್ಯರು ಆದರ್ಶಪತಿ; ಜೀವನದುದ್ದಕ್ಕೂ ರೋಗಿ ಸತಿಯ ಸೇವೆ ಮಾಡಿಕೊಂಡಿದ್ದು, ಕಡೆಗೊಮ್ಮೆ ಪರಿಸ್ಥಿತಿಯ ಒತ್ತಡದಿಂದಾಗಿ ಪರಸ್ತ್ರೀಯನ್ನ ಕೂಡಿದಾಗ, ಮೈಲಿಗೆಯಾದವರಂತೆ ಒದ್ದಾಡುತ್ತಾರೆ ಪ್ರಾಣೇಶಾಚಾರ್ಯರು. ಲಂಕೇಶರ ಸಾಹಿತ್ಯದಲ್ಲಿ ಬರುವ ಹೆಚ್ಚಿನ ವಿವಾಹಗಳು ವಿಶಮ ವಿವಾಹಗಳು. ಲಂಕೇಶರ ಪಾತ್ರಗಳಿಗೆ ಸ್ವಲ್ಪ ಮಟ್ಟಿಗೆ ವಿಶಮತೆಯ ಅರಿವೂ ಇದೆ. ಆದರೂ ಅವು ಹಟ ಹಿಡಿದು ಪರಿಸ್ಥಿತಿಯೊಂದಿಗೆ ಬಡಿದಾಡುವುದು ಕಡಿಮೆಯೆ. ಚಂದ್ರಶೇಖರ ಕಂಬಾರರ **ಸಿಂಗಾರೆವ್ವ ಮತ್ತು ಅರಮನೆಯಲ್ಲಿ** ಮದುವೆಯೆಂಬುದು ಅಪ್ಪಟ ನರಕ. ಆದರೆ ಸಿಂಗಾರೆವ್ವನಿಗಾಗಲೀ ಅಥವಾ ಕಾದಂಬರಿಯ ಇತರೆ ಪಾತ್ರಗಳಿಗಾಗಲೀ ತಮ್ಮ ಪರಿಸ್ಥಿತಿಯ ತಾತ್ವಿಕ ಅರಿವಿಲ್ಲ, ಇರುವುದು ಸಾಧ್ಯವೂ ಇಲ್ಲ, ಶಿವರಾಮ ಕಾರಂತರ **ಮರಳಿಮಣ್ಣಿಗೆ** ಕಾದಂಬರಿಯಲ್ಲಿ ನರಕ ಸದೃಶ್ಯವಾದ ದಾಂಪತ್ಯವೊಂದು ಚಿತ್ರಿತವಾಗಿದೆ, ಆದರೆ ಕಾದಂಬರಿಯಲ್ಲಿ ನರಕ ಅನುಭವಿಸುವ ಹೆಂಗಸು ಬಂಡೇಳುವುದಿಲ್ಲ. ನಾನು ಇಲ್ಲಿ ಕನ್ನಡದ ಶ್ರೇಷ್ಠ ಕೃತಿಗಳ ಉದಾಹರಣೆಯನ್ನ ಮಾತ್ರ ಕೈಗೊತ್ತಿಕೊಂಡದ್ದಕ್ಕೆ ಕಾರಣವಿದೆ. ಕನ್ನಡದ ಪಾತ್ರಗಳ ಈ ರೀತಿಯ ನಡವಳಿಕೆ ಅವುಗಳ ಊನವೆಂದಾಗಲೀ ಅಥವಾ ಕೃತಿಗಳ ಊನವೆಂದಾಗಲೀ ಸಾಧಿಸುವುದು ನನ್ನ ಉದ್ದೇಶವಲ್ಲ. ಬದಲಿಗೆ ಕನ್ನಡದಲ್ಲಿ ಆಧುನಿಕತೆಯ ಪ್ರವೇಶವಾದ ವಿಚಿತ್ರ ರೀತಿಯ ಬಗ್ಗೆ ಗಮನಸೆಳೆಯಬೇಕಾಗಿದೆ ನನಗೆ.

ಕನ್ನಡದ ಜಾಯಮಾನಕ್ಕೆ -ಅಥವಾ ಭಾರತೀಯ ಜಾಯಮಾನಕ್ಕೆ ಹೌದು, ಆಧುನಿಕತೆ ಹೊರಗಿಂದ ಒದಗಿಬಂದ ಒಂದು ಅನಿವಾರ್ಯ ಪರಿಸ್ಥಿತಿ. ಭರತವರ್ಷಕ್ಕೊಂದು ಹಿಂದೂಖುಷ್ ಪರ್ವತ ಹಾಗೂ ಆ ಪರ್ವತದೊಳಗೊಂದು ಖೈಬರ್ ಕಣಿವೆ ಲಭ್ಯವಾಗಿದೆ. ಭಾರತದಲ್ಲಾಗಿರುವ ಎಲ್ಲ ಬದಲಾವಣೆಗಳು ಈ ಕಣಿವೆಯ ಮೂಲಕ ಬಂದು ಬಿಟ್ಟಿವೆ. ಹಾಗಾಗಿ ಎಲ್ಲ ಬದಲಾವಣೆಗಳು, ಮೊದಲು

ಆಕ್ರಮಣಕಾರರಂತೆ ಕಂಡು, ಆನಂತರ ನಿಧಾನವಾಗಿ ಇಲ್ಲೇ ನೆಲೆಯೂರಿ ನಿಂತು, ನಮ್ಮದೇ ಆಗಿಬಿಡುತ್ತವೆ. ನಾವು ಅನ್ಯವನ್ನ ಪ್ರತಿಭಟಿಸುತ್ತಲೇ ಅನ್ಯವನ್ನ ಸ್ವೀಕರಿಸುತ್ತಲೂ ಹೋಗುತ್ತೇವೆ. ಯುರೋಪಿನ ಪರಿಸ್ಥಿತಿ ಹಾಗಲ್ಲ. ಯುರೋಪಿಗೆ ಆಧುನಿಕತೆಯನ್ನ ಸ್ವಂತ ಪ್ರಯತ್ನದಿಂದ ಆವಿಷ್ಕರಿಸಿದ ಹೆಮ್ಮೆಯಿದೆ (ಅಥವಾ ಕೆಲವರಿಗೆ ನಾಚಿಕೆಯಿದೆ).ಆದ್ದರಿಂದ ಯುರೋಪಿನ ಚಿಂತಕರು -ಅವರು ಆಧುನಿಕತೆಯನ್ನ ಒಪ್ಪುವವರೇ ಆಗಲೀ, ಒಪ್ಪದವರೇ ಆಗಲಿ, ಅದನ್ನ ಇಡಿಯಾಗಿ ಒಪ್ಪುತ್ತಾರೆ ಅಥವಾ ಇಡಿಯಾಗಿ ತಿರಸ್ಕರಿಸುತ್ತಾರೆ. ನಾವು ಭಾರತೀಯರು ಹಳೆಯ ಜಾಯಮಾನವನ್ನ ಬಿಟ್ಟುಕೊಡದಲೆ ಹೊಸ ಪರಿಸ್ಥಿತಿಯೊಂದಿಗೆ ಹೊಂದಿಕೊಳ್ಳಲು ಹೆಣಗುವವರು.

ಗಾಂಧೀಜಿಯಂತಹ ವಿಪರೀತರನ್ನ ಬಿಟ್ಟರೆ ಹೆಚ್ಚಿನ ಭಾರತೀಯರಿಗೆ ಇಂದಿಗೂ ಆಧುನಿಕತೆಯ ಬಗ್ಗೆ ಸ್ಪಷ್ಟವಾದ ನಿಲುವಿಲ್ಲ. ಪ್ರತಿಯೊಬ್ಬ ಭಾರತೀಯನೂ ಆಧುನಿಕತೆಯ ಒಂದು ಮುಖವನ್ನು ತಿರಸ್ಕರಿಸುತ್ತಲೇ ಮತ್ತೊಂದು ಮುಖವನ್ನ ಪ್ರೀತಿಸುತ್ತಿರುತ್ತಾನೆ. ಹೆಚ್ಚಿನ ಭಾರತೀಯರಿಗೆ ಹಿಂದೂ ಸಮಾಜವೆಂಬ ಭ್ರಮೆಯಿಂದಾಗಿ ಬಿ.ಜೆ.ಪಿ ಬೇಕು, ವಸ್ತುಸ್ಥಿತಿಯ ಆತಂಕದಿಂದಾಗಿ ಸಮಾಜವಾದ ಬೇಕು. ಬಿ. ಜೆ. ಪಿ ಯ ಒಳಗೆ ಕೂಡಾ ಇತ್ತ ಸ್ವದೇಶಿ ತತ್ವವೂ ಬೇಕು ಅತ್ತ ಕ್ಯಾಪಿಟಲಿಸ್ಟ್ ಬೆಳವಣಿಗೆಯೂ ಬೇಕು. ಮಧ್ಯಮ ವರ್ಗದ ಅಪ್ಪ ಅಮ್ಮಂದಿರಿಗೆ ತನ್ನ ಮಗು ಇತ್ತ ಶಾರುಖ್ ಖಾನ್ ಹಾಗೂ ಸಾಯಿರಾಬಾನು ತರಹ ಮಾಡರ್ನ್ ಆಗಿಯೂ ಇರಬೇಕು, ಅತ್ತ ಸತಿ ಸಾವಿತ್ರಿ ಅಥವಾ ಸೀತಾದೇವಿಯ ಅಪರಾವತಾರವೂ ಆಗಿರಬೇಕು. ಭಾರತೀಯರ ಈ ವಿಚಿತ್ರ ಡೋಲಾಯಮಾನ ಪರಿಸ್ಥಿತಿ ಅವರ ಮದುವೆಗಳಲ್ಲಿ ಖಂಡಿತವಾಗಿ ಪ್ರತಿಬಿಂಬಿತವಾಗಿದೆ.

ಭಾರತೀಯತೆ ಎಂಬ ಪರಿಕಲ್ಪನೆ

ಭಾರತೀಯ ಎಂಬ ಪರಿಕಲ್ಪನೆಯೇ ಒಂದು ಹೊಲ್ಡಾಲ್ ಇದ್ದಂತೆ. ಅದರಲ್ಲಿ ಪ್ರಾಣೇಶಾಚಾರ್ಯರನ್ನ ತುರುಕಿದ ಹಾಗೆಯೇ ಸಾರಣಪ್ಪನನ್ನೂ ತುರುಕಬಲ್ಲೆವು ನಾವು. ಆರ್ಯರು, ದ್ರಾವಿಡರು, ಉತ್ತರ ಭಾರತದವರು, ತಮಿಳರು, ತಿಗುಳರು ಗುಡ್ಡಗಾಡು ಜನರು, ಅಪ್ಪಟ ಸಂಪ್ರದಾಯಸ್ಥರು, ಅಪ್ಪಟ ಆಧುನಿಕರು, ದೇವದಾಸಿಯರು, ಬಿಳಿಯರು, ಕರಿಯರು ಹೀಗೆ ಹಲವು ಹತ್ತು ಪಂಗಡಗಳು, ಜಾತಿಗಳು ಸೇರಿ ಭಾರತೀಯವಾಗಿದೆ. ಭಾರತೀಯ ನಾಗರೀಕತೆಯಲ್ಲಿ ವೇದ, ಉಪನಿಷತ್ತು, ರಾಮಾಯಣಗಳದ್ದು ಒಂದು ಟಿಸಿಲಾದರೆ ಅವುಗಳಿಂದ ಅತೀತವಾಗಿ ಉಳಿದು ತಮ್ಮದೇ ರೀತಿಯ ಸಭ್ಯತೆಯನ್ನ ಬೆಳೆಸಿಕೊಂಡು ಬಂದಿದ್ದ ಹಲವು ಜನಾಂಗಗಳು ಬದುಕಿ ಬಂದಿವೆ. ತಮಾಷೆಯ ಮಾತೆಂದರೆ ಈ ಯಾವ ಜನಾಂಗವೂ ರಾಮಾಯಣ ಮಹಾಭಾರತಗಳಿಂದ ಅತೀತವಾಗಿ ಉಳಿದಿರಲಿಲ್ಲ. ಆಯಾ ಪಂಗಡಗಳಿಗೆ ಅವುಗಳದ್ದೇ ಆದ ರಾಮಾಯಣಗಳು ಲಭ್ಯವಾಗಿದ್ದವು. ಈ

ಎಲ್ಲ ರಾಮಾಯಣದ್ದೂ ಕತೆ ಸ್ಥೂಲವಾಗಿ ಒಂದೇಟೇ ಆದರೂ, ಪಾತ್ರಗಳ ರೀತಿ, ನೀತಿ ಹಾಗೂ, ನೈತಿಕತೆ ಬೇರೆ ಬೇರೆಯೇ ಆಗಿದೆ.

ಭಾರತದ ಎಷ್ಟೊ ಜನಾಂಗಗಳಲ್ಲಿ ಮೊನ್ನೆ ಮೊನ್ನೆಯವರೆಗೆ ಮದುವೆಯೆಂಬುದು ಕೂಡಿಕೆ ಮಾತ್ರವೇ ಆಗಿತ್ತು.

ಭಾರತದ ಹಲವು ಜನಾಂಗಗಳು ಮಾತೃಪ್ರಧಾನ ವ್ಯವಸ್ಥೆಗಳು. ಮಾತೃಪ್ರಧಾನ ವ್ಯವಸ್ಥೆಯಲ್ಲಿ ಮದುವೆ ಎಂಬುದು ತುಂಬ ಭಿನ್ನವಾದ ಸಂಸ್ಥೆ. ಹಾಗಾಗಿ ಭಾರತವನ್ನ ಏಕತೆಗಿಂತ ಅನೇಕತೆಯಲ್ಲಿ ಗುರುತಿಸುವುದೇ ಕ್ಷೇಮಕರ. ಭಾರತೀಯರೆಲ್ಲರೂ ಒಂದೇ ರೀತಿ ನಡೆದುಕೊಳ್ಳಬೇಕು, ಒಂದೇ ರೀತಿ ಯೋಚಿಸಬೇಕು ಎನ್ನುವುದು ಭಯಾನಕ ಪರಿಣಾಮಗಳಿಗೆ ಎಡೆಗೊಡುತ್ತದೆ. ದುರಂತದ ಮಾತೆಂದರೆ, ಇಂದು ಎಲ್ಲ ಭಾರತೀಯರನ್ನೂ ಒಂದುಗೂಡಿಸುತ್ತಿರುವುದು ಆಧುನಿಕತೆಯೇ ಆಗಿದೆ, ಹಾಗೂ ಆ ಕಾರಣಕ್ಕಾಗಿ ಗಂಡುಹೆಣ್ಣಿನ ಸಂಬಂಧವನ್ನ ಅದು ಮತ್ತಷ್ಟು ಜಟಿಲವೂ, ಗೊಂದಲಮಯವೂ ಆಗುವಂತೆ ಮಾಡಿದೆ.

ಯುರೋಪಿಯನ್ ಮದುವೆ ಹಾಗೂ ನಾಟಕಕಾರ ಸ್ಟ್ರಿಂಡ್‌ಬರ್ಗ್

ಜನ್ಮ ಜನ್ಮಾಂತರಗಳ ಶಾಶ್ವತತೆ ಭಾರತೀಯ ಮದುವೆಗೆ ಆದರ್ಶವಾದರೆ, ಪ್ರೀತಿಯೇ ಯುರೋಪಿಯನ್ ಮದುವೆಗೆ ಆದರ್ಶ. ಹಾಗೆಂದೇ ಕಾಳಿದಾಸನ **ಶಾಕುಂತಲ** ನಾಟಕದ ಜರ್ಮನ್ ಅನುವಾದವನ್ನ ನೋಡಿ ಮಹಾಕವಿ ಗಯಟೆ 'ಪ್ರೀತಿಯ ಆದರ್ಶದ ಬಗ್ಗೆ ಬರೆದ ನಾಟಕವಿದು' ಎಂದು ತಪ್ಪಾಗಿ ಗ್ರಹಿಸುತ್ತಾನೆ. ಮೊದಲ ನೋಟದಲ್ಲೇ ಆಕರ್ಷಿತರಾಗಿಬಿಡುವ ಶಾಕುಂತಲ ಹಾಗೂ ದುಶ್ಯಂತರು, ದೈಹಿಕವಾಗಿ ಕೂಡುವ ಮೊದಲು-(ಅಥವಾ ಗಾಂಧರ್ವ ವಿವಾಹವಾಗುವ ಮೊದಲು) ಆದರ್ಶ ಪ್ರೀತಿಯನ್ನ ಅನುಭವಿಸಿದರು ಎನ್ನುವ ಗಯತೆಯ ವಿಚಾರಕ್ಕೆ ನಾಟಕದಲ್ಲಿ ಯಾವ ಪುರಾವೆಯೂ ಇಲ್ಲ. ಹಾಗೆ ನೋಡಿದರೆ ಕಣ್ವರ ಆಶ್ರಮದತ್ತ ಬರುತ್ತಿರುವ ದುಶ್ಯಂತನನ್ನ ಕಾಳಿದಾಸ ಮದಕ್ಕೆ ಬಂದ ಆನೆಯೆಂಬಂತೆ ವರ್ಣಿಸುತ್ತಾನೆ. ದುಶ್ಯಂತ ಶಾಕುಂತಲೆಯರ ಪ್ರೀತಿಯೇನಿದ್ದರೂ ವೈವಾಹಿಕ ಜೀವನದ ನಂತರ, ವಿವಾಹದ ತಾಪದಲ್ಲಿ ಬೆಂದು ಬೆಳೆದು ಬಂದದ್ದು. ಅವರ ಪ್ರೀತಿಗೆ, ಅವರಿಗಿಂತಲೂ ಅವರಿಬ್ಬರ ಮಗ ಭರತ ಕಾರಣನಾಗುತ್ತಾನೆ. ದುಷ್ಯಂತನ ಇತರ ಪತ್ನಿಯರಿಗೆ ಮಕ್ಕಳಿರಲಿಲ್ಲ ಎನ್ನುವ ಅಂಶ ದುಶ್ಯಂತ ಶಾಕುಂತಲೆಯತ್ತ ಮರಳಿ ಬರಲಿಕ್ಕೆ ಕಾರಣವಾಗುತ್ತದೆ. ಶೂದ್ರಕನ **ಮೃಚ್ಛಕಟಿಕ** ನಾಟಕದಲ್ಲಿ ಮಾತ್ರ, ಪ್ರೀತಿಯೆಂಬುದು ಯುರೋಪಿಯನ್ ಆದರ್ಶಕ್ಕೆ ಹತ್ತಿರವಾದಂತಹ ರೀತಿಯಲ್ಲಿ ಚಿತ್ರಿತವಾಗಿದೆ. ಆದರೆ ಮೃಚ್ಛಕಟಿಕದ ವಸಂತಸೇನೆ ಮದುವೆಯ

ಬಂಧವಿಲ್ಲದ ವೇಶ್ಯೆ ಹಾಗೂ ಚಾರುದತ್ತ ಈಗಾಗಲೇ ಮದುವೆಯಾಗಿ ಆ ಮೂಲಕ ಮದುವೆಯೆಂಬ ಬಂಧನ ಕಳೆದುಕೊಂಡ 'ರಸಿಕ' ಎನ್ನುವುದನ್ನ ನಾವು ಮರೆಯಬಾರದು.

ಯುರೋಪಿಯನ್ನರ ಗ್ರಹಿಕೆಯ ಪ್ರೀತಿ ವ್ಯಕ್ತಿನಿಷ್ಠವಾದ ಪರಿಕಲ್ಪನೆ. ಹಾಗಾಗಿ ಯುರೋಪಿಯನ್ ಮದುವೆಯೂ ವ್ಯಕ್ತಿನಿಷ್ಠವಾದದ್ದೇ. ಆದರೆ ಭಾರತೀಯ ಮದುವೆಗಳು ವ್ಯಕ್ತಿನಿಷ್ಠವಲ್ಲ. ಹಾಗಾಗಿ ಸಾಂಪ್ರದಾಯಿಕ ಮದುವೆಗಳಲ್ಲಿ ವೈಯಕ್ತಿಕ ಪ್ರಯತ್ನಕ್ಕೆ ಸ್ಥಾನವೇ ಇಲ್ಲ. ಏಳು ಬಾರಿ ಅಗ್ನಿಯನ್ನ ಸುತ್ತಿ ಬಂದರೆ ಅಲ್ಲಿಗೆ ಆ ಹೆಣ್ಣು ಗಂಡುಗಳಿಗೆ ಆಯ್ಕೆಯ ಪ್ರಶ್ನೆ ಮುಗಿಯಿತು. ಅಲ್ಲಿಂದಾಚೆ ಅವರು ಶಾಶ್ವತವಾಗಿ ವಿವಾಹಿತರು. ಅಲ್ಲಿಂದಾಚೆ ಗಂಡಸು ಪೂಜ್ಯನಾದ ಪತಿ, ಹೆಂಗಸು ಪತಿವ್ರತೆಯಾದ ಸತಿ.

(ಮುಂದುವರೆಯುವುದು)

ಜಯ ಭಾರತ ಜನನಿಯ ತನುಜಾತೆ

ಜಯಹೇ ಕರ್ನಾಟಕ ಮಾತೆ

ಕೃಷ್ಣೆ, ತುಂಗೆ, ಕಾವೇರಿ ನದಿಗಳ
ಕಲರವದ ಚೆಲುವ ಈ ನಾಡು ಧನ್ಯ

ಭವ್ಯ ಸಂಸ್ಕೃತಿ, ವಿಶಿಷ್ಟ ಪರಂಪರೆ
ಸುಧೀರ್ಘ ಚರಿತ್ರೆಯ ಕನ್ನಡನಾಡಿನ ಜನರೇ ಧನ್ಯ

ತಪೋಭೂಮಿ, ಪಾವನ ಭೂಮಿ
ಸುಖಶಾಂತಿ, ಸಹಬಾಳ್ವೆಯ ಜೇನುಗೂಡು,
ಈ ಕರ್ನಾಟಕ ನಿಜಕ್ಕೂ ಧನ್ಯ

ಬನ್ನಿ ..... ಸಮೃದ್ಧ, ಸಂಪದ್ಭರಿತ, ಸ್ವಾಭಿಮಾನಿ
ಕರ್ನಾಟಕ ಕಟ್ಟಲು ಒಂದಾಗಿ ದುಡಿಯೋಣ

ತಮ್ಮೆಲ್ಲರಿಗೂ, ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

ಕರ್ನಾಟಕ ವಾರ್ತೆ

ಮಿಲನ್ ಕುಂದೇರನ ವಿಚಾರಗಳು

ಕಾದಂಬರಿಯ ಕಲೆ

ಬಿ. ಜನಾರ್ದನ ಭಟ್

"ಮನುಷ್ಯ ಯೋಚಿಸುತ್ತಾನೆ, ದೇವರು ನಗಾಡುತ್ತಾನೆ" - ಯಹೂದೀಗಾದೆ.

ಫ್ರಾನ್ಸುವಾ ರಬೆಲಾ ಒಂದು ದಿನ ದೇವರ ನಗುವನ್ನು ಕೇಳಿಸಿಕೊಂಡ, ಯುರೋಪಿನ ಮೊತ್ತಮೊದಲ ಕಾದಂಬರಿ ಹುಟ್ಟಿತು ಎಂದು ಮಿಲನ್ ಕುಂದೇರ ಕಲ್ಪಿಸಿಕೊಳ್ಳುತ್ತಾನೆ. ದೇವರು ಯಾಕೆ ನಗುತ್ತಾನೆಂದರೆ ಮನುಷ್ಯರು ಯೋಚಿಸಿದಂತೆಲ್ಲ ಯೋಚನೆಗಳು ವಿಭಿನ್ನವಾಗುತ್ತಾ ಹೋಗುತ್ತದೆ. ಆದರೆ ಎಲ್ಲರೂ ತನ್ನಂತೆ ಯೋಚಿಸುತ್ತಾರೆ, ಯೋಚಿಸಬೇಕು ಎಂದೇ ಜನ ತಿಳಿಯುತ್ತಾರೆ. ಅಂಥವರನ್ನು ನಗಲಾರದವರು (agelaste) ಎಂದು ಕುಂದೇರ ಕರೆಯುತ್ತಾನೆ.

ನಗಲಾರದವ ಎಂಬ ಶಬ್ದ ಫ್ರಾನ್ಸು ವಾ ರಬೆಲಾ ಸೃಷ್ಟಿಸಿದ ಅನೇಕ ಹೊಸ ಶಬ್ದಗಳಲ್ಲಿ ಮುಖ್ಯವಾದುದು. ಆದರೆ ಅದು ಯಾಕೋ ವ್ಯಾಪಕವಾಗಿ ಬಳಕೆಗೆ ಬಂದಿಲ್ಲ. ಸತ್ಯವೆನ್ನುವುದು ಸ್ಪಷ್ಟವಾಗಿದೆ ; ಎಲ್ಲರೂ ಏಕ ಪ್ರಕಾರವಾಗಿ ಯೋಚಿಸಬೇಕು; ನಾವು ಏನು ಯೋಚಿಸುತ್ತೇವೋ ಅದೇ ಆಗಿರುತ್ತೇವೆ ಎಂದು ನಗಲಾರದವ ತಿಳಿಯುತ್ತಾನೆ.

ಆದರೆ ಕಾದಂಬರಿಯಲ್ಲಿ ಪರಿಸ್ಥಿತಿ ತದ್ವಿರುದ್ಧ. ಅದು ಸ್ವತಂತ್ರ - ಪ್ರತ್ಯೇಕ ವ್ಯಕ್ತಿಗಳ ಸ್ವರ್ಗವಾಗಿದೆ. ಅಲ್ಲಿ ಯಾರೊಬ್ಬನೂ ಸತ್ಯದ ಒಡೆಯನಲ್ಲ. ಪ್ರತಿ ಪಾತ್ರಕ್ಕೂ ತನ್ನನ್ನು ಅರ್ಥಮಾಡಿಕೊಳ್ಳಲು ಒತ್ತಾಯಿಸುವ ಹಕ್ಕಿದೆ. ಉದಾಹರಣೆಗೆ 'ಅನ್ನಾ ಕರೆನಿನಾ' ಕಾದಂಬರಿಯಲ್ಲಿ ಕರೆನಿನ್ ಸರಿಯೋ ಅನ್ನಾ ಸರಿಯೋ ಎಂದು ನಿರ್ಧಾರ ಮಾಡುವುದು ಹೇಗೆ? ಲೇಖಕನೂ ಅದನ್ನು ನಿರ್ಧರಿಸಲಾರ. ಟಾಲ್‌ಸ್ಟಾಯಿಯ ನೈತಿಕ ನಿಲುವನ್ನು ಮೀರಿ ಅನ್ನಾಳ ಪಾತ್ರ ಸೃಷ್ಟಿಯಾಗಿದೆ.

ರಬೆಲೂನ GAKGANTHU AND PANTAGRUEL ಕಾದಂಬರಿಯಿಂದ ಕುಂದೇರ ಒಂದು ಉದಾಹರಣೆ ಕೊಡುತ್ತಾನೆ. ಅದರಲ್ಲಿ ಪನರ್ಜ್ ಎಂಬುವ ತಾನು ಮದುವೆಯಾಗಬೇಕೇ ಬೇಡವೆ ಎಂದು ತಿಳಿಸುವರನ್ನು, ಜ್ಞಾನಿಗಳನ್ನೆಲ್ಲ ಪ್ರಶ್ನಿಸುತ್ತಾನೆ. ಧರ್ಮಶಾಸ್ತ್ರ, ತತ್ವಶಾಸ್ತ್ರ ಮುಂತಾದ ಜ್ಞಾನ ಮಾರ್ಗಗಳಲ್ಲೆಲ್ಲ ಈ ಪ್ರಶ್ನೆಗೆ ಉತ್ತರ ಹುಡುಕಲಾಗುತ್ತದೆ. ಕೊನೆಗೂ ಅವನ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ.

ಕಾದಂಬರಿಕಾರ ರಬೆಲಾನ ಪ್ರತಿಭೆ ತತ್ವಜ್ಞಾನಿ ಡೆಕಾರ್ಟೆಯ ಪ್ರತಿಭೆಗಿಂತ ಭಿನ್ನವಾದುದು. ತತ್ವಜ್ಞಾನಕ್ಕಿಂತ ಭಿನ್ನವಾದ ಜ್ಞಾನ ಕಾದಂಬರಿಯದು. ಕಾದಂಬರಿಯ ಮಾರ್ಗ ಹಾಸ್ಯದ್ದು ಎಂದು ಕುಂದೇರ ತಿಳಿಯುತ್ತಾನೆ. ('Jerusalem Address: The Novel and Europe' ಭಾಗದಿಂದ)

೨

ಡೆಕಾರ್ಟೆ ಮತ್ತು ಗೆಲಿಲಿಯೋ ಇವರಿಂದ ಪ್ರಭಾವಿತವಾದ ಐರೋಪ್ಯ ಬುದ್ಧಿ ತಂತ್ರಜ್ಞಾನ ವಿಜ್ಞಾನಗಳ ಪ್ರಭಾವಕ್ಕೊಗಾಗಿ ಜಗತ್ತನ್ನು ತಾಂತ್ರಿಕವಾಗಿ ಪರಿಶೀಲಿಸಬೇಕಾದ ವಸ್ತುವೆಂದು ಗ್ರಹಿಸುತ್ತದೆ. ಅದು ಬದುಕನ್ನು ಇಡಿಯಾಗಿ ಮತ್ತು ನಿಜವಾಗಿ ಗ್ರಹಿಸುವ ಶಕ್ತಿಯನ್ನು ಕಳೆದುಕೊಂಡಿದೆ ಎಂದು ಹಸರ್ಲ್ (ಹೈಡೆಗರ್‌ನ ಗುರು) ಅಭಿಪ್ರಾಯ ಪಟ್ಟನಂತೆ. ಕುಂದೇರ ಅದಕ್ಕೆ ಪ್ರತಿಕ್ರಿಯಿಸುತ್ತ ಹೇಳುತ್ತಾನೆ - ನವಯುಗದ ಹರಿಕಾರ ಡೆಕಾರ್ಟೆ ಒಬ್ಬನೇ ಅಲ್ಲ; ಸರ್ವಾಂಟೀಸ್ ಕೂಡ ಹೌದು.

ತತ್ವಶಾಸ್ತ್ರ ಮತ್ತು ವಿಜ್ಞಾನ ಮನುಷ್ಯನ ಇರಸ್ತಿಕೆಯನ್ನು ಮರೆತುಬಿಟ್ಟರೂ, ಹಾಗೆ ಮರೆತುಬಿಟ್ಟ ಇರಸ್ತಿಕೆಯನ್ನು ಪರಿಶೀಲಿಸುವ ಒಂದು ಶ್ರೇಷ್ಠ ಕಲೆಯನ್ನು ಕಾದಂಬರಿಕಾರ ಸರ್ವಾಂಟೀಸ್ ರೂಪಿಸಿದ ಅಥವಾ ಪುನರ್ಜನ್ಮ ನೀಡಿದ.

ಸರ್ವಾಂಟೀಸನ 'ಡಾನ್ ಕ್ವಿಕ್ಸೋಟ್ ' ಕಾದಂಬರಿ ಏನು ಹೇಳುತ್ತದೆ ಎಂದು ಕೇಳಿದರೆ ಹುಚ್ಚು ಆದರ್ಶಗಳ ಧಿಕ್ಕಾರವೆಂದೋ, ಅದರ ವೈಭವೀಕರಣವೆಂದೋ ವಾದಿಸುವವರು ಸಿಕ್ಕುತ್ತಾರೆ. ಯಾಕೆಂದರೆ ಜನರಿಗೆ ಒಂದೋ ಅದು, ಇಲ್ಲವೇ ಇದು, ಒಂದೋ ಸರಿ ಇಲ್ಲವೇ ತಪ್ಪು, ತೀರ್ಮಾನವಾಗಿಯೇ ಬಿಡಬೇಕು. (ಮತ ಧರ್ಮಗಳು ಈ ತುಡಿತದಿಂದಲೇ ಹುಟ್ಟಿವೆ) ಇಂಥವರಿಗೆ ಪ್ರತಿ ಸಂದರ್ಭದಲ್ಲೂ ಯಾರಾದರೊಬ್ಬರದು ಸರಿ, ಇನ್ನೊಬ್ಬರದು ತಪ್ಪು - ಹೀಗೆಯೇ ಇರಬೇಕು. ಟಾಲ್‌ಸ್ಟಾಯ್ ಕಾದಂಬರಿಯಲ್ಲಿ ಒಂದೋ ಅನ್ನಾ, ಇಲ್ಲವೇ ಕರೆನಿನ್ ತಪ್ಪಿತಸ್ಥರು! ಕಾಫ್ಕಾನ ಕೆ. ಒಂದೋ ಕ್ರೂರ ನ್ಯಾಯಾಲಯಕ್ಕೆ ಸಿಕ್ಕಿದ ನಿರಪರಾಧಿ, ಇಲ್ಲವೆ ದೈವಿಕ ನ್ಯಾಯಾಲಯದ ಮುಂದೆ ನಿಂತ ಅಪರಾಧಿ. ಆದರೆ ಮನುಷ್ಯನ ಬದುಕು ಹೀಗೆ ಸರಳ ತೀರ್ಮಾನಗಳಿಗೆ ಸಿಕ್ಕಲಾರದು. ಕಾದಂಬರಿ

ಪರಿಶೀಲಿಸುವುದು ಇದನ್ನೇ. ಡಾನ್ ಕ್ವಿಕ್ಸೋಟ್ ಎದುರಿಸುವುದು ಇದ್ದಕ್ಕಿದ್ದಂತೆ ಭಯಂಕರ ನಿಗೂಢವಾದ ಜಗತ್ತನ್ನು ; ಅಲ್ಲಿ ಏಕಮೇವ ಸತ್ಯ ಅನ್ನುವುದು ಅನಂತ ಸಾಪೇಕ್ಷ ಸತ್ಯಗಳಾಗಿ ಒಡೆದು ಹೋಗುವುದನ್ನು ನವಯುಗ ಮತ್ತದರ ಪ್ರತಿಬಿಂಬವಾದ ಕಾದಂಬರಿ ಹುಟ್ಟಿದ್ದು ಹೀಗೆ.

'ಡಾನ್ ಕ್ವಿಕ್ಸೋಟ್ ' ಮುಂತಾದ ಮೊದಮೊದಲ ಐರೋಪ್ಯ ಕಾದಂಬರಿಗಳು ಪ್ರಯಾಣಗಳ ಕತೆಗಳಾಗಿರುತ್ತಿದ್ದವು. ಡಾನ್ ಕಿಕ್ಸೋಟ್ ಎಲ್ಲಿಗೆ ಬೇಕಾದರೂ ಹೋಗಿ ಖುಶಿ ಬಂದಾಗ ಹಿಂದಿರುಗಬಹುದಿತ್ತು. ಕಾಲ ಕಳೆದಂತೆ ಮನುಷ್ಯನ ಪರಿಭ್ರಮಣ ಸ್ವಾತಂತ್ರ್ಯ ಕುಂಠಿತವಾಗುತ್ತಾ ಬಂದದ್ದು ಕಾದಂಬರಿಗಳಲ್ಲಿ ವ್ಯಕ್ತವಾಗುತ್ತದೆ. ಬಾಲ್ಜಾಕ್‌ನ ಕಾದಂಬರಿಯಲ್ಲಿ ಸಾಮಾಜಿಕ ಸಂಸ್ಥೆಗಳು (ಪೊಲೀಸರು, ಕಾನೂನು, ಅಪರಾಧ, ಹಣ, ಸೈನ್ಯ, ರಾಜ್ಯ ಇತ್ಯಾದಿ) ದೂರ ದಿಗಂತವನ್ನು ಹತ್ತಿರ ತಂದಿವೆ - ಭೂದೃಶ್ಯ ಕಟ್ಟಡಗಳ ಹಿಂದೆ ಮರೆಯಾಗುವಂತೆ. ಫ್ಲಾಬೇರ್‌ನ ಕಾದಂಬರಿಯಲ್ಲಿ ಎಮ್ಮಾಬಾವರಿಗೆ ಅವು ಬಂಧನಗಳೇ ಆಗಿ ವ್ಯಕ್ತಿಯ ಅನನ್ಯತೆಯೆಂಬ ಭ್ರಮೆ ಕನಸು, ಹಗಲುಗನಸುಗಳಲ್ಲಿ ಅರಳಲಾರಂಭಿಸುತ್ತದೆ. ಪ್ರಾಪಂಚಿಕ ಅನಂತತೆ ಮಾಯವಾದಂತೆ ಆತ್ಮದ ಅನಂತತೆಯ ಕಲ್ಪನೆ ಅದರ ಸ್ಥಾನವನ್ನು ಆಕ್ರಮಿಸುತ್ತದೆ.

ನಂತರ ಇತಿಹಾಸದ (ಅಂದರೆ ಸರ್ವಶಕ್ತ ಸಮಾಜವೊಂದರ ಅತಿಮಾನವತೆಯ) ಕೈಯಲ್ಲಿ ಸಿಕ್ಕ ಮನುಷ್ಯ ಕನಸು ಕೂಡ ಕಾಣಲಾಗದಂತೆ ಆಗಿ ಅವನ ಯೋಚನೆ ಭಾವನೆಗಳೆಲ್ಲ ಬತ್ತಿ ಹೋಗುವುದನ್ನು ಕಾಫ್ಕಾ ಕಾಣಿಸುತ್ತಾನೆ. ಹೀಗೆ ಜ್ಞಾನವಿಜ್ಞಾನಗಳು ಮರೆತುಬಿಟ್ಟ ಮನುಷ್ಯನ ಇರಸ್ತಿಕೆಯ ಅರ್ಥಶೋಧನೆಯನ್ನು ಕಾದಂಬರಿ ಮಾಡುತ್ತದೆ.('the depreciated legacy of cervantes' ಭಾಗದಿಂದ).

೩

ಕಾಫ್ಕಾನ ಬಗ್ಗೆ ಬರೆದ ಪ್ರತ್ಯೇಕ ಲೇಖನವೊಂದರಲ್ಲಿ ('some where behind') ಕುಂದೇರ ಹೇಳುತ್ತಾನೆ : ಕವಿ (ಕಾದಂಬರಿ ಎಂಬ ಕವಿತೆ ಬರೆಯುವವ ಕೂಡ)ಎಲ್ಲೋ ಹಿಂದೆ ಅಡಗಿದ ಸತ್ಯವನ್ನು ಅನಾವರಣ ಮಾಡದಿದ್ದರೆ -ಈಗಾಗಲೇ ತಿಳಿದಿರುವ ಸತ್ಯದ ಶಂಖವನ್ನೇ ಊದುತ್ತಿದ್ದರೆ ಅವ ಸುಳ್ಳು ಕವಿ. ಯಾನ್ ಸ್ಕಾಚೆಲ್ ಎಂಬ ಕವಿಯ ಸಾಲುಗಳಿವು.

ಕವಿಗಳು ಕವನಗಳನ್ನು ಕಲ್ಪಿಸುವುದಿಲ್ಲ
ಕವನ ಎಲ್ಲೋ ಹಿಂದೆ ಅವಿತಿರುತ್ತೆ
ಅದು ಹಲವು ಕಾಲದಿಂದಲೂ ಅಲ್ಲಿದೆ
ಕವಿ ಅದನ್ನು ಶೋಧಿಸುತ್ತಾನಷ್ಟೆ.

ಕಾಫ್ಕಾ ಶ್ರೇಷ್ಠ ಕವಿ ಯಾಕೆಂದರೆ ಅವನು ಕಾದಂಬರಿಯ ವೈಚಾರಿಕ ಸ್ವಾಯತ್ತತೆಯನ್ನು ಸಾಧಿಸಿದವನು; ತನ್ನ ಕಾಲಕ್ಕಿಂತ ಎಷ್ಟೋ ವರ್ಷಗಳ ನಂತರ ಜಗತ್ತು ಕಾಣಲಿರುವ ಟೊಟಾಲಿಟೇರಿಯನ್ ವ್ಯವಸ್ಥೆಯನ್ನು ಮೊದಲೇ ಊಹಿಸಿ ಚಿತ್ರಿಸಿದವನು. (ಶಿವರಾಮ ಕಾರಂತರ ಬಗ್ಗೆ ಡಿ. ಆರ್. ನಾಗರಾಜ್ ಬರೆದ ಕೆಲವು ಸಾಲುಗಳನ್ನು ಇಲ್ಲಿ ಗಮನಿಸಬಹುದು: "ಅನಕೃ, ಕಟ್ಟೀಮನಿ, ತರಾಸುರಂಥ ಕಾದಂಬರಿಕಾರರು ೧೯೪೭ರ ಹಿಂಚು ಮುಂಚಿನಲ್ಲಿ ಅಪಾರ ವೀರಾವೇಶದ, ತ್ಯಾಗದ, ಬಲಿದಾನದ, ಸಂಭ್ರಮದ ಕಾದಂಬರಿಗಳನ್ನು ಬರೆದಿದ್ದಾರೆ, ಕಾರಂತರು ಆ ಜಗತ್ತನ್ನು ಬಿಟ್ಟು ಬಹುದೂರ ಸರಿದಿದ್ದರು. ಕಾರಂತರ ಮಟ್ಟಿಗೆ ಅದು 'ಮುಗಿದ ಅಧ್ಯಾಯ'ವಾಗಿತ್ತು. ಹೀಗಾಗಿ ಕಾರಂತರ ಭವಿಷ್ಯದರ್ಶಿ ಪ್ರತಿಭೆ ಮುಂದೆ ನಮ್ಮ ರಾಷ್ಟ್ರ ಜೀವನ ಕಂಡ ದುರಂತಗಳನೆಲ್ಲ ಕಂಡರಿಸತೊಡಗಿತ್ತು " - 'ಕನ್ನಡ ಕಾದಂಬರಿ ಪರಂಪರೆ ಮತ್ತು ಕಾರಂತರು' ೧೯೮೩. ಕುಂದೇರ ಇಲ್ಲಿ ಕಾಫ್ಕಾನ ಬಗ್ಗೆ ಹೇಳುವುದು ನಾಗರಾಜ್ ಹೇಳುವ 'ಭವಿಷ್ಯದರ್ಶಿ ಪ್ರತಿಭೆ'ಯನ್ನೇ)

ಜೆಕೊಸ್ಲವಾಕಿಯದಲ್ಲಿ ನಡೆದ ಒಂದು ಸತ್ಯ ಘಟನೆ ಹೀಗಿದೆ:ಪ್ರಾಗ್‌ನ ಒಬ್ಬ ಇಂಜಿನಿಯರ್ ಲಂಡನಿನ ಒಂದು ವೃತ್ತಿ ಸಮ್ಮೇಳನದಲ್ಲಿ ಭಾಗವಹಿಸಿ ಹಿಂದಿರುಗಿದ. ಕಮ್ಯೂನಿಸ್ಟ್ ಪಕ್ಷದ ಅಧಿಕೃತ ಪತ್ರಿಕೆ Rudepravo ದಲ್ಲಿ ಒಂದು ವರದಿ ನೋಡಿದ - 'ಲಂಡನಿನ ಸಮ್ಮೇಳನದಲ್ಲಿ ಭಾಗವಹಿಸಿದ ಒಬ್ಬ ಇಂಜಿನಿಯರ್ ತನ್ನ ಸಮಾಜವಾದೀ ತಾಯಿ ನಾಡಿನ ವಿರುದ್ಧ ಹೀನಾಮಾನವಾಗಿ ಮಾತಾಡಿದ್ದಾನೆ ; ದೇಶಕ್ಕೆ ಮರಳದಿರಲು ತೀರ್ಮಾನಿಸಿದ್ದಾನೆ; ಈ ವರದಿ ಕಂಡು ಇಂಜಿನಿಯರ್ ಭಯಭೀತನಾಗಿ ಪತ್ರಿಕೆಯ ಕಛೇರಿಗೆ ಓಡಿದ. ನನಗೇನೂ ಗೊತ್ತಿಲ್ಲ, ವರದಿ ಬಂದ್ದದ್ದು ಸಚಿವಾಲಯದಿಂದ ಎಂದು ಸಂಪಾದಕ ಹೇಳಿದ. ಇಂಜಿನಿಯರ್ ಸಚಿವಾಲಯದಲ್ಲಿ ವಿಚಾರಿಸಿದಾಗ ಎಲ್ಲೋ ತಪ್ಪಾಗಿರಬೇಕು ಎಂದು ಒಪ್ಪಿಕೊಂಡರು. ಆದರೆ ಪ್ರಮಾದವಾಗಿದೆ ಎಂದು ಪ್ರಕಟಣೆ ನೀಡಲು ನಿರಾಕರಿಸಿದರು. ನೀನು ತಲೆ ಬಿಸಿ ಮಾಡುವುದು ಬೇಡವೆಂದು ಕೂಡ ಹೇಳಿದರು. ಆದರೆ ಇಂಜಿನಿಯರ್ ತಲೆ ಬಿಸಿ ಮಾಡಿಯೇ ಮಾಡಿದ. ತನ್ನ ಮೇಲೆ ಗುಪ್ತ ನಿಗಾ ಇರಿಸಲಾಗಿದೆ ಎಂದು ಕೂಡಾ ಅವನಿಗೆ ತಿಳಿಯಿತು. ಬದುಕು ಅಸಹನೀಯವಾಗಿ ಕೊನೆಗೆ ಅವನು ದೇಶ ಬಿಟ್ಟು ಓಡಿಹೋದ.

ಇಂಥ ಪರಿಸ್ಥಿತಿಯನ್ನು ವರ್ಣಿಸಲು ನಮಗೆ 'ಕಾಫ್ಕನ್' ಎಂಬ ಶಬ್ದ ಮಾತ್ರ ಸಿಗುವುದು. ಯಾವುದೇ ರಾಜಕೀಯ ಅಥವಾ ಮನೋವೈಜ್ಞಾನಿಕ ತತ್ವಗಳು ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ನಮಗೆ ನೆರವಾಗುವುದಿಲ್ಲ.

'ಕಾಫ್ಕನ್' ಎಂದರೇನು?

ಅದರ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಬಹುದು: ಒಂದು - ಕಾಫ್ಕಾನ ಪೂರ್ವದಲ್ಲಿ ವ್ಯವಸ್ಥೆ ಒಂದು ಹೋರಾಟದ ಕಣದಂತೆ ಚಿತ್ರಿತವಾಗುತ್ತಿತ್ತು. ವ್ಯವಸ್ಥೆಯನ್ನು ಒಂದು ಚಕ್ರವ್ಯೂಹವನ್ನಾಗಿ ಕಂಡವನು ಕಾಫ್ಕಾ. ಈ ಚಕ್ರವ್ಯೂಹ ಮನುಷ್ಯ ಸಂವೇದನೆಗಳನ್ನು ಲೆಕ್ಕಿಸುವುದಿಲ್ಲ; ಅದರ ಯಾಂತ್ರಿಕ ನಿಯಮಗಳು ಯಾರಿಗೂ ಅರ್ಥವಾಗುವುದಿಲ್ಲ.

ಎರಡು - ಮನುಷ್ಯನ ಛಾಯಾ ಅಸ್ತಿತ್ವ. ಮನುಷ್ಯನ ಅಸ್ತಿತ್ವ ಒಂದು ಫೈಲಿನಲ್ಲಿ-ಅಥವಾ ಫೈಲಿನ ಒಂದು ತಪ್ಪಿನಲ್ಲಿ ಅಡಗಿರುವಂತ ಸ್ಥಿತಿಯನ್ನು ಕಾಫ್ಕಾನ ಸರ್ವೇಯರ್‌ನಂತೆ ('ದುರ್ಗ'ಕಾದಂಬರಿಯಲ್ಲಿ) ಪ್ರೇಗ್‌ನ ಇಂಜಿನಿಯರ್‌ನಲ್ಲಿಯೂ ಕಾಣಬಹುದು. ಇಂಥ ಸ್ಥಿತಿಯಲ್ಲಿ ಅಗೋಚರವಾದ ಶಕ್ತಿ ದೈವತ್ವದ ಪೀಠಕ್ಕೇರುವ ಸುಳ್ಳು ದೈವಿಕ ಆಯಾಮವನ್ನು ಕಾಣಬಹುದು.

ಮೂರು-ತಪ್ಪಿಗೆ ಶಿಕ್ಷೆ ಎನ್ನುವ ಸಾಮಾನ್ಯ ನಿಯಮಕ್ಕೆ ವಿರುದ್ಧವಾಗಿ ಶಿಕ್ಷೆಯೇ ತಪ್ಪನ್ನು ಹುಡುಕಿಕೊಳ್ಳುವ ವಿಚಿತ್ರ ಸನ್ನಿವೇಶ.'ದ ಟ್ರಯಲ್' ಕಾದಂಬರಿಯಲ್ಲಿ ಕೆ. ತನ್ನ ತಪ್ಪನ್ನು ತಿಳಿಯಲು ಅಲೆದಾಟ, ಆತ್ಮಶೋಧನೆ ಮಾಡಿಕೊಳ್ಳುತ್ತಾನೆ.

ನಾಲ್ಕು -ತಮಾಷೆ. ಪ್ರೇಗ್‌ನ ಇಂಜಿನಿಯರ್‌ನಂತೆ ಕಾಫ್ಕಾ ಸೃಷ್ಟಿಸಿದ ಸನ್ನಿವೇಶಗಳೂ ನಗು ತರಿಸುತ್ತವೆ. 'ದ ಟ್ರಯಲ್' ಕಾದಂಬರಿಯ ಪ್ರಾರಂಭದಲ್ಲಿ ನಾಯಕ ಜೋಸೆಫ್ ಕೆ. ಒಂದು ಬೆಳಿಗ್ಗೆ ಎದ್ದಾಗ ಇಬ್ಬರು ಇನ್‌ಸ್ಪೆಕ್ಟರುಗಳು ಬಂದು ಅವನನ್ನು ಬಂಧಿಸಲಾಗುವುದೆಂದು ತಿಳಿಸುತ್ತಾರೆ. ಕೆ. ತನ್ನದೇನೂ ತಪ್ಪಿಲ್ಲವೆಂದು ಸಮರ್ಥಿಸಿಕೊಳ್ಳತೊಡಗುತ್ತಾನೆ. ಈ ಪ್ರಸಂಗವನ್ನು ಕಾಫ್ಕಾ ಮಿತ್ರರಿಗೆ ಓದಿ ಹೇಳಿದಾಗ ಅವರೂ, ಅವನೂ ಬಿದ್ದು ಬಿದ್ದು ನಕ್ಕರಂತೆ.

ತಮಾಷೆಯಲ್ಲಿ ಅಂತರ್ಗತವಾಗಿರುವ ದುರಂತಕ್ಕೆ ನಮ್ಮನ್ನು ಒಯ್ಯುವುದೇ ಕಾಫ್ಕಾನ ಹಾಸ್ಯದ ರೀತಿ. ಇಲ್ಲಿ ದುರಂತ ತಮಾಷೆಯ ಜತೆ ಜತೆಯಲ್ಲಿರುವಂಥದ್ದಲ್ಲ. ದುರಂತವನ್ನು ಬೀಜದಲ್ಲಿಯೇ ಹುಟ್ಟಡಗಿಸಿ, ಸಂತ್ರಸ್ತರಿಗೆ ದುರಂತದ ವೈಭವವನ್ನು ಅನುಭವಿಸುವ ಸಮಾಧಾನವನ್ನೂ ಕೊಡದಿರುವಂಥದ್ದು. ಪ್ರೇಗ್‌ನ ಇಂಜಿನಿಯರ್ ದೇಶ ಭ್ರಷ್ಟನಾಗುತ್ತಾನೆ. ಎಲ್ಲರೂ ನಗಾಡುತ್ತಾರೆ!

ಕಾಫ್ಕಾ ತನ್ನ ತಂದೆಯ ಅಧಿಕಾರ ದರ್ಪದಲ್ಲಿ ಟೊಟಾಲಿಟೇರಿಯನ್ ವ್ಯವಸ್ಥೆಯ ಹಿಂಸೆಯನ್ನು ಅನುಭವಿಸಿದ್ದರಿಂದಲೇ ಅವನು 'ಎಲ್ಲೋ ಹಿಂದೆ ಅವಿತಿದ್ದ' ಸತ್ಯವನ್ನು ಕಾಣಲು ಸಾಧ್ಯವಾಯಿತೆಂದು ಕುಂದೇರ ತಿಳಿಯುತ್ತಾನೆ. ಕೌಟುಂಬಿಕ ನೆಲೆಯಲ್ಲಿ ಅಣುರೂಪದಲ್ಲಿ ಆಗುವುದೇ ಸಮಾಜದಲ್ಲಿ ಬೃಹದಾಕಾರವಾಗಿ ವ್ಯಕ್ತವಾಗುತ್ತದೆ.

ಕುಂದೇರನ 'ಇರಸ್ತಿಕೆಯ ಅಸಹನೀಯ ಲಘುತ್ವ' ಕಾದಂಬರಿಯಿಂದ ಇದಕ್ಕೆ ಒಂದು ಉದಾಹರಣೆ ಕೊಡಬಹುದು. ಯಾನ್ ಪ್ರೊಚಾಜ್ಕ ಜೆಕ್ ಕಾದಂಬರಿಕಾರ. ರಷ್ಯನ್ನರನ್ನು ತೀವ್ರವಾಗಿ ವಿರೋಧಿಸುತ್ತ ಬಂದವನು. ಅವನ ವಿರುದ್ಧ ರಷ್ಯನ್ನರು ಪತ್ರಿಕಾ ಸಮರ ಹೂಡಿದರೆ ಅವನು ಇನ್ನಷ್ಟು ಜನಪ್ರಿಯನಾದ. ಅವನು ಒಂದು ಸಲ ತನ್ನ ಮಿತ್ರ ಪ್ರೊಫೆಸರ್ ಒಬ್ಬನೊಡನೆ ಖಾಸಗಿಯಾಗಿ ಮಾತಾಡುವಾಗ ಮಿತ್ರರನ್ನು, ಜೆಕ್ ಅಧ್ಯಕ್ಷನನ್ನು ತಮಾಷೆ ಮಾಡುತ್ತಾನೆ. ಅದನ್ನು ರಷ್ಯನ್ ಗೂಢಚಾರರು ಧ್ವನಿ ಮುದ್ರಿಸಿಕೊಳ್ಳುತ್ತಾರೆ. ನಂತರ ಅದನ್ನು ರೇಡಿಯೋದಲ್ಲಿ ಧಾರವಾಹಿಯಾಗಿ ಪ್ರಸಾರ ಮಾಡಲಾಗುತ್ತದೆ. ಆಮೇಲೆ ಪ್ರೊಚಾಜ್ಕ ಜನರಿಂದ ತೀವ್ರವಾಗಿ ದ್ವೇಷಿಸಲ್ಪಡುತ್ತಾನೆ.

ಇದೊಂದು ಪೂರ್ವ ನಿದರ್ಶನವಿಲ್ಲದ ಸಂಗತಿ ಎಂದು ಟಾಮಸ್ (ಕಾದಂಬರಿಯ ಒಂದು ಪಾತ್ರ) ಹೇಳುತ್ತಾನೆ.

ಪೂರ್ವ ನಿದರ್ಶನವಿದೆ ಎಂದು ಟೆರೆಸ (ಇನ್ನೊಂದು ಪಾತ್ರ) ಹೇಳುತ್ತಾಳೆ.

ಅವಳು ಹದಿನಾಲ್ಕು ವರ್ಷದವಳಾಗಿರುವಾಗ ಗುಟ್ಟಿನಲ್ಲಿ ದಿನಚರಿ ಬರೆದು ಅಟ್ಟದಲ್ಲಿ ಅಡಗಿಸಿಡುತ್ತಿದ್ದಳು. ಅವಳ ತಾಯಿಗೆ ಅದು ಸಿಕ್ಕಿತು. ಊಟದ ಸಮಯದಲ್ಲಿ ಎಲ್ಲರೂ ಸೇರಿದ್ದಾಗ ತಾಯಿ "ಎಲ್ಲರೂ ಕೇಳಿ" ಎಂದು ದಿನಚರಿಯ ವಾಕ್ಯ ವಾಕ್ಯಗಳನ್ನು ಓದಿ ತಾನೂ ನಕ್ಕು ಉಳಿದವರೂ ನಗುವಂತೆ ಮಾಡಿದಳು.

ಜೆಕ್ ಕಾದಂಬರಿಕಾರನ ಆಂತರಂಗಿಕ ಬದುಕಿನ ಮೇಲೆ ದಾಳಿ ಸಾರ್ವಜನಿಕ ನೆಲೆಯಲ್ಲಿ ಆಗಿದ್ದರೆ ಟೆರೆಸಳ ಮಟ್ಟಿಗೆ ಅದು ಕೌಟುಂಬಿಕ ನೆಲೆಯಲ್ಲಿ ನಡೆದಿತ್ತು. ಕೌಟುಂಬಿಕ ನೆಲೆಯಲ್ಲಿ ಸಣ್ಣ ಮಟ್ಟದಲ್ಲಿ ನಡೆಯುವುದೇ ಸಾರ್ವಜನಿಕ ನೆಲೆಯಲ್ಲಿ ದೊಡ್ಡ ಮಟ್ಟದಲ್ಲಿ ನಡೆಯುತ್ತದೆ ಎನ್ನುವುದನ್ನು ಕುಂದೇರ ಇಲ್ಲಿ ಸೂಚಿಸಿದ್ದಾನೆ.

೪

ಕಾದಂಬರಿಯ ಪ್ರಕಾರ ತನ್ನ ಸಾಧ್ಯತೆಗಳನ್ನು ಬರಿದು ಮಾಡಿಕೊಂಡಿರುವುದರಿಂದ ಅವಸಾನ ಹೊಂದಲಿದೆಯೆ ?

ಕುಂದೇರನ ಪ್ರಕಾರ ಇನ್ನೂ ಕೆಲವು ಸಾಧ್ಯತೆಗಳು ಕಾದಂಬರಿ ಪ್ರಕಾರಕ್ಕೆ ಉಳಿದುಕೊಂಡಿವೆ. ಅವು ಮುಖ್ಯವಾಗಿ: ಒಂದು-ಚೆಲ್ಲಾಟದ ಸಾಧ್ಯತೆ. ೧೮ನೆ ಶತಮಾನದ ಲಾರೆನ್ಸ್ ಸ್ಟರ್ನ್‌ನ Tristram Shandy ಮತ್ತು ಡೆನಿಸ್ ಡಿಡೆರೋನ Jacques le fataliste ಕಾದಂಬರಿಗಳಲ್ಲಿ ನಿರೂಪಣೆ

ಆಟವಾಗಿದೆ, ಲಘುತ್ವದ ತುತ್ತ ತುದಿಗೇರಿದೆ. ನಂತರದ ಕಾದಂಬರಿಗಳು ನೈಜತೆ, ಸುಸಂಬದ್ಧತೆ, ಕಾಲಾನುಕ್ರಮಗಳಿಗೆ ಗಂಟು ಬಿದ್ದು ಹಲವು ಸಾಧ್ಯತೆಗಳಿಗೆ ಎರವಾದವು.

ಎರಡು - ಕನಸಿನ ಸಾಧ್ಯತೆ. ಕಾಫ್ಕಾ ನಿದ್ರೆಯಲ್ಲಿದ್ದ ಕಲ್ಪನಾವಿಲಾಸವನ್ನು ಒಮ್ಮೆಲೇ ಎಚ್ಚರಿಸಿದ್ದರಿಂದ ಕಾದಂಬರಿಯು ಕನಸಿನಂತೆ ಕಲ್ಪನಾ ಶಕ್ತಿ ಸ್ಫೋಟಗೊಳ್ಳಬಹುದಾದ ಅಭಿವ್ಯಕ್ತಿ ಮಾಧ್ಯಮ ಎಂದು ತಿಳಿಯಿತು. ವಾಸ್ತವವಾದೀ ನಿರೂಪಣೆಯಿಂದ ತಪ್ಪಿಸಿಕೊಳ್ಳಲು ಇದೂ ಒಂದು ದಾರಿ.

ಲೌಕಿಕ ಕಾಲದ ಪರಿಕಲ್ಪನೆಯನ್ನು ಮೀರುವ ಅವಕಾಶವೂ ಕಾದಂಬರಿಗಿದೆ ಎಂದು ಕುಂದೇರ ಸೂಚಿಸುತ್ತಾನೆ.

ಸಾಧ್ಯತೆಗಳು ಉಳಿದಿದ್ದರೂ ಕಾದಂಬರಿ ಪ್ರಕಾರ ಸಾಯಬಹುದು. ರಷ್ಯಾದಲ್ಲಿ ಕ್ರಾಂತಿಯಾದ ನಂತರ ಕಾದಂಬರಿ ಸತ್ತಿದೆ. ಟೊಟಾಲಿಟೇರಿಯನ್ ವ್ಯವಸ್ಥೆಯಲ್ಲಿ ಸಾಪೇಕ್ಷತೆಗೆ, ಸಂಶಯಕ್ಕೆ, ಪ್ರಶ್ನೆಗೆ ಎಡೆಯಿಲ್ಲ. ತದ್ವಿರುದ್ಧವಾಗಿ ಕಾದಂಬರಿಯ ಸತ್ವ ಇರುವುದು ಅವುಗಳಲ್ಲಿಯೇ. ಹಾಗಾಗಿ ಟೊಟಾಲಿಟೇರಿಯನ್ ವ್ಯವಸ್ಥೆಯಲ್ಲಿ ಕಾದಂಬರಿ ಸಾಯುತ್ತದೆ.

ಅಂಥ ವ್ಯವಸ್ಥೆಯಲ್ಲೂ ದಂಡಿಯಾಗಿ ಕಾದಂಬರಿಗಳು ಬಂದರೂ, ಅವು 'ಕಾದಂಬರಿಯ ಇತಿಹಾಸ' ದಿಂದ ಹೊರಗುಳಿಯುವ ಕಾದಂಬರಿಗಳು. ಈಗಾಗಲೇ ಎಲ್ಲರೂ ಹೇಳಿರುವ ಸಂಗತಿಗಳನ್ನೇ ಗಟ್ಟಿ ಮಾಡುವ ಕೆಲಸವನ್ನಷ್ಟೇ ಅವು ಮಾಡುತ್ತವೆ. ('The depreciated legacy of cervantes' ಭಾಗದಿಂದ).

ದೇವರ ನಗುವಿನಿಂದ ಹುಟ್ಟಿದ ಕಾದಂಬರಿ ಕಲೆಯನ್ನು ಕೊಲ್ಲುವ ಮೂರು ತಲೆಯ ವೈರಿಯೊಂದಿದೆ. ನಗಲಾರದವ (Agelaste), ಸ್ವೀಕರಿಸಿದ ವಿಚಾರಗಳ ಅಚಿಂತನೆ ಮತ್ತು ಕಿಚ್ (Kitsch)-ಇವೇ ಅದರ ಮೂರು ತಲೆಗಳು. ಅವೆಲ್ಲ ನಿಜವಾಗಿ ಒಂದೇ. ಸ್ವೀಕರಿಸಿದ ವಿಚಾರಗಳ ಪೆದ್ದುತನವನ್ನು ಸೌಂದರ್ಯ-ಭಾವನೆಗಳ ಭಾಷೆಗೆ ಅನುವಾದಿಸುವುದು ;ಎಲ್ಲರನ್ನು ಸಂತೋಷಪಡಿಸಬೇಕೆನ್ನುವುದು ಕಿಚ್ ಮನೋಭಾವ. ('Jerusalem Address' ನಿಂದ).

ಙ

'ಪ್ಯಾರಿಸ್ ರಿವ್ಯೂ' ಪತ್ರಿಕೆಗಾಗಿ ಕ್ರಿಶ್ಚಿಯನ್ ಸಾಲ್ಮಾನ್ ಮಿಲನ್ ಕುಂದೇರನನ್ನು ಸಂದರ್ಶಿಸಿ ಅವನೊಂದಿಗೆ ಚರ್ಚಿಸಿದ. ಆ ಸಂದರ್ಶನ ಈ ಪುಸ್ತಕದಲ್ಲಿ ಎರಡು ಭಾಗಗಳಾಗಿ ('Dialogue on

the Art of the Novel' ಮತ್ತು 'Dialogue on the Art of Composition') ಪ್ರಕಟವಾಗಿದೆ. ಈ ಸಂದರ್ಶನದಲ್ಲಿ ಕುಂದೇರ ಮುಖ್ಯವಾಗಿ ತನ್ನ ಕಾದಂಬರಿಗಳ ಬಗ್ಗೆ ಹೇಳಿದ್ದಾನೆ.

ಕುಂದೇರ ತನ್ನ ಪಾತ್ರಗಳ ಅಂತರಂಗದೊಳಗಿನ ಯೋಚನೆಗಳನ್ನು ಚಿತ್ರಿಸುವುದಿಲ್ಲ. ಪಾತ್ರಗಳ ಕ್ರಿಯೆ, ಅವುಗಳ ಅರ್ಥಗಳನ್ನು ಹೊರಗಿನ ದೃಷ್ಟಿಕೋನದಿಂದ ಪರಿಶೀಲಿಸುತ್ತಾನೆ. ಪಾತ್ರಗಳ ಅಸ್ತಿತ್ವ ಸಂಕೇತಗಳನ್ನು ಕೆಲವು ಪ್ರಮುಖ ಶಬ್ದಗಳ ಮೂಲಕ ಹಿಡಿಯಲು ಪ್ರಯತ್ನಿಸುತ್ತಾನೆ. (ಉದಾಹರಣೆಗೆ ಟೆರೆಸಾ ಎಂಬ ಪಾತ್ರದ ಅಸ್ತಿತ್ವ ಸಂಕೇತಗಳು- Body, soul, vertigo, weekness, idyll, ಮತ್ತು Paradist). ಆ ಶಬ್ದಗಳನ್ನು ವ್ಯಾಖ್ಯಾನಿಸಲು ಪ್ರಯತ್ನಿಸುತ್ತಲೂ ಪಾತ್ರಗಳ ಬಗೆಗಿನ ಅರಿವನ್ನು ಹೆಚ್ಚಿಸುತ್ತಾನೆ.

ಕಾದಂಬರಿ ವಾಸ್ತವವನ್ನು ಪರಿಶೀಲಿಸುವುದಿಲ್ಲ; ಅಸ್ತಿತ್ವವನ್ನು ಪರಿಶೀಲಿಸಬೇಕು ಎಂದು ಕುಂದೇರ ಹೇಳುತ್ತಾನೆ. ಅಂದರೆ ಕಾದಂಬರಿಕಾರ ಸೃಷ್ಟಿಸುವ ಪಾತ್ರಗಳು ಮನುಷ್ಯನ ಅಸ್ತಿತ್ವ ಸಾಧ್ಯತೆಗಳನ್ನು ತೋರಿಸಬೇಕು. ಹೀಗೆ ಹೇಳುವಾಗ ಕಾದಂಬರಿಕಾರ ಐತಿಹಾಸಿಕ ಸನ್ನಿವೇಶಗಳನ್ನು ಉಪಯೋಗಿಸಿಕೊಳ್ಳಬಾರದು ಎಂದು ಕುಂದೇರನ ಅಭಿಪ್ರಾಯವಲ್ಲ. ಅಂಥ ಸನ್ನಿವೇಶಗಳು ಅಸ್ತಿತ್ವದ ಸಾಧ್ಯತೆಗಳ ಬಗ್ಗೆ ನಮ್ಮ ಅರಿವು ಹೆಚ್ಚಿಸುವಂತೆ ಇರಬೇಕು, ಅಥವಾ ಉಪಯೋಗಿಸಲ್ಪಟ್ಟಿರಬೇಕು. ('ಇರಸ್ತಿಕೆಯ ಅಸಹನೀಯ ಲಘುತ್ವ' ಕಾದಂಬರಿಯಲ್ಲಿ ಕುಂದೇರ ಜೆಕೊಸ್ಲವಾಕಿಯಾದ ಮೇಲೆ ರಷ್ಯಾದ ಆಕ್ರಮಣವನ್ನು ಉಪಯೋಗಿಸಿಕೊಂಡಿದ್ದಾನೆ ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು).

ನಿರೂಪಣೆಯ ಕ್ರಮದ ಬಗ್ಗೆ ಮಾತನಾಡುವಾಗ ಕುಂದೇರ 'Polyphony' ಎಂಬ ಸಂಗೀತ ಶಾಸ್ತ್ರದ ಪರಿಕಲ್ಪನೆಯನ್ನು ಉಪಯೋಗಿಸುತ್ತಾನೆ. ನಿರೂಪಣೆ ಸರಳರೇಖೆಯಂತೆ ಹೋಗಬಾರದು. ಹಲವು ವಾದ್ಯಗಳು, ಸ್ವರಗಳು ಶೃತಿ ಸೇರುವಂತೆ ಇರುವುದು Polyphonic ನಿರೂಪಣೆ. ಯಾವುದಾದರೂ ಒಂದು ಸ್ವರ ಗಟ್ಟಿಯಾದರೆ ಅಪಸ್ವರ ಬರುತ್ತದೆ.

ಹರ್ಮನ್ ಬ್ರ್ಯಾಶ್ ಎಂಬ ಆಸ್ಟ್ರಿಯನ್ ಮೂಲದ ಕಾದಂಬರಿಕಾರನ 'ದ ಸ್ಲೀಪ್ ವಾಕರ್ಸ್' ಎಂಬ ಕಾದಂಬರಿಯ ಬಗ್ಗೆ ಹೇಳುವಾಗಲೂ ('Notes Inspired by "The Sleepwalkers") ಕುಂದೇರ ಶೃತಿಯ ಬಗ್ಗೆ ಮಾತನಾಡುತ್ತಾನೆ. ಕಾದಂಬರಿಯಲ್ಲಿ ಕಾವ್ಯ, ವರದಿ, ಪ್ರಬಂಧ, ಸಣ್ಣ ಕಥೆಗಳೆಲ್ಲ ಸೇರಿರಬಹುದು. ಆದರೆ ಒಟ್ಟಿನಲ್ಲಿ ಶೃತಿ ಕೆಡಬಾರದು ಎನ್ನುವುದು ಮುಖ್ಯ. ೧೯ ನೆ ಶತಮಾನದಲ್ಲಿ ಶೃತಿಯ ತಂತ್ರ ಹುಟ್ಟಿಕೊಳ್ಳುವ ಮೊದಲು 'ಪೆಟ್ಟಿಗೆ ತಂತ್ರ' (ಕತೆಯೊಳಗೆ ಕತೆ)ಇತ್ತು.

ಕಾದಂಬರಿಯ ವಿವಿಧ ಭಾಗಗಳನ್ನು ಸೇರಿಸಲು ಥೀಮಿನ ಸಂಬಂಧ ಸಾಕಾಗುತ್ತದೆಂದು ಕುಂದೇರ ಹೇಳುತ್ತಾನೆ. ಆದರೆ ಪಾಲಿಫೋನಿಕ್ ತಂತ್ರ ಯಶಸ್ವಿಯಾಗಬೇಕಾದರೆ ಬೇರೆ ಬೇರೆ ಎಳೆಗಳಿಗೂ ಸಮಾನ ಪ್ರಾಮುಖ್ಯವಿದ್ದು ಪ್ರತಿ ಎಳೆಗಳಿಗೂ ವೈಯಕ್ತಿಕತೆಯು ಇರಬೇಕು. ಸಂಗೀತ ಕಚೇರಿಯಲ್ಲಿ ಬಳಸುವ ಹಲವು ವಾದ್ಯಗಳು ಶೃತಿ ಸೇರಿಯೂ ತಮ್ಮ ಸ್ವಂತ ಸ್ವರವನ್ನು ಪ್ರತ್ಯೇಕವಾಗಿ ಕೇಳಿಸುವ ಹಾಗೆ.

ಕುಂದೇರನ 'ಇರಸ್ತಿಕೆಯ ಅಸಹನೀಯ ಲಘುತ್ವ' ಕಾದಂಬರಿಯಿಂದ ಒಂದು ಉದಾಹರಣೆ ಕೊಡಬಹುದು (ಈ ಉದಾಹರಣೆಯನ್ನು ಕೊಟ್ಟದ್ದು ಅವನೇ):ಅದರ ಆರನೇ ಭಾಗ 'ಕಿಚ್' ಕುರಿತ ಪ್ರಬಂಧವಾಗಿದೆ. ಕಾದಂಬರಿಯ ಪಾತ್ರಗಳನ್ನು ಅಲ್ಲಿ ಉದಾಹರಣೆಗಳಂತೆ ಬಳಸಿಕೊಳ್ಳಲಾಗಿದೆ. ಆದರೆ ಕಿಚ್ ಎಂಬ ಪ್ರಬಂಧಕ್ಕೆ ಕಾದಂಬರಿಯ ಹೊರತಾಗಿ ಒಂದು ಪ್ರತ್ಯೇಕ ಅಸ್ತಿತ್ವವನ್ನು ಕಲ್ಪಿಸಿಕೊಳ್ಳಲಾಗದು.

ತನ್ನ ಕಾದಂಬರಿಗಳನ್ನು ಎರಡು ಸ್ತರಗಳಲ್ಲಿ ರಚಿಸಿರುವುದಾಗಿ ಕುಂದೇರ ಹೇಳುತ್ತಾನೆ. ಮೊದಲು ಕಾದಂಬರಿಯ 'ಕತೆ'ಯನ್ನು ರಚಿಸಿಕೊಂಡು, ನಂತರ ಅವರ ಥೀಮ್‌ಗಳನ್ನು ಬೆಳಸುವುದು ಅವನ ಕ್ರಮ.ಇದರಲ್ಲಿ ಒಂದು ಮಾರ್ಗಾಂತರವೂ ಇರಬಹುದು. ಅದು ಹೇಗೆಂದರೆ ಕತೆಯನ್ನು ಬಿಟ್ಟು ಥೀಮನ್ನು ಬೆಳಸಿಕೊಂಡು ಹೋಗುವುದು. (ಉದಾ:ಕಿಚ್ ಪ್ರಬಂಧ).ಥೀಮ್ ಅಂದರೆ 'ಅಸ್ತಿತ್ವದ ಅರ್ಥ ಪರಿಶೀಲನೆ'ಎಂದು ಕುಂದೇರ ಹೇಳುತ್ತಾನೆ.

ಕಾದಂಬರಿಯ ವಾಸ್ತು ತಂತ್ರದ ಬಗ್ಗೆ ಹೇಳುವಾಗ ಕುಂದೇರ ಮತ್ತೆ ಸಂಗೀತದ ಉದಾಹರಣೆ ಕೊಡುತ್ತಾನೆ. ಕುಂದೇರ ಸ್ವತಃ ಸಂಗೀತ ಶಾಸ್ತ್ರಜ್ಞ. ಅವನ ಕಾದಂಬರಿಗಳೆಲ್ಲ ಹೆಚ್ಚಾಗಿ ಏಳು ಭಾಗಗಳನ್ನು ಹೊಂದಿರುವುದಕ್ಕೂ ಸಂಗೀತ ರಚನೆಗಳಲ್ಲಿ ಏಳು ಭಾಗಗಳಿರುವುದಕ್ಕೂ ಸಂಬಂಧವಿದೆಯಂತೆ. ಸ್ವತಃ ಕುಂದೇರ ರಚಿಸಿದ ಒಂದು ಸಂಗೀತ ರಚನೆಗೂ ಏಳು ಭಾಗಗಳಿದ್ದವಂತೆ. ಸಂಗೀತ ಕೃತಿಯ ಭಾಗಗಳಲ್ಲಿ ಹೆಚ್ಚಾಗಿ ನಿಧಾನ -ವೇಗ - ನಿಧಾನ -ವೇಗ (ದುಃಖ-ಸಂತೋಷ ಭಾವನೆಗಳನ್ನು ಹುಟ್ಟಿಸುವಂತೆ)ನಡೆಗಳಿರುತ್ತವೆ. ಕಾದಂಬರಿಯ ಭಾಗಗಳು ಹೀಗೆಯೇ ದೊಡ್ಡ ಭಾಗ -ಸಣ್ಣ ಭಾಗಗಳಾಗಿರಬೇಕು; ಆದರೆ ಅರ್ಥಪೂರ್ಣವಾಗಿ ಏಕತಾನತೆಯನ್ನು ಮುರಿಯಬೇಕು ಎಂದು ಕುಂದೇರನ ಅಭಿಪ್ರಾಯ.

ಏಕತಾನತೆಯನ್ನು ಮುರಿಯುವ ಬಗ್ಗೆ ಮಾತನಾಡುವಾಗ ಚೋಪಿನ್ ಸೋನಾಟಾದಲ್ಲಿ ನಿಧಾನಗತಿಯ ಭಾಗವೊಂದರ ನಂತರ ವಿಚಿತ್ರವಾದ ದೀರ್ಘ-ಹ್ರಸ್ವ ಸ್ವರಗಳ ಮಾಧುರ್ಯವಿಲ್ಲದ ಭಾಗವೊಂದು ಬಂದದ್ದನ್ನು ಕುಂದೇರ ಶ್ಲಾಘಿಸುತ್ತಾನೆ.

ತನ್ನ ಕೃತಿಗಳ ಬಗ್ಗೆ ಕುಂದೇರ ಹೇಳುವ ಇನ್ನೊಂದು ಮುಖ್ಯವಾದ ವಿಷಯ ಅಸಂಭವನೀಯತೆಯನ್ನು ಕಾದಂಬರಿಯಲ್ಲಿ ತರುವುದು. ಸರ್ವಾಂಟೀಸನ ಕಾದಂಬರಿಯಲ್ಲಿ ಒಂದು ಪ್ರಯಾಣಿಕರ ಮನೆ ಬರುತ್ತದೆ. ಅಲ್ಲಿ ಡಾನ್ ಕ್ವಿಕ್ಸೋಟ್, ಸ್ಯಾಂಕೋ, ಪಾದ್ರಿ, ಕ್ಷೌರಿಕ, ಕಾರ್ಡೇನಿಯೋ, ಲುಸಿಂಡಾ, ಡಾನ್ ಫೆರ್ನಾಂಡೋ, ಡೊರೆಟಿಯಾ, ಒಬ್ಬ ಆಫೀಸರ್, ಅವನ ತಮ್ಮ, ಅವನ ಮಗಳು, ಅವಳ ಪ್ರಿಯಕರ, ಪ್ರಿಯಕರನನ್ನು ಓಡಿಸಿಕೊಂಡು ಬರುವ ಅವನ ತಂದೆಯ ಸೇವಕರು..... ಹೀಗೆ ಅನೂಹ್ಯವಾಗಿ ಕಾಕತಾಳೀಯವಾಗಿ ಪಾತ್ರಗಳು ಒಟ್ಟು ಸೇರುತ್ತಾರೆ. ಆ ಕಾಲದ ಕಾದಂಬರಿಗಳಿಗೆ ವಾಸ್ತವವಾದೀ ಭ್ರಮೆ ಇದ್ದಿರಲಿಲ್ಲವಾಗಿ ಸರ್ವಾಂಟೀಸ್‌ನಲ್ಲಿ ಈ ಅಸಂಭವನೀಯತೆ ಪ್ರಶ್ನಾರ್ಹವಲ್ಲ.

ವಾಸ್ತವವಾದಿ ಭ್ರಮೆಯ ಬಗ್ಗೆ ನಮ್ಮ ಲೇಖಕ ರಾಮಚಂದ್ರ ದೇವ ಹೇಳುವ ಮಾತುಗಳನ್ನು ಇಲ್ಲಿ ಹೋಲಿಕೆಗಾಗಿ ಸ್ವಲ್ಪ ವಿಸ್ತಾರವಾಗಿ ಉದ್ಧರಿಸುತ್ತಿದ್ದೇನೆ. ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ರಾಮಚಂದ್ರ ದೇವರು ಮಂಡಿಸಿದ ಪ್ರಬಂಧದ ಭಾಗಗಳಿವು:

ಹತ್ತೊಂಬತ್ತನೆ ಶತಮಾನದವರೆಗಿನ ಭಾರತೀಯ ಬರವಣಿಗೆಯ ಲಕ್ಷಣಗಳನ್ನು ಮುಖ್ಯವಾಗಿ ಹೀಗೆ ವಿವರಿಸಬಹುದು.

ಒಂದು:ಈ ಕೃತಿಗಳು ವಾಸ್ತವದ ಬಗ್ಗೆ ತಳೆಯುವ ಧೋರಣೆ ಇಪ್ಪತ್ತನೆಯ ಶತಮಾನದ ಕನ್ನಡದ ಮುಖ್ಯ ಕತೆ ಕಾದಂಬರಿಗಳು ತಳೆಯುವ ಧೋರಣೆಗಿಂತ ಭಿನ್ನವಾದದ್ದು. ಕಣ್ಣಿಗೆ ಕಾಣುವ ಹೊರಗಿನ ವಾಸ್ತವ ಜಗತ್ತು ನಿಜವಾಗಿರುವಂತೆ ಮನಸ್ಸಿನೊಳಗೆ ಹುಟ್ಟುವ ಭ್ರಮೆಯ,ಕನಸಿನ ಜಗತ್ತು ಕೂಡಾ ನಿಜ ಎಂಬುದು ಈ ಕೃತಿಗಳ ನೆಲೆಯಾಗಿದೆ. ಆದರೆ ಇದು ಭ್ರಮೆಯ ಜಗತ್ತೋ, ಬಾಹ್ಯದಲ್ಲಿರುವ ವಾಸ್ತವ ಜಗತ್ತೋ ಎಂಬ ವಿಂಗಡಣೆ ಮಾಡಿದ ರೀತಿ ಈ ಬರವಣಿಗೆಗಳ ಕ್ರಮವಿದೆ. ರಾವಣನಿಗೆ ಹತ್ತು ತಲೆ ಇದ್ದದ್ದು, ಅರ್ಜುನ ಬಾಣಗಳಿಂದ ಸ್ವರ್ಗಕ್ಕೆ ಸೇತುವೆ ಕಟ್ಟಿ ಐರಾವತವನ್ನು ನೆಲಕ್ಕಿಳಿಸಿಕೊಂಡದ್ದು, ತ್ರಿವಿಕ್ರಮನ ಹೆಗಲಿಗೆ ನೇತು ಬಿದ್ದ ಶವ ಮಾತಾಡಿದ್ದು ನಿಜವೆಂದು ಒಪ್ಪಿಕೊಂಡು ಈ ಕೃತಿಕಾರರು ಕೃತಿ ರಚಿಸುವರು. ಅಂದರೆ, ಹತ್ತೊಂಭತ್ತನೆ ಶತಮಾನದ ಉತ್ತರಾರ್ಧದ ನಂತರದ ಕೃತಿಗಳು ತರ್ಕ ಸಾಧ್ಯ ವಿವರಗಳ ಸಂಯೋಜನೆಯಿಂದ ರಚಿತವಾದವು. ಅದಕ್ಕಿಂತ ಹಿಂದಿನ ಪ್ರಾಚೀನ ಭಾರತೀಯ ಸಾಹಿತ್ಯದ ಕೃತಿಗಳು ವಿವರಗಳ ತರ್ಕ ಸಾಧ್ಯತೆಯನ್ನು ಅಲ್ಲ ಗಳೆದು

ರಚಿತವಾದವು. ಭಾರತೀಯ ಸಾಹಿತ್ಯದಲ್ಲಿ ಮೂಲಭೂತವಾಗಿ ಇವು ಎರಡು ಮತ್ತು ಎರಡೇ ರೀತಿಯ ಬರವಣಿಗೆಗಳಿವೆ. ಪ್ರಗತಿಶೀಲ, ನವ್ಯ, ಬಂಡಾಯ ಇತ್ಯಾದಿ ಬರವಣಿಗೆಯ ರೀತಿಗಳು ತರ್ಕ ಸಾಧ್ಯ ವಿವರಗಳಿಂದ ಕಟ್ಟಿದ ಕೃತಿಗಳಿಲ್ಲೇ ಇರುವ ಉಪಭೇದಗಳೇ ಹೊರತು ಮೂಲ ಭೂತವಾಗಿ ಭಿನ್ನ ಅಲ್ಲ. ಇವುಗಳ ಇತಿಹಾಸ ಸುಮಾರು ನೂರೈವತ್ತು ವರ್ಷಗಳದ್ದು. ವಿವರಗಳ ತರ್ಕ ಸಾಧ್ಯತೆಯನ್ನು ಅಲ್ಲಗಳೆದು ಬರೆದ ಬರವಣಿಗೆಗಳ ಇತಿಹಾಸ ಸುಮಾರು ಎರಡು ಸಾವಿರ ವರ್ಷಗಳದ್ದು.

ಈ ಎರಡು ರೀತಿಗಳಲ್ಲಿರುವ ವ್ಯತ್ಯಾಸವನ್ನು ನಾನು ಈ ಹಿಂದೆಯೇ ಸೂಚಿಸಿದ ಒಂದು ಉದಾಹರಣೆ ಮೂಲಕ ಸ್ಪಷ್ಟಪಡಿಸಬಹುದು. ಅನಂತಮೂರ್ತಿಯವರು ತಮ್ಮ 'ಸೂರ್ಯನ ಕುದುರೆ' ಎಂಬ ಕತೆಯಲ್ಲಿ ಕೊನೆಗೆ ವೆಂಕಟಕೃಷ್ಣ ಜೋಯಿಸ ಸೂರ್ಯನ ಕುದುರೆ ಎಂಬ ಮಿಡತೆಯೊಂದಿಗೆ ಮಾನಸಿಕ ತಾದಾತ್ಮ್ಯ ಹೊಂದಿದ ಎಂದು ಬರೆಯುತ್ತಾರೆ. ವೆಂಕಟಕೃಷ್ಣನಿಗೂ ಸೂರ್ಯನ ಕುದುರೆಗೂ ಇರುವ ಸಾಮ್ಯ ತೋರಿಸಲು, ಲೇಖಕರು, ವೆಂಕಟಕೃಷ್ಣ ನಿಂತ ರೀತಿ ಸೂರ್ಯನ ಕುದುರೆ ನಿಂತ ರೀತಿಯಂತಿತ್ತು ಎಂದು ಸಾದೃಶ್ಯ ವಿವರಗಳ ಆಶ್ರಯ ಪಡೆಯುತ್ತಾರೆ. ಇದೇ ಕತೆಯನ್ನು ವಡ್ಡಾರಾಧನೆಕಾರ ಬರೆದಿದ್ದರೆ ಹೇಗೆ ಬರೆಯುತ್ತಿದ್ದ ಊಹಿಸಿ. ಆತ ವೆಂಕಟಕೃಷ್ಣ ಸೂರ್ಯನ ಕುದುರೆಯೆಂಬ ಮಿಡತೆಯಾಗಿ ಮಾರ್ಪಟ್ಟು ಬೇಲಿಯ ಮೇಲೆ ಹೋಗಿ ಕೂತ ಎಂದು ಬರೆಯುತ್ತಿದ್ದ. ವಿದ್ಯುಚ್ಚೋದರಸಿಯ ಕತೆ ದೈಹಿಕ ಮಾರ್ಪಾಡುಗಳ ಕತೆಯೇ ಆಗಿದೆ. ತರ್ಕಸಾಧ್ಯ ವಿವರಗಳಿಗೆ ಕಟ್ಟು ಬಿದ್ದದ್ದರಿಂದ ಅನಂತಮೂರ್ತಿಯವರಿಗೆ -ಅಥವಾ ಹತ್ತೊಂಭತ್ತನೆ ಶತಮಾನದ ಉತ್ತರಾರ್ಧದ ನಂತರದ ಯಾರೇ ಲೇಖಕರಿಗೆ ಹಾಗೆ ಕಲ್ಪಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. ಇಂಥಲ್ಲಿ ಆರನೆ ಇಂದ್ರಿಯವಾದ ಕಲ್ಪನೆ ಪಂಚೇಂದ್ರಿಯಗಳಿಗೆ ಅಡಿಯಾಳಾಗಿ ಕೆಲಸ ಮಾಡುತ್ತವೆ.

"ಎರಡು:ಪ್ರಾಚೀನ ಭಾರತೀಯ ಕೃತಿಗಳು ಇತಿಹಾಸದ ಅಥವಾ ದಿನದಿನದ ಕಾಲಕ್ಕೆ ಬದ್ಧವಲ್ಲ. ಅಂದರೆ, ದೈನಂದಿನದ ಚಟುವಟಿಕೆಗಳು ನಡೆಯುವ ಕಾಲದಲ್ಲಿ ಮಾತ್ರವೇ ಈ ಕೃತಿಗಳ ಕ್ರಿಯೆ ನಡೆಯುವುದಿಲ್ಲ. ಈ ಕೃತಿಗಳು ವಾಸ್ತವದ ಕಾಲದಂತೆ ಮನಸ್ಸಿನ ಕಾಲವನ್ನೂ ಅವಲಂಬಿಸುತ್ತದೆ. ಈ ರೀತಿಯ ಕಾಲದ ಕಲ್ಪನೆಯನ್ನು ಮಾನಸಿಕ ಕಾಲವೆಂದು ಕರೆದರೆ ತರ್ಕಬದ್ಧ ವಿವರಗಳಿಂದ ಸಂಯೋಜಿಸಿದ ಕೃತಿಯ ಕಾಲವನ್ನು ಐತಿಹಾಸಿಕ ಕಾಲವೆಂದು ಕರೆಯಬಹುದು" -ರಾಮಚಂದ್ರ ದೇವ. ೧೯೯೪.

ಈ ಲೇಖನದ ನಾಲ್ಕನೆ ಭಾಗದಲ್ಲಿ ಕಾದಂಬರಿಯ ಸಾಧ್ಯತೆಗಳ ಕುರಿತು ಹೇಳುತ್ತಾ ಕುಂದೇರಾ ""ಲೌಕಿಕ ಕಾಲದ ಪರಿಕಲ್ಪನೆಯನ್ನು ಮೀರುವ ಅವಕಾಶವೂ ಕಾದಂಬರಿಗಿದೆ" ಎಂದುದನ್ನು ಹೋಲಿಸಿ

ನೋಡಬಹುದು ಎಂಬ ಕಾರಣಕ್ಕೆ ಮೇಲಿನ ಪ್ಯಾರಾವನ್ನು (ಎರಡನೆ ಲಕ್ಷಣ) ಕೂಡ ಇಲ್ಲಿ ಉದ್ಧರಿಸಲಾಗಿದೆ.

ವಾಸ್ತವವಾದೀ ಭ್ರಮೆಗೆ ಕಟ್ಟು ಬೀಳದ ಕಾಫ್ಕಾ ತನ್ನ ಸರ್‍ರಿಯಲ್ ಕೃತಿಗಳಲ್ಲಿ ಅಸಂಭವನೀಯತೆಯನ್ನು ಲೇವಡಿಯ ದ್ವಾರದ ಮೂಲಕ ಕಾದಂಬರಿಯೊಳಗೆ ತಂದ. ಕುಂದೇರ ತನ್ನ ಕೃತಿಯಲ್ಲಿ ಅಸಂಭವನೀಯತೆಯತ್ತ ಸುಳಿಯುವ ಲಘುತ್ವವನ್ನು ತರಲು ಬಯಸುತ್ತಾನೆ.

ಮಿಲನ್ ಕುಂದೇರನ ಲೇಖನಗಳು, ಸಂದರ್ಶನ, ಭಾಷಣಗಳ ಸಂಗ್ರಹವಾದ 'The Art of The Novel' ಪುಸ್ತಕದ ವಿಚಾರಗಳ ಸಂಗ್ರಹ ಈ ಲೇಖನ. ಈ ಪುಸ್ತಕದಲ್ಲಿ ನಮ್ಮ ಕಾಲದ ಮಹತ್ವದ ಕಾದಂಬರಿಕಾರನನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಸಂಗತಿಗಳಲ್ಲದೆ ಕಾದಂಬರಿ ಪ್ರಕಾರದ ಬಗ್ಗೆಯೂ ಚಿಂತನೆ ಹಚ್ಚುವ ವಿಚಾರಗಳಿವೆ.

೦

ಬೆಂಗಳೂರಿನಲ್ಲಿ ಇಲ್ಲಿ ಉಳಿಯಿರಿ

ಹೊಟೆಲ್ ಮಹಾವೀರ್

* ನಗರದ ಮಧ್ಯಭಾಗದಲ್ಲಿದೆ
* ರೈಲು ಮತ್ತು ಬಸ್ ನಿಲ್ದಾಣಕ್ಕೆ ಎರಡೇ ನಿಮಿಷದ ದಾರಿ
* ಪಾಟಿಂಗ್ ಮತ್ತು ಮನೋರಂಜನ ಕೇಂದ್ರಗಳಿಗೆ ಸಮೀಪವಿದೆ.
* ಅಲಂಕರಿಸಿದ ಪಡಸಾಲೆಯಿದೆ
* ಸಿದ್ಧಗೊಳಿಸಿದ ಸುಂದರ ಕೋಣೆಗಳಿವೆ
* ಸ್ನಾನದ ಮನೆ ಸೇರಿರುವ ರೂಮುಗಳು, ದೂರವಾಣಿ, ಸಂಗೀತ, ಟಿ. ವಿ., ಸಿನೇಮಾ ಛಾನಲ್ಲುಗಳು, ಊಟ ಹಾಗೂ ಬಿಸಿನೀರಿನ ವ್ಯವಸ್ಥೆ ಹೊಂದಿದೆ.
* ಕ್ರೆಡಿಟ್ ಕಾರ್ಡ್ಸ್ : ವೀಸಾ ಮತ್ತು ಮಾಸ್ಟರ್ ಕಾರ್ಡ್ಸ್ ಕ್ಯಾನ್ ಕಾರ್ಡ್ಸ್ ಬಾಬ್ ಇಂಡಿಯಾ ಮತ್ತು ಡೈನರ್ಸ್ ಕಾರ್ಡ್

ದುಬಾರಿಯಾಗದೆ ಸ್ವಚ್ಛ ಸೌಲಭ್ಯಗಳು ಬೇಕಿದ್ದರೆ ನಮ್ಮಲ್ಲಿ ಬನ್ನಿ

ನಗರದ ರೈಲ್ವೇ ನಿಲ್ದಾಣದ ಹತ್ತಿರ, ಬೆಂಗಳೂರು -560 053

Ph:73670, 70741,70735, 70774, Grams : "NICESTAY"

TLX :0845 -3060- !C6 FAX: 080 269843

ನಮ್ಮ ಸದಸ್ಯರಾಗಿ, ಎಲ್ಲಾ ಲಾಭಗಳನ್ನು ಪಡೆದುಕೊಳ್ಳಿ.


ತಿಂಗಳ ಕವಿತೆ
ಹೊಂಗಸಿನ ಚಿತ್ರಗಳು
○ ಶಾ. ಬಾಲೂರಾವ್
○ ಶೋಭಾ
○ ಬಿ. ಚಿನ್ನಸ್ವಾಮಿ

ಹೆಂಗಸರನ್ನು ಕುರಿತು

-ಜತೆ ಗಂಡಸರಿಗೊಂದು ಕಿವಿಮಾತು

ಶಾ. ಬಾಲುರಾವ್

ಹೆಂಗಸರು ನನಗೂ ಇಷ್ಟ
ನಿಮ್ಮೆಲ್ಲರಂತೆ
ನಾನೂ ಗಂಡಾದ್ದರಿಂದ.
ಮೇಲೆ ಇನ್ನೂ ಕೆಲವು ಕಾರಣಕ್ಕಾಗಿ.

ಅವರು ನಮಗಿಂತ ಹೆಚ್ಚು ಸಂಗಜೀವಿಗಳು.
ಇವತ್ತು ಅಮಾವಾಸ್ಯೆ, ನಾಳೆ ಹುಣ್ಣಿಮೆ ಎಂದೇನೇನೊ ನೆಪಹುಡುಕಿ
ಒಂದಲ್ಲ ಒಂದು ಕಡೆ ಗುಂಪುಗೂಡುತ್ತಾರೆ.
ನಾವು ನಾಲ್ಕು ಜನ ಗಂಡಸರು ದುಂಡು ಮೇಜಿನ ಸುತ್ತ
ಕೂರುವಷ್ಟೇ ಜಾಗದಲಿ ಇವರು ತಮ್ಮೆಲ್ಲ
ತಿಸರ -ಮತ್ಸರಗಳನ್ನು ಸೊಂಟಪಟ್ಟಿಯಲಿ ಕಟ್ಟಿಟ್ಟು
'ಅಯ್ಯೋ, ಇಲ್ಲೇ ಬನ್ನಿ' ಎಂದು ಅನರಾಸ್ತೆ ತೋರುತ್ತ
ತೊಡೆಗೆ ತೊಡೆ ಹಚ್ಚಿ, ತಮ್ಮ ಹತ್ತುದೇಹಗಳನ್ನು ನೆಲಕ್ಕೂರುತ್ತಾರೆ.

ಅಲ್ಲ, ನೆಲದೊಡನೆ ಎಂಥ ಹೊಕ್ಕಳ ನಂಟು
ಈ ಭೂತಾಯಿ ಮಕ್ಕಳದು. ನನಗೆ ನೆನಪಿದೆ :
ನಮ್ಮಮ್ಮ, ನಮ್ಮಜ್ಜಿ ಎಂದೂ ಕುರ್ಚಿ ಕಂಡವರಲ್ಲ
ನೆಲದ ಮೇಲೇ ಅವರು ಜನ್ಮ ತಳೆದದ್ದು, ಜನ್ಮಕಳೆದದ್ದು
ಹತ್ತು ಹೆತ್ತು ಸಂಸಾರ ಬೆಳಸಿದ್ದು.
ಹಾಗೇ ಅವರೆಂದೂ ಚಪ್ಪಲಿ ಷೂಸ್ ಮೆಟ್ಟಿದವರಲ್ಲ
ಬರಿಗಾಲಲ್ಲೇ ಗುಡಿಜಾತ್ರೆಗಳಿಗೆ ನಡೆದು
ನೆಲ ಸವೆಸಿದವರು.

ಸೇರಿದ್ದೆ ತಡ, ಈ ಹೆಂಗಸರು ಮಾತಿಗಿಳಿಯುತ್ತಾರೆ.
ಅದದೇ ಮಾತು. ಒಮ್ಮೆಲೇ. ಒಟ್ಟಿಗೆ.

ಎಲ್ಲ ಒಟ್ಟಾಗಿ ಅರ್ಥ ಸಹ ಮಾಡಿಕೊಳ್ಳುತ್ತಾರೆ.
ಏನು ಆ ಮಾತು? ನಾವು ಗಂಡಸರು ಜಗತ್ತಿನ
ಎಲ್ಲ ಆಗುಹೋಗುಗಳ ಹೊಣೆ ಹೊತ್ತು, ಆ ಭಾರದ ತಾಪ ತಂಪಾಗಿಸಲು
ಐಸ್ ಬೆರಸಿ ಸ್ಕಾಚಿನ ಮೇಲೆ ಸ್ಕಾಚ್ ಹೀರುತ್ತ
ಧರ್ಮ -ಇತಿಹಾಸ, ಸಮಾಜ-ಸಾಹಿತ್ಯ, ಕ್ರಾಂತಿ -ಭ್ರಾಂತಿ
ಎಂದು ಘನಂದಾರೀ ವಿಷಯಗಳ ತೆಗೆದು ದನಿಯೆತ್ತಿ

ನಮ್ಮ ಚರ್ಚೆಗೆ ಕನ್ನಡ ಸಾಲದೆಂಬಂತೆ ಇಂಗ್ಲಿಷ್ ಬೆರಸಿ
ಮೇಜು ಕುಟ್ಟುತ್ತ, ಕಿತ್ತಾಡುತ್ತ, ಕಿರಚಿರುವಾಗ
ಅವರೋ, ಯಾರ ಮನೆಯಲ್ಲಿ ಏನಡಿಗೆ?
ಯಾವ ಗೊಜ್ಜಿಗೆ ಎಷ್ಟು ಹುಳಿ, ಉಪ್ಪು? ಒಗ್ಗರಣೆ ಯಾವದು?
ಯಾರಿಗೆ ಮದುವೆ, ಎಷ್ಟು ಮಕ್ಕಳು, ಮತ್ತಾರು ಬಸುರಿ?
ಹೆರಿಗೆ ಯಾವಾಗ? ಸೀರೆ ಹೊಸದೆ? ಏನೊಡವೆ ಮಾಡಿಸಿದಿರಿ?
ಎಂದು ಅವೇ ಬದುಕಿನ ಸರ್ವಸ್ವವೆಂಬಂತೆ
ಪರಪರ ಹರಟುತ್ತಾರೆ.

ಹೌದು, ಸ್ವಾಮಿ. ಯೋಚಿಸಿ ನೋಡಿದರೆ ಅವೇ ಸರ್ವಸ್ವ.
ಅವರ ಅಡಿಗೆ -ಊಟ, ಮದುವೆ -ಮಕ್ಕಳು, ಒಡವೆ -ಬಟ್ಟೆ,
ಅರ್ಥಾತ್ ನಾವು ಬುದ್ಧಿ ಜೀವೀ ಗಂಡಸರ ಉದ್ಬುದ್ಧ ವಿದ್ವದ್ಭಾಷೆಯಲಿ
ಅನ್ನ, ಸಂತಾನ, ವಸ್ತ್ರವಿತ್ತ ಬದುಕಿನ ಮೂಲಭೂತಗಳು.
ಮಕ್ಕಳು ಹೆರುವಂತೆ ಹೆಣ್ಣಿಗಷ್ಟೇ ಅದು ಸುಲಭ, ಸಾಧ್ಯ.
ಅವು ಸಲೀಸಿದ್ದಾಗ ಮಾತ್ರ ನಮ್ಮ ದಾರಿ ನಡೆವುದು ನೇರ.
ಇನ್ನು ನಮ್ಮ ವಾದಾಂಶಗಳೋ ಚರ್ಚೆಪೆಟ್ಟಿಗೆ ಬಗ್ಗದೆಯೆ
ಮೇಲೆ ಬದಲಾದಂತೆ ತೋರುತ್ತ ಇದ್ದಂತೆಯೇ ಇರುವವು.

ಅದಕ್ಕೇ ನಾನನ್ನುವುದು-ಹೆಣ್ಣು ಹೆಣ್ಣಾಗಿರಲಿ
ತಾಯಾಗಿ, ಮಗಳಾಗಿ, ಮನೆಯೊಡತಿಯಾಗಿ,
ಸೋದರಿಯಾಗಿ, ಸೊಸೆಯಾಗಿ, ಜತೆಗಾತಿಯಾಗಿ,
ಬದುಕಿನ ಸಾರ್ವಭೌಮಳಾಗಿ.

ಕಣ್ಣ ಮುಚ್ಚಾಲೆ

ಶೋಭಾ

ತಂಪೊಡಲಿನ ನೆಲದಲ್ಲಿ
ಬಣ್ಣ ತುಂಬಿದ ಕನಸು
ಕನಸಿನೊಳಗೆ
ನೆಳಲು - ಬೆಳಕಿನ ಹಂದರದೊಳಗೆ
ಪುಟ್ಟದೊಂದು ಬೆಳ್ಳಿಚುಕ್ಕಿ.
ಮಿಣುಕಿದಾಗ,
ಕಾಡಿಸಿ ಅಳಿಸಿ
ತಿವಿದು ಸೊಕ್ಕಳಿದು
ಕುಗ್ಗಿಸಿ ಉಬ್ಬಿಸುವ ಹುನ್ನಾರ.
ಒಮ್ಮೆ ಗಂಭೀರ
ಒಡನೆಯೆ ಮಳ್ಳ ಪೋರ
ಮುಗ್ಧತೆಯ ಸೋಗು
ಕಣ್ಣಂಚಿನಲಿ ನಗು
ಕೋಳದೊಳಗಿನ ಚಿಟ್ಟೆಯ
ರೆಕ್ಕೆಗೆ ಮತ್ತೊಂದು
ರಂಗಿನ ಹುಂಡು.
ಮರುಕ್ಷಣವೆ,
ಬಟ್ಟ ಬಯಲಿನ ಗಗನ
ದಿಕ್ಕಮರೆಸುವ ಮೌನ
ಮೂರು ಗೇಣಿನ ದಾರಿ
ಕೈ ತಪ್ಪಿ ಜಾರಿ
ಚುಕ್ಕಿಯದು
ಗಗನ ಕುಸುಮ.

ಮಿನುಮಿನುಗಿ ಹೊಳೆವಾಗ
ಮೈಮರೆಸುವ ಸುಖದೊಳಗೆಲ್ಲೋ
ಕಿರುಗುಡುವ ದುಃಖದ ದನಿ.....

ಚುಕ್ಕಿಗೆ ಭೂಮಿ ಸವತಿ
ಚಿಟ್ಟೆಗೆ ಗಗನದ ಭ್ರಾಂತಿ!

ಅಜ್ಜಿ ಮತ್ತು ಮೊಮ್ಮಗಳು

ಬಿ. ಚಿನ್ನಸ್ವಾಮಿ

ಅಂಥಾ ಒಂದೂರಲ್ಲಿ
ಇಂಥಾ ಒಂದಜ್ಜಿ

ಹಟ್ಟಿಯೊಳಗೊಂದು ಹಜಾರ
ಹಜಾರದಲ್ಲೊಂದು ಮೂಲೆ
ಮೂಲೆಗೊರಗೇ ಇತ್ತು

ಮರೆತ ಮೂಲೆಯಲ್ಲೊಂದು
ಸವೆದ ಕಸಬರಿಕೆ.

೧

ತೆವಳಾಡುವ ಎದೆಗೂಸಿಗೆ
ಕಣ್ಣೆಸರು ಕಾಲೆಸರು ತಗುಲಿ
ಇಳಿ ತೆಗೆವಾಗ ಉರಿದು ಭುಗಿಲೇಳುವ
ಹಳೆಯ ಕಸಬರಿಕೆ.

ಹಾಗೆ ಮಾರಿ ಹಬ್ಬಕು ಮುಂಚೆ
ಊರಿಗೊದಗುವ ಕಂಟಕಕ್ಕೆ

ತಾ ಮುಳುವಾಗಬಹುದೆಂದು
ದಿಗಿಲು ಬೀಳುವ ಅಜ್ಜಿ.

ಹೊತ್ತಿಗೆ ಬಂದು ಬೀಳುವ ಮುದ್ದೆ
ಸೊಪ್ಪು; ಅಣಕಿಸುವ ಅರಿವಾಣ,
ಸೊಸೆ ಮುದ್ದುಗಳ ಖ್ಯಾನ, ಏನೆಲ್ಲ ವ್ಯಾಖ್ಯಾನ.

ಮೂಲೆಯಲ್ಲಿರದಿದ್ದರೆ
ಊರುಗೋಲಿಡಿದು ಹಿತ್ತಲಿಗೆ
ಹಿತ್ತಲಿನಿಂದ ಮೂಲೆಗೆ

ತನ್ನ ಅಂತ್ಯ ಮೂಲೆಯಲ್ಲೆ ಆಗಲಿ
ಎಂದು ಧೇನಿಸುತ್ತಾ ಕೂಡುವುದು ಅಜ್ಜಿ
ಹಿತ್ತಲಾದರೆ ಎತ್ತಲು ಹೇಸಬಹುದೆಂದು

ನಡುವೆ ಕತ್ತಲ ಹಾದಿಯಲ್ಲಿ ಬೇಡ
ಕನಿಕರ ತುಂಬುವರು ಹಾದಿಗರೆಲ್ಲ

ಅಜ್ಜಿಯದು ಯಾವಾಗಲೂ
ಸಮಾಧಿ ಸ್ಥಿತಿ
ತನ್ನ ಸಮಾಧಿ ಕೂಳಿಗ ನೆಂಟರಿಷ್ಟು
ಕಾಗೆಗಳು ಎಷ್ಟು ಬರುವವೊ ಎಂಬ ಚಿಂತೆ.

೨

ಹಜಾರದಲ್ಲಿ ಕುಂಟೆಬಿಲ್ಲೆ ಆಡುವ
ಮೊಮ್ಮಗಳೇ ಆಗಾಗ ಮಿಂಚಿ
ಮಾಯವಾಗುವ ನಗೆಮುಗುಳು

ತನ್ನ ಗತಕಾಲದ ನೆನಪುಗಳೊಂದಿಗೆ
ಮೊಮ್ಮಗಳ ಚಿನ್ನಾಟವನ್ನು ಬೆಸೆಯುತ್ತಾ
ಜೀವನದಿಯ ನಿರಂತರತೆಯನ್ನು ಹುಡುಕುತ್ತಾ

ಬಿಡುವಿನ ವೇಳೆ ಮೊಮ್ಮಗಳ
ಕರೆದು 'ತಲೆ ನೋಡವ್ವ' ಕಡಿತ
ಹಣಿಗೆ ತಾ ಎನ್ನುತ್ತದೆ ಅಜ್ಜಿ

ಕೆರೆದ ಗಾಯ ಕಜ್ಜಿ
ಕೊಂಚ ಕಮಟು ವಾಸನೆಯನ್ನು ಸಹಿಸಿ
ಎಳೆ ಬಾಳೆ ಕೂರುತ್ತದೆ ಕಥೆಗಾಗಿ

ಸೀರಿಡಿದ ಸಿರಿಮುಡಿಯ
ಚಿಗುರು ಬೆರಳುಗಳು ಬೆದರುವಾಗ
ಬಿಚ್ಚಿ ಕೊಳ್ಳುವುದು ಬೆರಗಿನದೊಂದು ಪರಂಪರೆ
ತೆರೆಯುವುದು ಭಂಡಾರ
ವಿಸ್ಮಯ ಕಥಾಲೋಕ

ಒಂದೊಂದು ಕೂದಲ ಬಗೆಯುವುದು
ಪುಟಗಳ ತಿಣುಕಿದಂತೆ
ಹೊಸ ಮಾತು ಹೊಸ ಗಾಳಿ.

ಮುತ್ತುವ ಹೇನುಗಳ ಹೆಕ್ಕಿ
ಕುಕ್ಕುವ ಬೆರಳುಗಳು
ಶತೃ ಸೈನ್ಯವನ್ನು ಸದೆಬಡಿವ ಸೀರಣಿಗೆ.

ಸುಕ್ಕುಗೆನ್ನೆಯ ಖಿನ್ನ ಕಾಲುವೆಗಳಲ್ಲಿ
ಕಣ್ಣೀರು; ಕಥೆ ಹೇಳಿದ್ದು ಮೊಮ್ಮಗಳೋ
ಕೇಳಿದ್ದು ಅಜ್ಜಿಯೊ?

ಪುಸ್ತಕ
ಪುಸ್ತಕ
ಪುಸ್ತಕ ವಿಭಾಗ

ಕೃಷ್ಣಚಂದ್ರ ಭಟ್ಟಾಚಾರ್ಯರ

- Swaraj in Ideas

ಶಂಕರ ಮೊಕಾಶಿ ಪುಣೇಕರ

೧೯೫೪ ರಲ್ಲಿ ಪ್ರಕಟವಾದ ಕೃಷ್ಣಚಂದ್ರ ಭಟ್ಟಾಚಾರ್ಯರ ಅಪರೂಪದ ಪುಸ್ತಕ Swaraj in ideas *ಬಗ್ಗೆ ಮೊಕಾಶಿಯವರು ಬರೆದಿರುವ ಪುಟ್ಟ ಲೇಖನವಿದು. ಹಲವಾರು ವರ್ಷಗಳಿಂದ ರುಜುವಾತು ಕಡತದಲ್ಲಿ ಅಡಗಿ ಕುಳಿತಿದ್ದ ಈ ಲೇಖನದ ತೀವ್ರತೆ ಹಾಗೂ ಪ್ರಾಮಾಣಿಕತೆ ಗಮನೀಯವಾದದ್ದು. ಆಧುನಿಕ ಸಂದರ್ಭದಲ್ಲಿ ತುಂಬ ಪ್ರಸ್ತುತವಾದ ಹಾಗೂ ಆತಂಕಕಾರಿಯಾದ ಹಲವು ವಿಶಯುಗಳನ್ನ ಈ ಲೇಖನ ಚರ್ಚಿಸುತ್ತದೆ.*

ಪಾಶ್ಚಾತ್ಯ ಶಿಕ್ಷಣದಿಂದ ಹುಟ್ಟಿದ ಮಾನಸಿಕ ದಾಸ್ಯದ ಪರಿಣಾಮವೆಂದರೆ ಎಲ್ಲ ಬಗೆಯ ಸೃಜನಶೀಲತೆಯ ದುಷ್ಕಾಳ, ಎಂದು ಕೆ. ಸಿ. ಭಟ್ಟಾಚಾರ್ಯ ೧೯೨೮ ರಲ್ಲಿ ಬಣ್ಣಿಸಿದುದು ಆಗಿನ ಕಾಲಕ್ಕೆ ಎಷ್ಟು ಸತ್ಯವಾಗಿತ್ತೋ ಅಷ್ಟೇ ಇಂದಿಗೂ ಸತ್ಯವಾಗಿದೆ. ಆಗ ಇನ್ನೂ ಟಾಗೋರರ ಸಾಧನ, ಆನಂದ ಕುಮಾರಸ್ವಾಮಿ, ಜೆ. ಸಿ. ಕುಮಾರಪ್ಪ, ಬುದ್ಧಿಜೀವಿಗಳ ಮನಸ್ಸನ್ನು ಸೆರೆಹಿಡಿದಿರಲಿಲ್ಲ. ಗಾಂಧಿ 'ಹಿಂದ್‌ಸ್ವರಾಜ್'ಬರೆದು ರಾಜಕೀಯ ಸ್ವರಾಜ್ಯದ ಬಗ್ಗೆ ಲವಲವಿಕೆ ಹುಟ್ಟಿಸಿದ್ದರು. ಸ್ವಾಮಿ ವಿವೇಕಾನಂದರು ಅಮೆರಿಕೆಯ ಸರ್ವಧರ್ಮಪರಿಷತ್ತಿನಲ್ಲಿ ಮಾಡಿದ ಭಾಷಣದಿಂದ ಭಾರತ ಪಾಶ್ಚಾತ್ಯರಿಗೆ ಪರಿಚಿತವಾಗಿತ್ತೇನೋ ನಿಜ. ಅದರ ಪ್ರಭಾವವು ಭಾರತೀಯ ಬುದ್ಧಿಜೀವಿಗಳಲ್ಲಿ ಪಾಶ್ಚಾತ್ಯೀಕೃತ ಪ್ರೊಫೆಸರ್‌ಗಳಲ್ಲಿ ಕುತೂಹಲ ಹುಟ್ಟಿಸಿತ್ತೇ ಹೊರತು ತಮ್ಮ ಸಂಸ್ಕೃತಿಯ ಬಗ್ಗೆ ಆದರ ಹುಟ್ಟಿಸಿರಲಿಲ್ಲವೆಂದು ತೋರುತ್ತದೆ. ಗಾಂಧೀಜಿ ಜನಸಾಮಾನ್ಯರ ಹೃದಯ ತಟ್ಟಿದರು. ಆದರೆ ಈ ಅರ್ಧಶಿಕ್ಷಿತ, ಅಹಂಮನ್ಯ, ಬುದ್ಧಿಜೀವಿಗಳಲ್ಲಿ ಮಾತ್ರ ತಮ್ಮ ಸಂಸ್ಕೃತಿಯ ಜೀವಂತ ಸ್ವರೂಪದ ರೂಪರೇಖೆಗಳನ್ನು ತಿಳಿಗೊಳಿಸಿರಲಿಲ್ಲ. ಇಂದಿಗೂ ಅದೇ ಪರಿಸ್ಥಿತಿ ಉಳಿದಿದೆ. ಅಲ್ಲಮಪ್ರಭುವಿನ ಮೇಲೆ ಬರೆಯುವಾಗಲೂ ನಮಗೆ ಬರ್ಟ್ರಾಂಡ್ ರಸಲ್ ಕುಂಟುದಾಸನೇ ಬೇಕು. ಪಾಶ್ಚಾತ್ಯರು ಹೇಳಿದ್ದೆಲ್ಲ ಪವಿತ್ರ ತೀರ್ಥವೆಂದು ತಿಳಿಯುವ ದಾಸ್ಯಮನೋವೃತ್ತಿಯೇ ಇದೆಲ್ಲ ಪ್ರಕ್ರಿಯೆಗೆ ಕಾರಣ. ಪಾಶ್ಚಾತ್ಯ ತತ್ವಜ್ಞಾನಿಗಳು ತಮ್ಮ ತಮ್ಮ ಫಿಲೋಸೊಫಿ ಹೇಳುತ್ತಾರೆ. ಅದು ತಮ್ಮದೇ ಕೊಡುಗೆ ಎಂದು ಪ್ರತಿಪಾದಿಸುತ್ತಾರೆ. ಅವರಲ್ಲಿ ವಾದ ವಿವಾದಗಳೇ ಬಹಳ. ಕೊನೆಗೆ ತಾವು ಕಟ್ಟಿದ ವಿಚಾರದ

ಪರಿಪೂರ್ಣ ತಾರ್ಕಿಕ ಹಂದರ ತಯಾರಾದ ಮೇಲೆ, ದೊಸ್ತೊವಸ್ಕಿಯ ಫಾದರ ಜೊಸಿಮಾ ಕೇಳಿದಂತೆ "ನೀವು ಇದನ್ನು ನಂಬುತ್ತೀರಾ?" ಎಂಬ ಮೂಲಭೂತ ಪ್ರಶ್ನೆ ಕೇಳಿದರೆ, ಮನಸಾ ಯಾರೂ ಒಪ್ಪುವುದಿಲ್ಲ. 'ನನ್ನನ್ನು ಬಿಟ್ಟುಬಿಡಿ. ನನ್ನ ಹಂದರ ಪರಿಪೂರ್ಣತೆಯನ್ನಷ್ಟೇ ನೋಡಿ ಸಂತೋಷಪಡಿ,' ಎಂದೇ ಹೇಳುತ್ತಾರೆ, ಐವನ್ ನರಮಝೋವ್‌ನಂತೆ. ಅವರು ಎತ್ತುವ ಪ್ರಶ್ನೆಗಳೂ ಚಿಲ್ಲರೆ. ಉತ್ತರರೂಪವಾಗಿ ಅವರು ಕಟ್ಟುವ ಕನಸಿನ ಹಂದರ ಸುಂದರ ಭ್ರಮೆ. ಭಾರತದಲ್ಲಿ 'ಮಹಾಜನ'ರೆನಿಸಿಕೊಳ್ಳುವ ಯಾರೂ ಆ ಪಾಶ್ಚಾತ್ಯ ತತ್ವಜ್ಞಾನಗಳನ್ನು ನಂಬಲಾರರು. ನಂಬಬಾರದು. ಪ್ರತ್ಯಕ್ಷ ಜೀವನದಲ್ಲಿ ಅವುಗಳಿಗೆ ಕವಡಿಯ ಬೆಲೆಯೂ ಇರುವುದಿಲ್ಲ. ಓದಬೇಕು, ನಂಬಬಾರದು. ಜೀವನದಲ್ಲಿ ಅದನ್ನು ತರುವ ಯತ್ನವಂತೂ ಆತ್ಮಘಾತಕ.

ಆದರೆ ಪಾಶ್ಚಾತ್ಯರಿಂದ ನಾವು ಪಡೆಯಬಹುದಾದ ಒಂದು ಬೆಲೆಯುಳ್ಳ ವಸ್ತು ಇದೆ. ಕತೆ-ಕವಿತೆ-ಕಾದಂಬರಿಗಳು ಎಷ್ಟು ನೈಜವೋ ಅದರ ಹತ್ತರಲ್ಲಿ ಒಂದು ಪಾಲು ಕೂಡ ಪಾಶ್ಚಾತ್ಯ ತತ್ವಜ್ಞಾನವಲ್ಲ. ಪಾಶ್ಚಾತ್ಯ ಕತೆ -ಕಾದಂಬರಿಗಳಲ್ಲಿ ಆಯಾ ಲೇಖಕ ಎತ್ತರದ ಪ್ರಶ್ನೆಗಳನ್ನು ಕೇಳಿರುತ್ತಾನೆ. ಆಯಾ ಪಾತ್ರದ ಮುಖವಾಡದಿಂದ ಪರಿಹಾರ ಸೂಚಿಸುತ್ತಾನೆ. (ನೀಡುವುದಿಲ್ಲ). ಅವನು ಕೈಯ್ಯಾಡಿಸಿದ, ಹುಂಬ Bull in a china shopದಂತೆ ಅವನು ನೆಲದ ಮೇಲೆ ಕೆಡವಿದ ಜೀವನ ತುಂಡು-ತುಕಡಿಗಳು ಬೆಲೆಯುಳ್ಳವು. ಸೃಜನಶೀಲ ಲೇಖಕ ಜೀವನದೊಡನೆ ಹಾಕಿದ ಹುಡದಿಯೇ ನೈಜ. ತತ್ವಜ್ಞಾನದಲ್ಲಿ ಪಾಶ್ಚಾತ್ಯರ ಬುದ್ಧಿ ಸಾಗುವುದಿಲ್ಲ. ಆದರೆ ಭಾರತದ ಬುದ್ಧಿಜೀವಿಗಳು ಪಾಶ್ಚಾತ್ಯ ತತ್ವಜ್ಞಾನಿಗಳು ಕಟ್ಟಿದ ಭ್ರಾಮಕ ಹಂದರಗಳನ್ನೇ ಹೆಚ್ಚು ನಂಬುತ್ತಾರೆ. ಈ ವೈಪರೀತ್ಯವನ್ನು ನನ್ನೊಂದು ಕವನದಲ್ಲಿ ಬಣ್ಣಿಸಿದ್ದೇನೆ.

ರಸೆಲನಿಗೂ 'ಹೂಂ'ಎನುವೆ, ಲಾರೆನ್ಸಿಗೂ 'ಹೂಂ'ನೆ.
ಕರ್ಕೆಗಾರ್ಡ್-ಸಾರ್ತ್ರರಿಗೂ 'ಹೂಂ' ' ಹೂಂ' ಒಮ್ಮೆಗಲೆ
ನೀನು 'ಹೂಂ' ಗುಟ್ಟುವುದು ಗೊರಿಕೆಯೇ ನಾನರಿಯೆ.

ರಸೆಲ್‌ನನ್ನು ಉದ್ಧರಿಸುವವರು ಲಾರೆನ್ಸ್‌ನನ್ನು ಉದ್ಧರಿಸಬಾರದೆಂಬುದನ್ನೂ ಅರಿಯದ ವಿವೇಕಶೂನ್ಯತೆ ಇಂದಿಗೂ ನಡೆದುಬಂದಿದೆ. ಕರ್ಕೆಗಾರ್ಡ್‌ನನ್ನು ಮೆಚ್ಚುವವನು ಸಾರ್ತ್ರನನ್ನು ಮೆಚ್ಚಲಾರ. ಇಷ್ಟೂ ತಿಳಿಯದ ಬುದ್ಧಿಜೀವಿಗಳು ಮುರಿಗೆಕೋಡಿನ ಎಮ್ಮೆಗಳಂತೆ ನಮ್ಮಲ್ಲಿ ಬೀದಿಬೀದಿಗಳಲ್ಲಿ ಬಿದ್ದಿವೆ. ಓದಿನಲ್ಲಿ ವಿವೇಕದ ಅಭಾವವೇ ಇದಕ್ಕೆ ಕಾರಣ.

ಪಾಶ್ಚಾತ್ಯರಿಗೆ ಮಾರಿಕೊಂಡ ಬುದ್ಧಿಜೀವಿಗಳ ಕತೆ ಇದಾಯಿತು. ಇನ್ನು, ನಮ್ಮದೆಲ್ಲವೂ ಸರ್ವಶ್ರೇಷ್ಠವೆಂದು ಹೇಳುತ್ತ ಕುಳಿತ ಮೊದ್ದುಗಳ ಬಗ್ಗೆ ಒಂದು ಮಾತು. ಭಟ್ಟಾಚಾರ್ಯರು

ಇಂಥವರನ್ನೂ ತೆಗಳುತ್ತಾರೆಯಾಾವರೂ ಇವರ ಬಗ್ಗೆ ತುಸು ಸಹನೆಯಿಂದ ಬರೆದಿದ್ದಾರೆ. ಇಂದಿನ ಅವಿಮರ್ಶ ಪಾಶ್ಚಾತ್ಯ ಪ್ರೇಮಿಗಳಿಗಿಂತ ನಮ್ಮದನ್ನೇ ಎತ್ತಿಕಟ್ಟುವ ಮೊದ್ದುಗಳು ಬೆಳವಣಿಗೆಯಲ್ಲಿ ಗರ್ಹ್ಯರಾದರೂ, ಇವರ ದೃಷ್ಟಿಕೋನ ತಿಳಿಯುವುದು ಸುಲಭವೆಂದಿದ್ದಾರೆ. ಇವರ ಮುಖ್ಯದೋಷವೆಂದರೆ ಪಾಶ್ಚಾತ್ಯ ನಿರಾಕರಣೆಯಲ್ಲಿ ತಮ್ಮ ಸಂಸ್ಕೃತಿಯ ಗಂಭೀರ ಅಭ್ಯಾಸವನ್ನೂ ಇವರು ಮಾಡುವುದಿಲ್ಲ. ನಮ್ಮದನ್ನು ವೈಚಾರಿಕವಾಗಿ ಅರಿತುಕೊಳ್ಳಲಿಕ್ಕೆ ಪಾಶ್ಚಾತ್ಯ ತತ್ವಜ್ಞಾನವನ್ನು ಓದಬಹುದೆಂದು ಸೂಚಿಸಿದ್ದಾರೆ. ಇದನ್ನು ನಾನು ಒಪ್ಪುತ್ತೇನೆ.

ಯಾವುದೇ ಪಾಶ್ಚಾತ್ಯ ವೈಚಾರಿಕ ಗ್ರಂಥವನ್ನು ಓದುವ ಮೊದಲು ನಾನು ಪ್ರಶ್ನೆ ಕೇಳಿಕೊಳ್ಳುತ್ತೇನೆ. 'What does this S.O.B. trying to establish?' ಎಲ್ಲ ಭಾರತೀಯರೂ ತಾವು ಪಾಶ್ಚಾತ್ಯ ಗ್ರಂಥವನ್ನು ಓದುವ ಮೊದಲು ಈ ಪ್ರಶ್ನೆ ಕೇಳಿದರೆ ತಮ್ಮ ಓದಿನ ದುಷ್ಪರಿಣಾಮವನ್ನು ಅರ್ಧದಷ್ಟು ಕಡಿಮೆ ಮಾಡಬಹುದೆಂದು ನನ್ನ ಅಭಿಪ್ರಾಯ. ಭಟ್ಟಾಚಾರ್ಯರೂ ಪರ್ಯಾಯವಾಗಿ ಇದನ್ನೇ ಸೂಚಿಸಿದ್ದಾರೆ. ನಮ್ಮ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಈ ವಿಚಾರಗಳು ಎಷ್ಟರ ಮಟ್ಟಿಗೆ ಹೊಂದಿಕೆಯಾಗುತ್ತವೆ, ಎಷ್ಟು ಹೊಂದಿಕೆಯಾಗುವುದಿಲ್ಲ, ಎಂಬ ವಿವೇಕ ಇಟ್ಟುಕೊಂಡು ಓದಬೇಕೆಂದು ಹೇಳಿದ್ದಾರೆ.

ಒಮ್ಮೊಮ್ಮೆ ಪಾಶ್ಚಾತ್ಯ Sabbatical leave ತೆಗೆದುಕೊಂಡು, ಭಾರತಕ್ಕೆ ಬಂದು, ಪಂಚತಾರಾ ಹೊಟೆಲ್ಲಿನಲ್ಲಿ ಇದ್ದು, ನಾಲ್ಕೈದು ಜನರನ್ನು ಭೇಟಿಯಾಗಿ, ಭಾರತೀಯ ಸಂಸ್ಕೃತಿಯ ಮೇಲೆ ಉದ್ಗ್ರಂಥ ಬರೆಯುತ್ತಾನೆ. ಅವಕ್ಕೆ ಸಿಕ್ಕ ಪ್ರಚಾರದಿಂದ, ಅವರ ಕರುಣಾರ್ಧ ದೃಷ್ಟಿಕೋನಕ್ಕೆ ಮಾರುಹೋಗಿ, ಬಿಳಿತೊಗಲಿನವನು ನಮ್ಮನ್ನು ಹೊಗಳಿದ್ದಾನೆಂದು ಅವನು ಬರೆದದ್ದನ್ನೆಲ್ಲ ನುಂಗವ ದಾಸಯ್ಯಗಳನ್ನು ಭಟ್ಟಾಚಾರ್ಯರು ತೆಗಳಿದ್ದಾರೆ. origin of subjectivity in Indian thought ಎಂಬ ಅಮೆರಿಕನ್ ಗ್ರಂಥದ ದೋಷಗಳನ್ನು ಬಯಲಿಗೆಳೆದಿದ್ದಾರೆ. ಭಾರತದ ಜಾಲಿ ವ್ಯವಸ್ಥೆಯ ಬಗ್ಗೆ ಪಾಶ್ಚಾತ್ಯರು ಬರೆದ ಅಭ್ಯಾಸಗಳನ್ನು ಸಾರಾಸಗಟು ಟೀಕಿಸಿದ್ದಾರೆ. ಕೇವಲ ಅವರ ಕರುಣೆಗೆ ಮರುಳಾಗಿ ಅವರ ದುಷ್ಟವಾದವನ್ನು ಸ್ವೀಕರಿಸಬಾರದೆಂದು ಎಚ್ಚರಿಸಿದ್ದಾರೆ. ಆ ಮೋಹವು ಇಂದಿಗೂ ಚಾಲ್ತಿಯಲ್ಲಿದೆ.

ಜೊಲ್ಲು ಸುರಿಸುತ್ತ, ತಪ್ಪಡಿ ಇಡುವ ಮಗುವನ್ನು ತಾಯಿ 'ಗೋಪಾಲಕೃಷ್ಣ'ನೆಂದು ಭಾವಿಸುವುದು ಭಾರತದಲ್ಲಿ ಸಾಧ್ಯ. Liberalism ತತ್ವವನ್ನು ಸ್ವೀಕರಿಸಿದ ಇಂಗ್ಲೆಂಡಿನಲ್ಲಿ ಅಸಾಧ್ಯ. ಮನುಷ್ಯನನ್ನು ಮನುಷ್ಯನೆಂದಾಗಿಯೇ ಗೌರವಿಸುವುದು ಭಾರತದಲ್ಲಿ ಸಾಧ್ಯ. ಹುಚ್ಚರಿಗೂ ನಮ್ಮ ಸಮಾಜದಲ್ಲಿ ಗೌರವದ ಸ್ಥಾನವಿದೆ. ಮುದುಕರಿಗೆ ಮನೆಯಲ್ಲಿ ಸ್ಥಾನವಿದೆ. ಪಾಶ್ಚಾತ್ಯ Liberalism

ತತ್ವದಂತೆ ಹುಚ್ಚರನ್ನು ಹುಚ್ಚರ ಆಸ್ಪತ್ರೆಗೆ ಹಾಕಬೇಕು. ಮುದುಕರನ್ನು ವೃದ್ಧಾಶ್ರಮಗಳಿಗೆ ಸೇರಿಸಬೇಕು. (ಭಾರತದಲ್ಲೂ ಇತ್ತೀಚೆಗೆ ಇದೇ ಬರುತ್ತಿದೆ) ಪ್ರತಿ ಮನುಷ್ಯನೂ ದೇವರ ಸ್ವರೂಪನೆಂದು ಭಾರತೀಯರೂ ನಂಬುತ್ತಾರೆ. ಪಾಶ್ಚಾತ್ಯರೂ ಕ್ರಿಶ್ಚಿಯನ್ ತತ್ವ ಒಪ್ಪುವುದಾದರೆ, ನಂಬಬೇಕು. ಆದರೆ ಕಳೆದ ೩೦೦ ವರ್ಷಗಳಲ್ಲಿ Looke, Hobbes, Hume ರಿಂದ ಶುರುವಾದ Rationalist ತತ್ವಗಳು ಪ್ರಾಮುಖ್ಯ ಪಡೆದು, ಈ ನಂಬುಗೆ ಮಸುಳಿಸಿದೆ. ಭಾರತದಲ್ಲಿ ಈ ನಂಬುಗೆ ಇನ್ನೂ ಇದೆ. 'ಎಲ್ಲ ಮನುಷ್ಯರೂ ಪರಿಪೂರ್ಣರು' ಎಂದು ಸ್ವಾಮಿ ವಿವೇಕಾನಂದರು ತಮ್ಮ ಚಿಕಾಗೋ ಭಾಷಣದಲ್ಲಿ ಹೇಳಿದ ಮಾತುಗಳನ್ನು ಸರಿಯಾದ ಅರ್ಥದಲ್ಲಿ ತಿಳಿದುಕೊಂಡರೆ, ನಮ್ಮ ಸಾಂಸ್ಕೃತಿಕ ಚೌಕಟ್ಟು ಯಾವುದು, ಎಂದು ಅರ್ಥವಾಗುತ್ತದೆ. 'ನಮ್ಮ ಚೌಕಟ್ಟು ಪಾಶ್ಚಾತ್ಯ ಚೌಕಟ್ಟುಗಳಿಗಿಂತ ಹತ್ತು ಅಂಗುಲ ಎತ್ತರ' ಎಂದು ನಾನು ಬರೆದ Continuum Models sri Aurobindo's thought ಎಂಬ ಪ್ರಬಂಧದಲ್ಲಿ ಬರೆದಿದ್ದೇನೆ. ಭಟ್ಟಾಚಾರ್ಯರು ಸಂಯಮದಿಂದ ಬರೆದಿದ್ದಾರೆ. ಏಕೆಂದರೆ, ಅವರು ತತ್ವಶಾಸ್ತ್ರದ ಪ್ರಾಧ್ಯಾಪಕರು. ನನಗೆ ಆ ಬಂಧನವಿಲ್ಲ.

೦

ಕೆಎಸ್ಐಐಡಿಸಿ

ಮೂರು ಮುಖ್ಯ ಕಾರಣಗಳಿಗೆ ನಮ್ಮನ್ನ ಸಂಪರ್ಕಿಸಿ.

- ವ್ಯಾಪಾರಿ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆ.
- ಯಂತ್ರಗಳನ್ನ ಗುತ್ತಿಗೆ ನೀಡುವ ಯೋಜನೆ.
- ಮುಂದೂಡಿದ ಸಂದಾಯಗಳಿಗೆ ಖಾತರಿ ನಿಲ್ಲುವುದು.

ಜೊತೆಗೆ ತ್ವರಿತ ಸೇವೆಯ ಭರವಸೆಯೂ ಇದೆ !

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತ

'ಎಂಎಸ್ಐಎಲ್ ಹೌಸ್', 36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು - 560 052

ದೂರವಾಣಿ : 2258131- 33 ಫ್ಯಾಕ್ಸ್ : 91-80-2255740

ಪುಸ್ತಕ ಪರಿಚಯ

ವಿಲಿಯಂ

ಗೋವಿಂದ ಪೈ ಸಂಶೋಧನ ಸಂಪುಟ-(ಸಂಶೋಧನ ಲೇಖನಗಳು)

ಸಂ. ಹೆರಂಜೆ ಕೃಷ್ಣಭಟ್ಟ ಮತ್ತು ಮುರಳೀಧರ ಉಪಾಧ್ಯ ಹಿರಿಯಡಕ

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ-ಪುಟ ೧೩೯೨, ರೂ. ೬೫೦/- ರಾಷ್ಟ್ರಕವಿ ಗೋವಿಂದ ಪೈ ಅವರ ಸಂಶೋಧನ ಲೇಖನಗಳ ಬೃಹತ್ ಸಂಗ್ರಹ. ಇತಿಹಾಸ, ಸಾಹಿತ್ಯ ಸಂಸ್ಕೃತಿ ಕಲೆಗಳ ಬಗ್ಗೆ ಅಮೂಲ್ಯವಾದ ಆಕರ ಗ್ರಂಥ. ಹಳೆಗನ್ನಡ ನಡುಗನ್ನಡ ಮತ್ತು ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿನ ಹತ್ತು ಹಲವು ಯಕ್ಷ ಪ್ರಶ್ನೆಗಳಿಗೆ ಉತ್ತರ ಇಲ್ಲಿದೆ. ಕರ್ನಾಟಕದ ಇತಿಹಾಸ, ಭಾರತದ ಇತಿಹಾಸ, ವಾಗರ್ಥ, ಧರ್ಮ, ತತ್ವಜ್ಞಾನ, ಭಾಷಾಂತರ, ಗೋವಿಂದ ಪೈ ಅವರ ಸ್ವಂತ ಕೃತಿಗಳು, ವಿಮರ್ಶೆಗಳು-ಇವೆಲ್ಲಾ ಈ ಗ್ರಂಥದಲ್ಲಿ ಇವೆ. ಮಂಜೇಶ್ವರ ಆಧುನಿಕ ಕನ್ನಡ ಸಾಹಿತ್ಯದ ಒಂದು ಯಾತ್ರಾಸ್ಥಳ. ಇದೇ ಗೋವಿಂದ ಪೈ ಅವರ ಸರಸ್ವತಿ ಸ್ಥಾನ. ಕಾವ್ಯ ಮತ್ತು ಸಂಶೋಧನೆ ಪೈ ಅವರ ಪ್ರಬಲ ಅಭಿವ್ಯಕ್ತಿ. ಈ ಚಿಕ್ಕ ಊರಿನಲ್ಲಿ ಪೈ ಅವರು ವಿದ್ವತ್ತಿನ ಗೊಮ್ಮಟನಾಗಿ ಬೆಳೆದದ್ದೊಂದು ಅದ್ಭುತವಾದ ಕಥೆ. ಇಲ್ಲಿ ಚರ್ಚಿತವಾದ ಸಂಗತಿಗಳು ಒಂದೆರಡಲ್ಲ. ಕನ್ನಡದ ಹಿನ್ನೆಲೆಯಲ್ಲಿ ಬಂದಿರುವ ವಿಪುಲ ಸಾಹಿತ್ಯದ ಒಂದು ದರ್ಶನವೇ ಇಲ್ಲಿದೆ. ಇದೊಂದು ಅಪೂರ್ವ ಆಕರ ಗ್ರಂಥ.

ಸತ್ಯ ಮತ್ತು ದೇವರು (ಕಥೆಗಳು) ಟಾಲ್‌ಸ್ಟಾಯ್- ಅನು. ಎಲ್ಸಿ. ನಾಗರಾಜು-

ಶಶಿಭ ಪ್ರಕಾಶನ, ೨, ೬ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು. ಪುಟ ೯೩, ರೂ. ೩೬/-

ಟಾಲ್‌ಸ್ಟಾಯ್‌ಯ ಹತ್ತು ಕತೆಗಳ ಕನ್ನಡ ಅನುವಾದದ ಒಂದು ಸಂಕಲನ. ಆರಿಸಿಕೊಂಡಿರುವ ಕತೆಗಳಲ್ಲಿ ಒಂದು ಸಮಾನ ಮನಸ್ಸಿದೆ. ಟಾಲ್‌ಸ್ಟಾಯ್‌ಯ ಧಾರ್ಮಿಕ ಚಿಂತನೆಗಳನ್ನು ನೋಡಿ ಈತನನ್ನು ಜಗತ್ತಿನ ಆತ್ಮಸಾಕ್ಷಿ ಎಂದು ಕರೆದರೆ ಕೆಲವರು ಈತನ ಚಿಂತನ ಬೋಧನೆಗಳೆಲ್ಲವೂ ಒಡಕು ಮಡಕೆಯ ಬೋಧನೆಗಳೆಂದು ಹೇಳಿದವರು ಇದ್ದಾರೆ. ಟಾಲ್‌ಸ್ಟಾಯ್‌ಯ ದೇವರ ರಾಜ್ಯದ ಕಲ್ಪನೆ ಗಾಂಧೀಜಿಯ ರಾಮರಾಜ್ಯದ ಕಲ್ಪನೆಗೆ ಪ್ರೇರಣೆ ಸಹಾ ಹೌದು. **ಪಿಶಾಚಿ ಮತ್ತು ರೊಟ್ಟಿ, ಮನುಷ್ಯನಿಗೆ ಎಷ್ಟು ರೊಟ್ಟಿ ಬೇಕು,** ಸತ್ಯ ಮತ್ತು ದೇವರು, ದುಡಿಮೆ **ಸಾವು** ಮತ್ತು **ರೋಗ, ಪಿಶಾಚಿಯ ಸೋಲು,**

ೂರು ಪ್ರಶ್ನೆಗಳು-ಇವೆಲ್ಲಾ ಒಳ್ಳೆಯ ಭಾಷಾಂತರವನ್ನು ಕಂಡಿವೆ. ಟಾ ಸ್ಟಾಯ್ ಬಯಸಿದ್ದು ಒಂದು ಸಾಧುವಾದ ಸಮಾಜವನ್ನು. ಆದರೆ ಪಿಶಾಚಿ ಮತ್ತು ರೊಟ್ಟಿಯಲ್ಲಿ ಆಗುವಂತೆ ಪಿಶಾಚಿಯ ಸಲಹೆ ಪಡೆದು ಹೊಲದಿಂದ ಹೆಚ್ಚೆಚ್ಚಾಗಿ ಬೆಳೆದ ಗೋಧಿಯಿಂದ ಮದ್ಯ ತಯಾರಿಸಿ ಸಾತ್ವಿಕತೆ ಕಳೆದುಕೊಂಡ ರೈತನಂತೆ ರಷಿಯಾದ ಸಮಾಜವಾದಿ ಪ್ರಭುತ್ವ ತನ್ನ ಗೋಧಿ ಕಣಜ ಹಣದಿಂದ ಬಾಂಬುಗಳನ್ನು ಮತ್ತಿತರ ಅಪಾಯಕಾರಿ ವಸ್ತುಗಳನ್ನು ತಯಾರಿಸಿದ ಹಾಗೆ ತನ್ನ ಸಾತ್ವಿಕತೆಯ ಸಂಪನ್ಮೂಲವನ್ನು ಕಳೆದುಕೊಂಡಿತು. ಇಲ್ಲಿರುವ ಕೆಲವು ಕತೆಗಳು ಈಗಾಗಲೇ ಕನ್ನಡಕ್ಕೆ ಬಂದಿದ್ದರೂ ನಾಗರಾಜುರವರ ಈ ಅನುವಾದದಲ್ಲಿ ತಾಜಾತನವಿದೆ.

ಮರೆಯಲಾಗದ ಮಹಾನುಭಾವರು (ಜೀವನ ಚರಿತ್ರೆ) ಹನುಮಂತ ಗೌಡ-ಮುದಿಗೌಡರ್- ಗ್ರಾಮಭಾರತಿ ಪ್ರಕಾಶನ, ಹೊಸಕೋಟಿ. ಬೆಳಗಾವಿ ಜಿಲ್ಲೆ. ಪುಟ ೨೦೦, ರೂ. ೨೫/-

ಗಟ್ಟಿ ಕೆಲಸಗಳನ್ನು ಮಾಡಿರುವ, ಮಾಡುತ್ತಿರುವ ನಮ್ಮ ಸಮಕಾಲೀನರ ಸಾಧನೆಗಳು ಅಕ್ಷರಗಳಲ್ಲಿ ರೂಪುಗೊಳ್ಳದೆ ಹಾಗೆಯೆ ಮರೆಯಾಗುವುದು ಸಾಮಾನ್ಯ. ಈ ಸಂದರ್ಭದಲ್ಲಿ ಹನುಮಂತ ಗೌಡರ ಈ ಪುಸ್ತಕ ಮುಖ್ಯವಾಗುತ್ತದೆ. ಕನ್ನಡ ನಾಡಿನ ಅದರಲ್ಲೂ ಉತ್ತರ ಕರ್ನಾಟಕದ ಕಳೆದ ತಲೆಮಾರಿನ ಹಾಗೂ ಪ್ರಸ್ತುತ ತಲೆಮಾರಿನ ಸಾಧಕರನ್ನು ಜನ ಮರೆತು ಹೋದಾರೆಂಬ ಕಳಕಳಿಯಿಂದ ಗೌಡರು ಈ ಪ್ರಯತ್ನ ಮಾಡಿದ್ದಾರೆ. ಮಹಾದಾನಿ ಬಸಪ್ಪಣ್ಣಾ ಭೂಮರೆಡ್ಡಿ, ಸಂಪನ್ನ ರಾಜಕಾರಿಣಿ ವೆಂಕರಡಿ ಹೂಲಿ, ಅಂದಾನಪ್ಪ ದೊಡ್ಡಮೇಟಿ, ಡಾ. ಹೆಚ್. ಆರ್. ಅರಕೇರಿ, ಕೆ. ಎಚ್. ಪಾಟೀಲ್, ಗಾಂಧೀವಾದಿ ವೆಂಕಟೇಶ ಮಾಗಡಿ ಹೀಗೆ ಹತ್ತು ಮಂದಿಯ ಪರಿಚಯಾತ್ಮಕ ಲೇಖನಗಳು ಇಲ್ಲಿವೆ. ಇವರೆಲ್ಲರ ದೊಡ್ಡ ಗುಣಗಳ ಸಂಗಡ ಮಾನವ ಸಹಜ ಗುಣಗಳೂ ಇಲ್ಲಿ ತುಂಬಾ ಆತ್ಮೀಯವಾಗಿ ದಾಖಲಿಸಲಾಗಿದೆ.

ಗಂಗೋತ್ರಿಯ ಹಕ್ಕಿಗಳು (ಕವನ) ಜಿ. ಎಸ್. ಅವಧಾನಿ-ಶ್ರೀ ರಾಘವೇಂದ್ರ ಪ್ರಕಾಶನ ಅಂಬಾರಕೊಡ್ಲ, ಅಂಕೋಲಾ ಪುಟ ೬೦, ರೂ. ೩೦/-

ಇದು ಅವಧಾನಿಯವರ ನಾಲ್ಕನೇ ಕವನ ಸಂಕಲನ. ಇಲ್ಲಿಯ ಮೂವತ್ತೆರಡು ಕವನಗಳಲ್ಲಿ ಇವರ ಬಹು ಮುಖ್ಯ ಕವಿತೆಗಳು ಸೇರಿವೆ. ಹೊಸ ಹೊಸ ಅನುಭವದ ನೆಲೆಯಲ್ಲಿ ಮೂಡಿ ಬಂದಿರುವ ಬಹುತೇಕ ಕವನಗಳಲ್ಲಿ ವಸ್ತು ವೈವಿಧ್ಯತೆ, ಶಕ್ತಿಶಾಲಿ ನುಡಿಗಟ್ಟುಗಳು ಮತ್ತು ಅರ್ಥಪೂರ್ಣ ಕಾವ್ಯ ಶಿಲ್ಪಗಳಿಂದಾಗಿ ಈ ಕೃತಿ ಮುಖ್ಯವಾಗುತ್ತದೆ. ಬದುಕಿನ ಹಲವಾರು ವೈಫಲ್ಯಗಳು ನೂರಾರು ನೋವುಗಳು ಈ ಕವಿಗೆ ಪದೆ ಪದೆ ಪೀಡಿಸುತ್ತವೆ. ಬಾಯ್ತುಂಬ ಮುಕ್ಕಳಿಸುವೀ ಜನರ/ಎದೆಯ್ಗೊಳಲ್ಲಿದೆ

ಹೇಳೆ ಮಣ್ಣು ಕಣ್ಣು/ನೆಲದ ಮಕ್ಕಳ ಶೋಕ ಶ್ಲೋಕವಾಗಲೆ ಇಲ್ಲ/ವಲ್ಮೀಕದೊಳಗೆಲ್ಲ ಮರಣ ದಯನ. ಈ ಪ್ರಾಚೀನ ನೋವಿನೊಡನೆ ಇಂದಿನ ಅಜಾತ ಶಿಶುವಿನ ಅಹವಾಲು ಸಹಾ ಈ ಕವಿಯನ್ನು ಪೀಡಿಸುತ್ತದೆ.

ಯಕ್ಷಾಂದೋಳ. ಅಮೃತ ಸೋಮೇಶ್ವರ, ಅಮೃತ ಸೋಮೇಶ್ವರ ಅಭಿನಂದನಾ ಸಮಿತಿ, ಕಲಾ ಗಂಗೋತ್ರಿ, ಸೋಮೇಶ್ವರ, ಉಚ್ಚಿಲ (ದ. ಕ.) ಪುಟ ೨೦೦, ರೂ. ೭೫/- ೧೯೯೫.

ತುಳುಭಾಷೆ, ಜಾನಪದ ಸಾಹಿತ್ಯ, ಯಕ್ಷಗಾನ ಕೃತಿರಚನೆ, ಇತ್ಯಾದಿ ಕ್ಷೇತ್ರಗಳಲ್ಲಿ ಬಹಳಷ್ಟು ಕೆಲಸ ಮಾಡಿರುವ ಅಮೃತರು ಮೂರು ದಶಕಗಳ ಅವಧಿಯಲ್ಲಿ ಯಕ್ಷಗಾನ ಕುರಿತಂತೆ ಬರೆದ ೧೯ ಲೇಖನಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಯಕ್ಷಗಾನ ಶಬ್ದದ ಮೂಲದಿಂದ ಹಿಡಿದು, ಅದರ ಧಾರ್ಮಿಕ ಪ್ರಭಾವ, ಕುಣಿತ, ಹಾಡುಗಾರಿಕೆ, ಸಾಹಿತ್ಯ, ಇತರೆ ಪ್ರಬೇಧಗಳಲ್ಲಿರಬಹುದಾದ ಸಮಾನ ಅಂಶಗಳ ಬಗ್ಗೆಯೂ ಅವರು ಚರ್ಚಿಸುತ್ತಾರೆ. ಯಕ್ಷಗಾನದ ಪ್ರಭಾವ ನಮ್ಮ ದಿನ ನಿತ್ಯದ ಜೀವನ ಮೇಲೆ ಮಾತ್ರವಲ್ಲದೆ ಕನ್ನಡ ಕವಿತೆ, ಕತೆ, ಕಾದಂಬರಿಗಳ ಮೇಲೆ ಕೂಡ ಯಾವ ಪ್ರಮಾಣದಲ್ಲಿ ಆಗಿದೆ ಎಂಬುದನ್ನು ವಿಶ್ಲೇಷಿಸುವ ಲೇಖನ ಕುತೂಹಲಕರವಾಗಿದೆ.

ನೆನಪಿನ ರಂಗಸ್ಥಳ ಕೆರೆಮನೆ ಶಿವರಾಮ ಹೆಗಡೆ (ಆತ್ಮಕಥನ) ನಿರೂಪಣೆ:ಡಾ. ಜಿ. ಎಸ್. ಭಟ್. ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ (ಶಿವಮೊಗ್ಗ ಜಿಲ್ಲೆ) ಪುಟ ೧೩೬, ರೂ. ೭೫/- ೧೯೯೫.

ಕರ್ನಾಟಕದ ಒಂದೆರಡು ಜಿಲ್ಲೆಗಳಲ್ಲಿ ಗಿರಕಿ ಹೊಡೆಯುತ್ತಿದ್ದ ಯಕ್ಷಗಾನವನ್ನು ಕರ್ನಾಟಕದಾದ್ಯಂತ ಮಾತ್ರವಲ್ಲ ರಾಷ್ಟ್ರದಾದ್ಯಂತ ತೆಗೆದುಕೊಂಡು ಹೋದ ಪ್ರಥಮರಲ್ಲಿ ಕೆರೆಮನೆಯವರು ಪ್ರಮುಖರು. ಸುಮಾರು ಒಂಬತ್ತು ಪರಿಚ್ಛೇದಗಳಲ್ಲಿ ಕೆರೆಮನೆಯವರು ತಮ್ಮ ಬದುಕು ಯಕ್ಷಗಾನಕ್ಕಾಗಿ ತೆರೆದುಕೊಂಡ ಪರಿಯನ್ನು ತಿಳಿಸುತ್ತ, ಸಂದುಹೋದ ಕಾಲದ ಹಲವಾರು ವ್ಯಕ್ತಿಗಳನ್ನು ಪರಿಸ್ಥಿತಿಯನ್ನು ನಮ್ಮೆದುರು ಸರಳವಾಗಿ ನೇರವಾಗಿ ಯಾವುದೇ ಮುಚ್ಚುಮರೆ ಇಲ್ಲದೆ ಬಿಚ್ಚಿ ಇಡುತ್ತಾರೆ. ಕೆರೆಮನೆಯವರ ಈ ಆತ್ಮಕತೆ ಕೇವಲ ಅವರ ಆತ್ಮಕತೆ ಮಾತ್ರ ಆಗುವುದಿಲ್ಲ ೧೯೦೮ ರಿಂದ ೧೯೯೨ರ ವರೆಗೆ ಯಕ್ಷಗಾನ ಕಲೆಗೆ ದೊರೆತ ಮಾನ ಸನ್ಮಾನ ಅವಮಾನಗಳ ಕತೆಯೂ ಆಗುತ್ತದೆ. ವಾಹನದ ಚಾಲಕನಾಗಿ ಜೀವನ ಆರಂಭಿಸಿದ ಪೋರ ಕೊನೆಗೆ ಯಕ್ಷಗಾನ ಮೇಳದ ಯಜಮಾನನಾಗಿ ರಾಷ್ಟ್ರ ಮನ್ನಣೆ ಪಡೆಯುತ್ತಾನೆ. ಕೆರೆಮನೆಯವರ ಜೀವನ ಚಿತ್ರವನ್ನ ಪುಸ್ತಕ ರೂಪದಲ್ಲಿ ತಂದ ಡಾ. ಜಿ. ಎಸ್. ಭಟ್ಟರ ಪ್ರಯತ್ನ ಸಾರ್ಥಕವಾದದ್ದು.

ತುಡಿತ (ಕ[illegible]ನ ಸಂಕಲನ) ಡಾ. ರಾಚಪ್ಪ, ಎಚ್. ವಿಜಯಲಕ್ಷ್ಮಿ ಪುಸ್ತಕ ಪ್ರಕಾಶನ, ಇರಕಲ ಗಡ (ರಾಯಚೂರು ಜಿಲ್ಲೆ) ಪುಟ ೮೮, ರೂ. ೨೫/- ೧೯೯೫

"ನಿಲ್ಲು ಗಗನವೇ ಎಲ್ಲಿ ಓಡುವೆ/ಜಲವನ್ನೊತ್ತು ಬರುವೆಯಾ"/ ಈ ಕವನ ಸಂಕಲನದ ಮೊದಲ ಕವನ ಸ್ಥಿತಿಯ ಮೊದಲ ಎರಡು ಸಾಲುಗಳು ತಟ್ಟನೆ ಜಿ. ಎಸ್. ಎಸ್. ಅವರ ನಿಲ್ಲಿ ಮೋಡಗಳೇ ಎಲ್ಲಿ ಹೋಗುವಿರಿ ನಾಲ್ಕು ಹನಿಯ ಚೆಲ್ಲಿ ಎಂಬ ಸಾಲುಗಳನ್ನು ನೆನಪಿಗೆ ತಂದು ಕೊಟ್ಟು ಮೊದಲಿಗೇನೆ ನಿರುತ್ಸಾಹಕ್ಕೆ ಕಾರಣವಾಗುತ್ತದೆ. ಮುಂದು ಕೂಡ ಈ ಹಿಂದೆ ಓದಿದ ಕೆಲ ಸಾಲುಗಳು, ಧಾಟಿಗಳು ಮತ್ತೆ ಮತ್ತೆ ನಮ್ಮನ್ನು ಎದುರುಗೊಳ್ಳುತ್ತವೆ. ಕವಿಗಳೇ ಹೇಳಿಕೊಂಡಿರುವ ಹಾಗೆ ಈ ಕವನಗಳೆಲ್ಲ ೮೦ರ ದಶಕದಲ್ಲಿ ರಚನೆಗೊಂಡವು. ಹೀಗಾಗಿಯೋ ಏನೋ ಭಾವುಕತೆ, ಆದರ್ಶ, ವೇದನೆ, ವಿರಹ, ಪ್ರೀತಿ ಇವುಗಳ ಸುತ್ತ ಕವಿರಿಂಗಣ ಹಾಕುವುದು ಕಾಣುತ್ತದೆ.

ಕತ್ತಲು ಕರಗುವ ಸಮಯ, ಆನಂದ ಹಣಮಂತಗಡ, ಕಾವ್ಯಶ್ರೀ ಪ್ರಕಾಶನ, ಬೈಲಹೊಂಗಲ, ಪುಟ ೪೮, ರೂ. ೨೦/- ೧೯೯೫

ಇಲ್ಲಿಯ ಮೂರು ಕವಿತೆಗಳು ಸ್ತ್ರೀಯರನ್ನು ಕುರಿತು ಬರೆದವುಗಳು. ಪುರುಷ ಪ್ರಧಾನವಾದ ಸಮಾಜ ಸ್ತ್ರೀಯರನ್ನು ಹೇಗೆ ನಡೆಸಿಕೊಂಡು ಬಂದಿದೆ? "ತೀರಾ ಇತ್ತೀಚೆಗೆ ಏಸುಕ್ರಿಸ್ತನನ್ನು ಶಿಲುಭೆಗೇರಿಸಿದ್ದೇವೆ/ನಿನ್ನನ್ನು ಮಾತ್ರ ಹುಟ್ಟಿದಾಗಿನಿಂದ/ಈ ಜಗದಾದಿಯಿಂದ ಇಂದಿನವರೆಗೂ/ಮುಳ್ಳು ಬೇಲಿಯಲ್ಲಿ ಕಟ್ಟಿ ಪ್ರತಿದಿನ/ಕೊಲ್ಲುತ್ತೇವೆ " ಇದೆ ಬಗೆಯ ಸ್ಪಷ್ಟ ವಿಚಾರಗಳನ್ನು ಬದುಕು ದೇಶದ ಬಗ್ಗೆ ಕವನಗಳ ಮೂಲಕ ವ್ಯಕ್ತ ಪಡಿಸುವ ಆನಂದ ಅವರು ಎಷ್ಟೋ ಬಾರಿ ಭಾವಕ್ಕಿಂತ ಶಬ್ದಗಳ ಜಾಲದಲ್ಲಿ ಕಳೆದುಹೋಗಿ ಬಿಡುತ್ತಾರೇನೋ ಅನ್ನುವಂತಹಾ ಗಾಬರಿಯನ್ನೂ ಹುಟ್ಟಿಸಿಬಿಡುತ್ತಾರೆ.

ಏಕಾಂಗಿ ನಾಗವ್ವ (ಕವನ ಸಂಕಲನ) ಹೊರೆಯಾಲ ದೊರೆಸ್ವಾಮಿ, ೧೩೪೫, ೪ನೇ ಅಡ್ಡ ರಸ್ತೆ, ಕೃಷ್ಣಮೂರ್ತಿಪುರಂ ಮೈಸೂರು-೪ ಪುಟ ೧೦೦, ರೂ. ೨೨ /-೧೯೯೫

ಕನ್ನಡ ಕಾವ್ಯ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿರುವ ದೊರೆಸ್ವಾಮಿಯವರಿಗೆ ಕಾವ್ಯದ ಇಡೀ ಕದ್ನೋಣದ ಬಗ್ಗೆ ಆರೋಗ್ಯಕರವಾದ ತುಡಿತಗಳಿವೆ. ಹಿಗೆಂದೇ ಅವರು ಎಲ್ಲಿಯೂ ಈ ಕೆಲಸವನ್ನು ಹಗುರವಾಗಿ ತೆಗೆದುಕೊಳ್ಳುವುದಿಲ್ಲ ಅನ್ನುವುದಕ್ಕೆ ಈ ಸಂಕಲನದಲ್ಲಿ ಹಲವು ಉದಾಹರಣೆಗಳು ದೊರೆಯುತ್ತವೆ. ನಾ ಕಂಡ ನಕ್ಕು, ಸಂಜೆ ಸಾವಿರ ಮನಸು, ಯಾರು ಕೊಂಡರೋ ಅವರು? ಏಕಾಂಗಿ ನಾಗವ್ವ, ಯಾವ ಭಾವಕೆ....ಮೊದಲಾದ ಕವಿತೆಗಳಲ್ಲಿ ಕವಿಗೆ ಸಹಜವಾಗಿ ಇರಬೇಕಾದ ಅಭಿವ್ಯಕ್ತಿಯ ಕುಸುರಿ ತನ ಎದ್ದು ಕಾಣುತ್ತದೆ.

ಛಂದಸ್ಸಾರ ಎನ್. ಜಿ. ಪಟವರ್ಧನ, ಹಂಸಧ್ವನಿ ಪ್ರಕಾಶನ, ಶಿವಾಜಿ ನಗರ, ಉಜಿರೆ (ದ.ಕ.)
ಪುಟ ೧೩೦, ರೂ. ೩೦/- ೧೯೯೪ (ಪರಿಷ್ಕೃತ)

"ನಿಯಮ ಬದ್ಧವಾದ ಕಾವ್ಯವನ್ನು ಓದಿ ಮುಕ್ತ ಛಂದಸ್ಸಿಗೆ ಬಂದಾಗ ಕಾವ್ಯದ ಜೀವಾಳವಾದ ಲಯದ ಯೋಜನೆ ಹಾಗೂ ಅವಶ್ಯಕತೆಗಳ ಅರಿವು ಆಗದೇ ಇರದು" ಎಂದು ಹೇಳುತ್ತಾರೆ ಪಟವರ್ಧನ. ಈ ಉದ್ದೇಶವನ್ನು ಇರಿಸಿಕೊಂಡು ಬರೆಯಲಾದ ಛಂದಸ್ಸಾರ ಗ್ರಂಥದಲ್ಲಿ ಲೇಖಕರು ಛಂದಸ್ಸಿನ ಉಗಮ, ನಿಷ್ಪತ್ತಿಯಿಂದ ಹಿಡಿದು, ಲಘು, ಗುರು, ಪ್ರಾಸ, ಯತಿ, ವರ್ಣ, ಸಾಂಗತ್ಯ, ಸಾನೆಟ್, ಪ್ರಗಾಥ ಹೀಗೆ ಕಾವ್ಯ ಕದ್ದೋಣಕ್ಕೆ ಸಂಬಂಧಪಟ್ಟ ಹಲವು ಹತ್ತು ವಿಷಯಗಳ ಬಗ್ಗೆ ಚರ್ಚಿಸುತ್ತಾರೆ. ಈ ಎಲ್ಲ ವಿಷಯಗಳು ಸರಳವಾಗಿ ವಿವರವಾಗಿ ಒಂದೆಡೆಯಲ್ಲಿ ಸಂಗ್ರಹೀತವಾಗಿ ದೊರಕಿರುವುದು ಕಾವ್ಯಾಭ್ಯಾಸಿಗಳಿಗೆ ಅನುಕೂಲಕರವಾಗಿದೆ.

ಮಾನವ ಪದಶಾಸ್ತ್ರ ಎಚ್. ಎಸ್. ಹಿರೇಮಠ, ಸಮತಾ ಪ್ರಕಾಶನ, ಕೆ/ಆರ್. ಬಿ. ವೆಂಕೋಬ, ಮಂದಿಯಪ್ಪನ ಗುಡಿ ಹತ್ತಿರ, ಹೊಸಪೇಟೆ ೫೮೩ ೨೦೧, ಪುಟ ೧೩೨, ರೂ. ೪೦/-

ಇಂಗ್ಲಿಷಿನ ಫೋಕ್ ಅನ್ನುವ ಪದಕ್ಕೆ ಸಂವಾದಿಯಾಗಿ ಜನಪದವೆಂದೂ ಫೋಕ್ ಲೋರ ಅನ್ನುವುದರ ಬದಲು ಜಾನಪದವೆಂದೂ ಉಪಯೋಗಿಸಬಹುದೆಂಬ ನಿರ್ಣಯವೂ ಆಯಿತು. ಆದರೆ ಯಾವುದೇ ವಿಷಯದಲ್ಲಿ ಇದೇ ಕೊನೆಯ ಮಾತು ಎಂಬುದು ಇಲ್ಲವಾದುದರಿಂದ ಹಿರೇಮಠರು ಅವರ ಮಾನವ ಪದಶಾಸ್ತ್ರದಲ್ಲಿ ಜನಪದ-ಜಾನಪದ ಎಂದು ಕರೆಯುವುದನ್ನೇ ಪ್ರಶ್ನಿಸಿ ಈ ಎರಡೂ ಶಬ್ದಗಳು ಸ್ಪಷ್ಟ ಕಲ್ಪನೆಯನ್ನು ನೀಡುವುದಿಲ್ಲವಾದ್ದರಿಂದ ಇವುಗಳ ಬದಲು ಮಾನವ ಪದ ಎಂದೇ ಕರೆದು, ಇದನ್ನೊಂದು ಶಾಸ್ತ್ರದಂತೆ ಅಧ್ಯಯನ ಮಾಡುವ ಅವಶ್ಯಕತೆ ಇದೆ ಎಂದು ಹೇಳುತ್ತಾರೆ.

ಗಾಂಧೀ ನಗರ (ನಾಟಕ) ಹೂಲಿಶೇಖರ, ಆಕೃತಿ ಕ್ರಿಯೇಟರ್ಸ್ ಅಂಬಿಕಾನಗರ, (ಉ.ಕ.)
ಪುಟ ೮೨, ರೂ. ೨೫/- ೧೯೯೫

ಕನ್ನಡದ ನೆಲ ಬೇರೆ ಪ್ರಾಂತೀಯರ ಆಕ್ರಮಣಕ್ಕೆ ಒಳಗಾಗಿ ನಶಿಸುತ್ತಿರುವುದು ಹಳೆಯ ವಿಷಯವಾದರೂ ಇದು ಉಪೇಕ್ಷೆ ಮಾಡುವಂತಹ ವಿಷಯವಲ್ಲ. ಈಗಾಗಲೇ ಹಲವು ನಾಟಕಗಳ ಮೂಲಕ ರಂಗಾಸಕ್ತರಲ್ಲಿ ಆಸಕ್ತಿ ಮೂಡಿಸಿರುವ ಹೂಲಿಶೇಖರ್ ಗಾಂಧೀನಗರದಲ್ಲಿ ಈ ವಿಷಯವನ್ನೇ ಚರ್ಚೆಗೆ ಎತ್ತಿಕೊಂಡಿದ್ದಾರೆ. ಜೊತೆಗೆ ಬಡತನ, ವಂಚನೆ, ಪುಂಡಾಟ ಇತ್ಯಾದಿಗಳ ಪ್ರಸ್ತಾಪವೂ ಇದೆ. ವಿಷಯಗಳು ಹಸಿಹಸಿಯಾಗಿ ಬರುವುದರಿಂದ ನಾಟಕ ಒಂದು ಘೋಷಣೆಯಾಗಿ ಕಿವಿಗೆ ಬೀಳುತ್ತದೆಯಲ್ಲದೆ ಒಳಗೆ ಇಳಿದು ನಮ್ಮನ್ನು ಎಲ್ಲಿಯೂ ತಟ್ಟುವುದಿಲ್ಲ.

ಕೆ.ಎಸ್.ಎಫ್.ಸಿ.: ಮೂರು ದಶಕಗಳಿಂದಲೂ ಕೈಗಾರಿಕಾ ಪ್ರಗತಿ ಚಕ್ರದ ಚಾಲನೆಯಲ್ಲಿ ನಿರತ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಾಧನೆಯ ಅಪ್ರತಿಮ ಚಿತ್ರಣ ಕಾರ್ಯ ಪ್ರಗತಿಯ ಅಂಕಿ ಅಂಶಗಳಿಂದ ಮನದಟ್ಟಾಗುತ್ತದೆ. ಆದರೆ ಬರೀ ಅಂಕಿ ಅಂಶಗಳಿಂದಲೇ ವಿದಿತವಾಗದಿರುವ ಮತ್ತೊಂದು ಮಹತ್ತರ ಅಂಶ ಸಂಸ್ಥೆಗೆ ಕರ್ನಾಟಕದ ಕೈಗಾರಿಕಾ ಬೆಳವಣಿಗೆ ಕುರಿತಂತೆ ಇರುವ ವಿಶೇಷ ಕಾಳಜಿ.

ಸಂಸ್ಥೆಯ ಅಸ್ತಿತ್ವ ಹಾಗೂ ಸಾಧನೆ ಗ್ರಾಮೀಣ ಗುಡಿ ಕೈಗಾರಿಕೆಯಿಂದ ಆಧುನಿಕ ತಂತ್ರಜ್ಞಾನವನ್ನೊಳಗೊಂಡ ಸಣ್ಣ ಹಾಗೂ ಮಧ್ಯಮ ಗಾತ್ರದ ಸಾವಿರಾರು ಉದ್ಯಮಗಳ ಸ್ಥಾಪನೆಯಿಂದಾಗಿ ರಾಜ್ಯಾದ್ಯಂತ ಪ್ರತಿಫಲಿತವಾಗಿದೆ. ಈ ಕ್ಷೇತ್ರಗಳ ಯಾವುದೇ ಅರ್ಹ ಉದ್ದಿಮೆಗೆ ನೆರವು ನೀಡಲು ಸಂಸ್ಥೆ ವಿವಿಧ ಯೋಜನೆಗಳನ್ನು ರೂಪಿಸಿದೆ.

ಸಂಸ್ಥೆ ೧೯೫೯ ರಲ್ಲಿ ಸ್ಥಾಪನೆಯಾದಂದಿನಿಂದ ರಾಜ್ಯದಲ್ಲಿ ೧,೦೫,೮೬೩ ಘಟಕಗಳಿಗೆ ೨,೮೦೦ ಕೋಟಿ ರೂಗಳ ನೆರವು ಕಲ್ಪಿಸಿದೆ. ವರ್ಷದಿಂದ ವರ್ಷಕ್ಕೆ ತನ್ನ ಕಾರ್ಯಕ್ಷೇತ್ರದಲ್ಲಿ ನಿರಂತರ ಹಾಗೂ ನಿಶ್ಚಿತ ಪ್ರಗತಿ ಸಾಧಿಸಿ ರಾಜ್ಯ ಹಣಕಾಸು ಸಂಸ್ಥೆಗಳ ಪೈಕಿ ಮುಂಚೂಣಿಯಲ್ಲಿರುವ ಹೆಗ್ಗಳಿಕೆ ಈ ಸಂಸ್ಥೆಯದು.

ಕೈಗಾರಿಕಾ ಬೆಳವಣಿಗೆಗೆ ವಿಪುಲ ಅವಕಾಶ ಹೊಂದಿರುವ ಕರ್ನಾಟಕ ರಾಜ್ಯದಲ್ಲಿ ಸಂಸ್ಥೆ ಕ್ಷಿಪ್ರ ಹಾಗೂ ಸಮತೋಲನ ಕೈಗಾರಿಕಾ ಬೆಳವಣಿಗೆಗೆ ಸೂಕ್ತವಾಗಿ ಸ್ಪಂದಿಸುತ್ತಿದೆ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ಪ್ರಧಾನ ಕಛೇರಿ
೧/೧, ತಿಮ್ಮಯ್ಯ ರಸ್ತೆ
ಬೆಂಗಳೂರು - ೫೬೦ ೦೫೨
ದೂರವಾಣಿ : ೨೨೬೩೩೨೨

ಕೆ.ಎಸ್.ಎಫ್.ಸಿ. : ರಾಷ್ಟ್ರದಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಹಣಕಾಸು ಸಂಸ್ಥೆ

ಕರ್ನಾಟಕ ವಿದ್ಯುತ್ ನಿಗಮವು ಆಕರ್ಷಕ ಬಡ್ಡಿದರದಲ್ಲಿ ಠೇವಣಿಗಳನ್ನು ಸ್ವೀಕರಿಸುತ್ತದೆ.

ಎ. ಸಂಚಿತ ಠೇವಣಿ ಯೋಜನೆ :

ಅವಧಿ	ಠೇವಣಿ ಮೊತ್ತ	ಅವಧಿ ಮುಗಿದ ಮೇಲೆ
೩ ವರ್ಷಗಳು	ರೂ. ೧೦೦೦/-	ರೂ. ೧೫೧೮/-

ಬಿ. ನಿಶ್ಚಿತ ಠೇವಣಿ ಯೋಜನೆ:

ಅವಧಿ	ಒಂದು ವರ್ಷಕ್ಕೆ ಬಡ್ಡಿ	
	ಕನಿಷ್ಠ ರೂ. ೧೦೦೦೦/- ತಿಂಗಳಿಗೆ	ಕನಿಷ್ಠ ರೂ. ೫೦೦೦/- ತ್ರೈಮಾಸಿಕ
೧ ವರ್ಷ		೧೩.೦೦%
೨. ವರ್ಷಗಳು	೧೩.೦೦%	೧೩. ೫೦ %
೩. ವರ್ಷಗಳು	೧೩.೫೦%	೧೪.೦೦%

ಹೆಚ್ಚುವರಿ ಹಣವನ್ನು ಕನಿಷ್ಠ ರೂ. ೧೦೦೦ ಗಣಕಗಳಲ್ಲಿ ತೊಡಗಿಸಬೇಕು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಕರ್ನಾಟಕ ವಿದ್ಯುತ್ ನಿಗಮ ನಿಯಮಿತ,
೮೨, ಶಕ್ತಿಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು -೫೬೦ ೦೦೧,
ದೂರವಾಣಿ :೨೨೫೮೯೪೦, ೨೨೫೬೫೬೮

೨೫ ವರ್ಷಗಳ ಸೇವೆಯಲ್ಲಿ ನಿಮಗಾಗಿ

ಶುಭಾಶಯಗಳೊಂದಿಗೆ

ಅಕ್ಷರ ಪ್ರಿಂಟರ್ಸ್

ಆಫ್‌ಸೆಟ್ ಮತ್ತು ಲೆಟರ್‌ಪ್ರೆಸ್ ಮುದ್ರಕರು

❋

54 / 4, ಪೋಲೀಸ್ ಸ್ಟೇಷನ್ ರಸ್ತೆ, ಬಸವನಗುಡಿ
ಬೆಂಗಳೂರು - 560 004
ದೂರವಾಣಿ - 624082

ERG

Engineering Resources Group

42/1, Palmgrove Road, Austin Town, Bangalore - 560 047.
Karnataka, India.

phone : 564338 — Telex : (0845) 3269 ERGIN

Cable: EEARGEE — Fax : (080) 5561992/5280706

E-MAIL(INTERNET): erg % dartnet @ uunet.uu.net

PROJECT IMPLEMENTATION FROM CONCEPT TO COMMISSIONING

AQUACULTURE	ENGINEERING PROJECTS
BIOTECH AND FOOD	DESIGN ENGINEERING
SITE MANAGEMENT	PROJECT MANAGEMENT

WE UNDERTAKE TOTAL PROJECT MANAGEMENT

ನಮ್ಮ ಶುಭಾಶಯಗಳು

❄

ದಿ. ಸಂಡೂರ್ ಮ್ಯಾಂಗನೀಸ್ ಅಂಡ್ ಐರನ್ ಓರ್ಸ್ ಲಿಮಿಟೆಡ್

(ನೊಂದಾಯಿತ ಕಛೇರಿ : ಲಕ್ಷ್ಮೀಪುರ, ಸಂಡೂರ್ - ೫೮೩ ೧೧೯)

೫೬, ಪ್ಯಾಲೇಸ್ ರಸ್ತೆ, ಬೆಂಗಳೂರು - ೫೬೦ ೦೨೫

ಐಸಿಡಿಎಸ್ ಲಿ.
ಬೃಹತ್ ಎನಿಸುವಷ್ಟು ಬೆಳವಣಿಗೆ.
ಆದರೂ ಸೇವೆಯಲ್ಲಿ ವಿನಮ್ರ.



380 ಕೋಟಿ ರೂಪಾಯಿಗಳ
ತಳಹದಿ **280** ಕೋಟಿ ರೂ.ಗಳ
ದಾಟಿದ ಸಾರ್ವಜನಿಕ ಠೇವಣಿ.

ಈ ಆರ್ಥಿಕ ಸಾಧನೆಗಳು
ಹಾಗೂ ವಿಶಿಷ್ಟ. ಬೃಹ
ಯಶಸ್ಸು ಗಳಿಸಿದರೂ ಐಸಿ
ಸ್ನೇಹಮಯಿಯಾಗಿದೆ. ಪ್ರ
ದಾರ ಮತ್ತು ಗ್ರಾಹಕರೊ
ಮುಖದ ಸೇವೆಯ ಮುಂದ
ಈ ಮಧುರ ಅನುಭ
ಕೊಳ್ಳಿ.

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಅತಿ ಸಮೀ
ಕಚೇರಿಯನ್ನು ಸಂಪರ್ಕಿಸಿರಿ.

ಐಸಿಡಿ
ಲಿಮಿ

ಠೇವಣಿ • ಕಾರು ಫೈನಾನ್ಸ್ • ಹೈಯರ್ ಪರ್ಚೆ

ರಿಜಿಸ್ಟರ್ಡ್ ಕಚೇರಿ: ಸಿಂಡಿಕೇಟ್ ಹೌಸ್, ಮಣಿಪ

ADSYNDICATE MANIPAL

ಐಸಿಡಿಎಸ್ ಲಿ. – ಮುಂದುವರಿಯುತ್ತಿರುವ ವಿಶ್ವಾಸಾರ್ಹ ಸಂಪ್ರದ

ನಿಮ್ಮ ಅತಿ ಸಮೀಪದ ಕಚೇರಿಗಳು: • ಮಣಿಪಾಲ ☎ 71121 (14 ಲೈನ್ಸ್) • ಬೆಂಗಳೂರು ☎ 5584166, 558416
441076 • ಮೈಸೂರು ☎ 25068 • ಶಿವಮೊಗ್ಗ ☎ 44280 • ಕಾರ್ಕಳ ☎ 21270 • ಮೂಡಬಿದಿರೆ ☎ 60035 •
• ಕುಂದಾಪುರ ☎ 21167 • ಶಿರ್ವ ☎ 54541 • ಹೊನ್ನಾವರ ☎ 56086 • ಸುಳ್ಯ ☎ 21101 • ಕಾಸರಗೋಡ್ ☎

ಗ್ರಾಮೀಣ ಸಮೂಹ ಜೀವ ವಿಮಾ ಯೋಜನೆ

ನಮ್ಮ ಪ್ರಧಾನಮಂತ್ರಿಯವರು ಆಗಸ್ಟ್ 15, 1995 ರಿಂದ ಜಾರಿಗೆ ಬರುವಂತೆ ಘೋಷಿಸಿರುವ ಗ್ರಾಮೀಣ ಸಮೂಹ ವಿಮಾ ಯೋಜನೆ ಗಳು ಗ್ರಾಮೀಣ ಜನತೆಯಲ್ಲಿ ಹೊಸ ಬೆಳಕನ್ನು ಮೂಡಿಸಿವೆ. ಭಾರತೀಯ ಜೀವ ವಿಮಾ ನಿಗಮವು ಗ್ರಾಮ ಪಂಚಾಯಿತಿಗಳ ಮುಖಾಂತರ ಇವುಗಳನ್ನು ಕಾರ್ಯಗತಗೊಳಿಸುತ್ತದೆ.

ಈ ಯೋಜನೆಗಳ ಉದ್ದೇಶಗಳು : ಗ್ರಾಮೀಣ ಜನತೆಗೆ ಸುಲಭ ಮತ್ತು ಸರಳ ರೀತಿಯಲ್ಲಿ ಜೀವ ವಿಮಾ ರಕ್ಷಣೆಯನ್ನು ನೀಡುವುದಾಗಿದೆ.

ಈ ಯೋಜನೆಗಳಲ್ಲಿ ಸೇರ್ಪಡೆಯಾಗಲು ಬೇಕಾದ ಅರ್ಹತೆಗಳು :

1. ಸಾಮಾನ್ಯ ಯೋಜನೆ : ಇದು 20 ಅಥವಾ ಮೇಲ್ಪಟ್ಟು ಆದರೆ 50 ವರ್ಷದೊಳಗಿನ ಎಲ್ಲ ವ್ಯಕ್ತಿಗಳಿಗೆ ಅನ್ವಯಿಸುತ್ತದೆ.

2. ರಿಯಾಯತಿ ಯೋಜನೆ : ಇದೂ ಸಹ 20 ಅಥವಾ ಮೇಲ್ಪಟ್ಟು ಆದರೆ ಗರಿಷ್ಠ 50 ವರ್ಷ ವಯಸ್ಸಿನ ವ್ಯಕ್ತಿಗಳಿಗಾಗಿ ರೂಪಿಸಿರುವ ಯೋಜನೆ. ಆದರೆ, ಬಡತನದ ರೇಖೆಯ ಕೆಳಗಿರುವ ಕುಟುಂಬದ ಒಬ್ಬ ಸದಸ್ಯನಿ / ಳಿಗೆ ಮಾತ್ರ ಈ ಸೌಲಭ್ಯವಿರುತ್ತದೆ.

ವಿಮಾ ಕಂತು ಎಷ್ಟು ಮತ್ತು ಯಾರು ಕಟ್ಟಬೇಕು ?

20 ವರ್ಷ ಮೇಲ್ಪಟ್ಟು 40 ವಯಸ್ಸಿನವರೆಗಿನ ವ್ಯಕ್ತಿಗೆ ವಾರ್ಷಿಕ ಪ್ರೀಮಿಯಂ ರೂ. 60 /-

40 ವರ್ಷಕ್ಕೆ ಮೇಲ್ಪಟ್ಟು 50 ವರ್ಷದೊಳಗಿನ ವ್ಯಕ್ತಿಗೆ ವಾರ್ಷಿಕ ಪ್ರೀಮಿಯಂ ರೂ. 70 /-

ಯೋಜನೆಗೆ ಸೇರುವ ದಿನಾಂಕದಂದು ಇರುವ ವಯಸ್ಸನ್ನು ಈ ಯೋಜನೆಗೆ ಪ್ರಾರಂಭಿಕ ವಯಸ್ಸನ್ನಾಗಿ ಪರಿಗಣಿಸಲಾಗುವುದು.

ಸಾಮಾನ್ಯ ಯೋಜನೆಯಡಿಯಲ್ಲಿ ಕಂತುಗಳನ್ನು ಪೂರ್ತಿಯಾಗಿ ಸದಸ್ಯರೇ ಕಟ್ಟಬೇಕು.

ರಿಯಾಯತಿ ಯೋಜನೆಯಲ್ಲಿ ಪ್ರೀಮಿಯಂ ಕಂತಿನ ಅರ್ಧ ಭಾಗವನ್ನು ಸದಸ್ಯರು ಕಟ್ಟಬೇಕು ಹಾಗೂ ಉಳಿದರ್ಧ ಭಾಗವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮವಾಗಿ ಭರಿಸುತ್ತವೆ.

ವಿಮಾ ರಕ್ಷಣೆಯ ಮುಕ್ತಾಯ ಹಾಗೂ ಸೌಲಭ್ಯಗಳು :

ಸದಸ್ಯರು ವಿಮೆಯ ಕಂತನ್ನು ಕಟ್ಟದೇ ಇದ್ದಾಗ ಅಥವಾ ಸದಸ್ಯರು 60 ವರ್ಷ ವಯಸ್ಸು ತಲುಪಿದಾಗ ವಿಮಾ ರಕ್ಷಣೆ ಮುಕ್ತಾಯವಾಗುವುದು.

60 ವರ್ಷದೊಳಗೆ ಸಾವು ಸಂಭವಿಸಿದ್ದಲ್ಲಿ ಸದಸ್ಯನ /ಳ ಕುಟುಂಬದ ನಾಮ ನಿರ್ದೇಶಿತ ವ್ಯಕ್ತಿಗೆ ನಿರ್ಧಾರಿತ ಮೊತ್ತವಾದ ರೂ. 5,000/- (ರೂ. ಐದು ಸಾವಿರ ಮಾತ್ರ) ನೀಡಲಾಗುವುದು.

ನಿರ್ಧಾರಿತ ಮೊತ್ತ ಪಡೆಯುವ ಬಗೆ : ಮರಣಹೊಂದಿದ ಸದಸ್ಯನ/ಳ ನಾಮ ನಿರ್ದೇಶಿತ ವ್ಯಕ್ತಿಯು ಅಧಿಕೃತ ಮರಣ ದಾಖಲೆ ಪತ್ರವನ್ನು ಹಕ್ಕಿನ ಪತ್ರದ ಜೊತೆಗೆ ಗ್ರಾಮ ಪಂಚಾಯಿತಿಗೆ ಸಲ್ಲಿಸಬೇಕು. ಅವರು ಜಿಲ್ಲೆಯ ನಿರ್ದೇಶಿತ ಜೀವ ವಿಮಾ ಶಾಖೆಗೆ ತಲುಪಿಸುವರು. ನಿಗಮವು ನಿಗದಿತ ವಿಮಾ ಮೊತ್ತವನ್ನು ಡಿಮ್ಯಾಂಡ್ ಡ್ರಾಫ್ಟ್ ಅಥವಾ ಮನಿ ಆರ್ಡರ್ ಮೂಲಕ ಫಲಾನುಭವಿ ವ್ಯಕ್ತಿಗೆ ನೇರವಾಗಿ ತಲುಪಿಸುವುದು.

ಈ ಯೋಜನೆಗಳನ್ನು ಗ್ರಾಮ ಪಂಚಾಯಿತಿಗಳ ಮೂಲಕ ಕಾರ್ಯಗತಗೊಳಿಸಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಸಮೀಪದ ಜೀವ ವಿಮಾ ಕಾರ್ಯಾಲಯವನ್ನು ಸಂಪರ್ಕಿಸಿ.

ಗ್ರಾಮೀಣ ಸಮೂಹ ಜೀವ ವಿಮಾ ಯೋಜನೆ,

ಭಾರತೀಯ ಜೀವ ವಿಮಾ ನಿಗಮ, ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯಾಲಯ, ಹೈದರಾಬಾದ್

ಶುಭಾಶಯಗಳೊಂದಿಗೆ



ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್

೭೫, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು -೫೬೦ ೦೦೧

ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಸುಧಾ, ಮಯೂರ
ಪತ್ರಿಕೆಗಳ ಮಾಲೀಕರು.